ಮಂಗಳೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರ ಕುರಿತು ಒಂದು ಸಮಾಜಶಾಸ್ತ್ರೀಯ ಅಧ್ಯಯನ

ಸಮಾಜಶಾಸ್ತ್ರ ವಿಷಯದಲ್ಲಿ ಪಿ. ಎಚ್. ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧದ ಸಾರಲೇಖ

ಸಂಶೋಧಕರು:

ರಾಜೇಶ್ವರಿ ಎಂ

ಮಾರ್ಗದರ್ಶಕರು

ಡಾ. ಗೋವಿಂದರಾಜು ಬಿ. ಎಂ

ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ,

ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ

ಸಮಾಜಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ – 574199

ಕರ್ನಾಟಕ, ಭಾರತ

2019

<u>ದೃಢೀಕರಣ ಪತ್ರ</u>

"ಮಂಗಳೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರ ಕುರಿತು ಒಂದು ಸಮಾಜಶಾಸ್ತ್ರೀಯ ಅಧ್ಯಯನ" ಎಂಬ ಪಿ.ಹೆಚ್.ಡಿ ಮಹಾಪ್ರಬಂಧವನ್ನು **ಡಾ. ಗೋವಿಂದರಾಜು ಬಿ. ಎಂ,** ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಇದನ್ನು ಈ ಹಿಂದೆ ಯಾವುದೇ ಪದವಿ ಅಥವಾ ಡಿಪ್ಲೋಮಾ ಗಳಿಸಲು ಬೇರೆ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಅಥವಾ ಇತರ ಸಂಶೋಧನಾ ಸಂಸ್ಥೆಗಳಿಗೆ ಭಾಗಶಃವಾಗಿಯಾಗಲಿ, ಪೂರ್ಣವಾಗಿಯಾಗಲಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ಮಂಗಳಗಂಗೋತ್ರಿ

ದಿನಾಂಕ:

ರಾಜೇಶ್ವರಿ ಎಂ

ಸಂಶೋಧನ ವಿದ್ಯಾರ್ಥಿನಿ, ಸಮಾಜಶಾಸ್ತ್ರ ವಿಭಾಗ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ.

ಪರಿವಿಡಿ

ಶೀರ್ಷಿಕೆ		ಪುಟ ಸಂಖ್ಯೆ
	ಅಭ್ಯರ್ಥಿಯ ದೃಢೀಕರಣ ಪತ್ರ	i
	ಪರಿವಿಡಿ	ii
I.	ಪೀಠಿಕೆ	1-3
II.	ಸಾಹಿತ್ಯ ಪರಮಾರ್ಶೆ	4
III.	ಸಂಶೋಧನಾ ವಿಧಾನ	4-9
	1. ಅಧ್ಯಯನದ ಉದ್ದೇಶಗಳು	
	2. ಅಧ್ಯಯನದ ಪ್ರಾಮುಖ್ಯತೆ	
	3. ಸಂಶೋಧನಾ ವ್ಯಾಪ್ತಿ	
	4. ಸಂಶೋಧನಾ ವಿಧಾನ ಮತ್ತು ಮಾಹಿತಿ ಸಂಗ್ರಹಣೆ	
	5. ಅಧ್ಯಯನದ ಇತಿಮಿತಿಗಳು	
IV.	ಪ್ರಮುಖ ಸಂಶೋಧನಾ ಫಲಿತಾಂಶಗಳು	9-33
	1. ಐತಿಹಾಸಿಕ ಹಿನ್ನಲೆ	
	2. ಸಾಮಾಜಿಕ–ಆರ್ಥಿಕ ಸ್ಥಿತಿಗತಿ	
	3. ಪೌರಕಾರ್ಮಿಕರ ಶೈಕ್ಷಣಿಕ ಸ್ಥಿತಿಗತಿ	
	4. ಪೌರಕಾರ್ಮಿಕರ ಆರೋಗ್ಯದ ಸ್ಥಿತಿಗತಿ	
	5. ಪೌರಕಾರ್ಮಿಕರಿಗೆ ದೊರಕುವ ಸರ್ಕಾರದ ಸೌಲಭ್ಯಗಳು	
V.	ಉಪಸಂಹಾರ ಮತ್ತು ಸಲಹೆಗಳು	34-37
VI.	ಪರಾಮರ್ಶನ ಗ್ರಂಥಗಳು	38-42

ಪೀಠಿಕೆ

ಭಾರತದಲ್ಲಿ ಜಾತಿಯು ಒಂದು ಮೂಲಭೂತ ಅಂಶವಾಗಿದ್ದು ಸಾಮಾಜಿಕ ಚಲನೆಯಲ್ಲಿ ಪ್ರಮುಖವಾದ ಪಾತ್ರವಹಿಸಿದೆ, ಸಾಮಾಜಿಕ ಸ್ತರ ವಿನ್ಯಾಸದಲ್ಲಿ ಪ್ರತಿಯೊಂದು ಜಾತಿಯು ತನ್ನದೇ ಆದ ಸಾಂಪ್ರದಾಯಿಕ ಉದ್ಯೋಗ, ಕಾರ್ಯಚಟುವಟಿಕೆಗಳನ್ನು ಒಳಗೊಂಡಿದ್ದು, ವ್ಯಕ್ತಿಯ ಸಾಮಾಜಿಕ-ಆರ್ಥಿಕ ಸ್ಥಿತಿಗತಿಯನ್ನು ತೀರ್ಮಾನಿಸುವಲ್ಲಿ ಜಾತಿಯು ಪ್ರಮುಖ ಪಾತ್ರ ನಿರ್ವಹಿಸುತ್ತಾ ಬಂದಿರುವುದನ್ನು ಕಾಣಬಹುದು. ಜಾತಿಯು ಉದ್ಯೋಗಗಳನ್ನು ಸೃಷ್ಟಿಸಿತೋ ಉದ್ಯೋಗದಿಂದಲೇ ಜಾತಿ ಹುಟ್ಟಿಕೊಂಡಿತೋ ಎಂಬ ವಿಷಯದ ಕುರಿತು ನಿಖರವಾದ ತೀರ್ಮಾನಕ್ಕೆ ಬರುವುದು ಬಹಳ ಕಷ್ಟಕರವಾದ ವಿಚಾರವಾಗಿದೆ. ಕೆಲವು ಸಿದ್ಧಾಂತಗಾರರು ಉದ್ಯೋಗದಿಂದ ಜಾತಿ ಉಗಮಗೊಂಡಿತು ಎಂಬುದಾಗಿ ವಾದಿಸಿದರೆ, ಇನ್ನೂ ಕೆಲವರ ವಾದದ ಪ್ರಕಾರ ಜಾತಿಯಿಂದಲೇ ಉದ್ಯೋಗಗಳು ಉಗಮಗೊಂಡವು ಎಂಬ ಮಾತು ಇದೆ. ಉದಾಹರಣೆಗೆ ದೈವಿಕ ಸಿದ್ಧಾಂತದ ಪ್ರಕಾರ ಬ್ರಹ್ಮ ಸೃಷ್ಟಿಸಿದ ದೈವೀ ಸಿದ್ಧಾಂತದತ ಪ್ರಕಾರ ಬ್ರಹ್ಮನ ಬಾಯಿಯಿಂದ ಜನ್ಮ ತಾಳಿದವ ಬೋಧನೆ, ಪಾಠ ಪ್ರವಚನಕ್ಕೆ ಸಂಬಧಿಸಿದ ಕೆಲಸ ಕಾರ್ಯಗಳನ್ನು ಮಾಡುವಂತವನಾದರೆ, ಬ್ರಹ್ಮನ ತೋಳು ಅಥವಾ ಬುಜದಿಂದ ಜನ್ಮ ಪಡೆದಂತವನು ಯುದ್ದ ಮಾಡುವ, ರಕ್ಷಣೆ ನೀಡುವ ಕೆಲಸ ಕಾರ್ಯಗಳಲ್ಲಿ ತೊಡಗುವಂತವನು ಆಗುತ್ತಾರೆ, ಅದೇ ವ್ಯಾಪಾರ ಮುಂತಾದ ಕೆಲಸಗಳನ್ನು ಮಾಡುವಂತವನು ಬ್ರಹ್ಮನ ಹೊಟ್ಟೆಯಿಂದ ಜನ್ಮ ತಾಳಿದ ಕೊನೆಯದಾಗಿ ಶೂದ್ರ ಬ್ರಹ್ಮನ ಪಾದದಿಂದ ಜನನ ಪಡೆದುದರಿಂದ ಉಳಿದಂತ ಎಲ್ಲಾ ಕೆಲಸಗಳನ್ನು ಈತ ಮಾಡುವಂತವನು ಆಗಿರುತ್ತಾರೆ. ಈ ರೀತಿಯ ಹಲವಾರು ಸಿದ್ಧಾಂತಗಳನ್ನು ಓದುತ್ತಾ ಸಾಗಿದರೆ ಜಾತಿ ಮತ್ತು ಉದ್ಯೋಗಗಳ ನಡುವೆ ಇರುವ ಸಂಬಂಧಗಳ ಬಗ್ಗೆ ತೀರ್ಮಾನಕ್ಕೆ ಬರುವಂತದ್ದು ಬಹಳ ಕಷ್ಟಕರವಾದ ವಿಚಾರವಾಗಿದೆ. ಆದರೆ ಮಲ ಹೊರುವ, ನಗರದಲ್ಲಿ ಬಿದ್ದುಕೊಂಡಿರುವ ಕಸ, ಕಡಿ, ನೀರು, ಮತ್ತಿತ್ತರ ಮಲೀನ ವಸ್ತುಗಳನ್ನು ಗುಡಿಸಿ, ತೊಳೆದು, ಶುದ್ದೀಕರಿಸುವ, ಕೆಲಸವನ್ನು ಸಾಮಾನ್ಯವಾಗಿ ಜಾತಿಯಲ್ಲಿ ಅಥವಾ ಹಿಂದೂ ಜಾತಿಯ ಸ್ತರದಲ್ಲಿ ಅತ್ಯಂತ ಕೆಳಸ್ತರದಲ್ಲಿ ಇರುವ ಜಾತಿಯ ಜನರೇ ಮಾಡಿಕೊಂಡು ಬರುತ್ತಿರುವುದನ್ನು ಕಾಣಬಹುದು.

ನಗರ ಪ್ರದೇಶಗಳಲ್ಲಿ ಚರಂಡಿ ಶೌಚಾಲಯಗಳನ್ನು ಒಳಗೊಂಡಂತೆ ಶುದ್ದವಾಗಿಡುವ ಕೆಲಸವನ್ನು ಮಾಡುವಂತ ಶ್ರಮಿಕರನ್ನು ಮೂಲತಃವಾಗಿ ಸ್ಕ್ಯಾವೆಂಜರ್ಸ್ ಎಂಬ ಆಂಗ್ಲ ಭಾಷೆಯಲ್ಲಿ ಕರೆಯಲಾಗುತ್ತಿತ್ತು. ಸ್ಕ್ಯಾವೆಂಜರ್ಸ್ ಎಂಬ ಶಬ್ದವು ಹಲವಾರು ರೀತಿಯಲ್ಲಿ ಟೀಕೆಗೆ ಒಳಗಾಗಿದ್ದರಿಂದ ಆ ಕೆಲಸ ಮಾಡುವವರನ್ನು ಸ್ಯಾನಿಟರಿ ವರ್ಕರ್ಸ್ ಎಂಬುದಾಗಿ ಕರೆಯಲಾಯಿತು. ಅದೇ ರೀತಿ ನಗರ ಪಾಲಿಕೆಯ ವ್ಯಾಪ್ತಿಗಳಲ್ಲಿ ಕೆಲಸ ಮಾಡುವವರನ್ನು ಪೌರ ಕಾರ್ಮಿಕರು ಎಂಬುದಾಗಿಯೂ ಕರೆಯಲಾಗುತ್ತದೆ. ಅವರನ್ನು ಯಾವುದೇ ಹೆಸರುಗಳಿಂದ

ಕರೆದರೂ ಅವರು ಮಾಡುವಂತಹ ಉದ್ಯೋಗ ಮಾತ್ರ ಒಂದೇ ತೆರೆನಾದದ್ದು. ಇದರ ಜೊತೆಗೆ ಈ ರೀತಿಯ ಕೆಲಸ ಮಾಡುವಂತ ಶ್ರಮಿಕರನ್ನು ಹಲವಾರು ಹೆಸರುಗಳಿಂದ ಕರೆಯಲಾಗುವುದು. ಕರ್ನಾಟಕದಲ್ಲಿ ಇವರನ್ನು ಜಾಡಮಾಲಿಗಳು ಎಂದು ಕರೆದರೆ, ಇತರ ರಾಜ್ಯಗಳಲ್ಲಿ ಇವರನ್ನು ಭಂಗಿಗಳು ಎಂಬುದಾಗಿ ಕರೆಯುತ್ತಾರೆ.

ಭಾರತದಲ್ಲಿ ಮ್ಯಾನುವಲ್ ಸ್ಕ್ಯಾವೆಂಜಿಂಗ್ ಒಂದು ಜಾತಿಯಾಧಾರಿತ ವೃತ್ತಿಯಾಗಿದ್ದು ಸಮಾಜದಲ್ಲಿ ಇದೊಂದು ಸಾಮಾಜಿಕ, ಆರ್ಥಿಕ, ಮಾನಸಿಕ ಮತ್ತು ರಾಜಕೀಯವಾಗಿ ಬಹಿಷ್ಕಾರಕ್ಕೆ ಒಳಗಾದ ಪದ್ಧತಿಯಾಗಿದೆ. ಈ ಪದ್ಧತಿಯು 1952 ಮತ್ತು 1993 ರಲ್ಲಿ ಎರಡು ಬಾರಿ ನಿಷೇಧಿಸಲ್ಪಟ್ಟದ್ದರೂ ಸಹ ದೇಶದ ಹಲವು ಭಾಗಗಳಲ್ಲಿ ಬೇರೆ ಬೇರೆ ಹೆಸರಿನಲ್ಲಿ ಈ ವೃತ್ತಿಯು ರೂಢಿಯಲ್ಲಿದೆ. ಆಧುನಿಕ ಭಾರತದಲ್ಲಿ ಈ ವೃತ್ತಿಯಲ್ಲಿ ತೊಡಗಿರುವವರನ್ನು ಪೌರಕಾರ್ಮಿಕರು ಎಂದು ಕರೆಯಲಾಗಿದೆ. ಭಾರತೀಯ ಸಮಾಜದಲ್ಲಿ ಪೌರಕಾರ್ಮಿಕರು ಸ್ಪರ್ಶಿತ ಸಮುದಾಯದಲ್ಲಿ ಮಾತ್ರವಲ್ಲದೆ ಅಸ್ಪ್ರಶ್ಯ ಸಮುದಾಯದಲ್ಲಿ ಕೂಡ ಅತ್ಯಂತ ಬಹಿಷ್ಕಾರ ಮತ್ತು ಶೋಷಣೆಗೆ ಒಳಗಾದ ಸಮುದಾಯವಾಗಿದೆ. ಆದ್ದರಿಂದ ಅವರು ಹಿಂದೂ ಜಾತಿ ವ್ಯವಸ್ಥೆಯಲ್ಲಿ ತಾರತಮ್ಯ ಮತ್ತು ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡುತ್ತಾರೆ. ಭಾರತದ ಎಲ್ಲಾ ನಗರಗಳಲ್ಲಿ ಬೀದಿ ಗುಡಿಸುವುದು, ಮನುಷ್ಯನ ಮಲಹೊರುವ ವೃತ್ತಿಯಲ್ಲಿ ಇವರು ತೊಡಗಿರುವುದನ್ನು ಕಾಣಬಹುದಾಗಿದೆ. ಈ ವೃತ್ತಿಯಲ್ಲಿ ಪುರುಷರಿಗಿಂತ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿರುತ್ತಾರೆ. ಇದನ್ನು ಹೊರತುಪಡಿಸಿ ಹಲವು ರಿತಿಯ ಸಾಮಾಜಿಕ ಕಳಂಕವನ್ನು ಎದುರಿಸುವುದರ ಜೊತೆಗೆ ಕಡಿಮೆ ಆದಾಯ ಮತ್ತು ಅತ್ಯಂತ ಅಪಾಯಕಾರಿ ಪರಿಸರದಲ್ಲಿ ದುಡಿಯುವುದರಿಂದ ಹಲವು ರೀತಿಯ ಅನಾರೋಗ್ಯಕ್ಕೆ ತುತ್ತಾಗುತ್ತಾರೆ.

'ಪುರ' ಎಂದರೆ ನಗರೀಕರಣಗೊಂಡ ಬಹು ದೊಡ್ಡದಾದ ಆಧುನಿಕ ಗ್ರಾಮಗಳಾಗಿವೆ. ಪುರದೊಳಗೆ ನೈರ್ಮಲ್ಯದ ವೃತ್ತಿಗಳಾದ ಹಾದಿ- ಬೀದಿಗಳನ್ನು ಸ್ವಚ್ಛಗೊಳಿಸುವುದು, ಕೊಳಚೆಗಳನ್ನು ನಿರ್ಮೂಲನೆ ಮಾಡುವುದು, ಶೌಚಾಲಯಗಳನ್ನು ಪರಿಶುದ್ಧಗೊಳಿಸುವುದು ಹಾಗೂ ಸಾಂಪ್ರದಾಯಿಕವಾಗಿ ಸತ್ತ ಪ್ರಾಣಿಗಳನ್ನು ಊರಿಂದ ಹೊರಗೆ ಸಾಗಿಸುವ ವೃತ್ತಿಅವಲಂಬಿತರೆನ್ನಬಹುದು. ಭಾರತದಲ್ಲಿ ಈ ವತ್ತಿಗಳನ್ನು ವರ್ಣ ಸಮಾಜದ ಕೊನೆಯ ಪಂಕ್ತಿಯಲ್ಲಿರುವ ಶೋಷಿತರೆ ಸಕ್ರೀಯವಾಗಿ ಮಾಡುತ್ತಲೆ ಬಂದಿದ್ದಾರೆ. ದೇಶಾದ್ಯಂತ ಇಂತಹ ವೃತ್ತಿ ಅವಲಂಬಿತರನ್ನು ಸವರ್ಣೀಯರಿಗೆ ಒಪ್ಪುವಂತಹ ಇಚ್ಛಾನುಸಾರದ ಅನ್ವರ್ಥ ನಾಮಗಳಿಂದ ಗುರುತಿಸಲ್ಪಡುತ್ತಿದ್ದಾರೆ. ಜಾತಿಯ ನಾಮಗಳಲ್ಲಿ ಎಷ್ಟೇ ಭಿನ್ನತೆ ಕಾಣಿಸಿಕೊಂಡರೂ ವೃತ್ತಿಯೊಳಗಿನ ಅರ್ಥ ಮಾತ್ರ ಒಂದೇ ಆಗಿದೆ. ಆದರೆ ಈ ವೃತ್ತಿದಾರರಿಂದ ಸೇವೆ ಪಡೆದ ನಾಗರೀಕರು ಮಾತ್ರವೇ ಅವರಿಗೆ ಭಿನ್ನ ಭೇದಗಳನ್ನು ಎಣಿಸುತ್ತಾರೆ. ಅವರು ಮಾಡುವ ಈ ನಿಕೃಷ್ಟ ಸಾಮಾಜಿಕ ಸೇವೆಗಳಿಂದ ವೃತ್ತಿ ಸಂಬಂಧಿ ಗೌರವಾದರಗಳು ಕಿಂಚಿತ್ತು ಈ ಸಮಾಜದಿಂದ ದೊರೆತಿಲ್ಲ. ಕಾಶ್ಮೀರದಿಂದ ಕನ್ಯಾಕುಮಾರಿಯ ತನಕ ಚದುರಿದ್ದಾರೆ. ಉದಾ:- ತಮಿಳುನಾಡಿನಲ್ಲಿ ಅರುಂಧತಿಯಾರ್ ಎನಿಸಿಕೊಂಡವರು ಕರ್ನಾಟಕ, ಆಂಧ್ರ ಮತ್ತು ಕೇರಳದಲ್ಲಿ

ಮಾದಿಗರಾಗುತ್ತಾರೆ. ಮಹಾರಾಷ್ಟ್ರದಲ್ಲಿ ರೋಹಿದಾಸ್ – ಬಾಂಬಿಗಳಾದವರು ರಾಜಸ್ಥಾನ ಮತ್ತು ಗುಜರಾತ್‌ಗಳಲ್ಲಿ ಮೆಥಾರ್ ಅಥವಾ ಭಂಗೀಗಳಾಗುತ್ತಾರೆ. ಉತ್ತರ ಪ್ರದೇಶ, ಮಧ್ಯಪ್ರದೇಶ, ಹರಿಯಾಣ, ದೆಹಲಿ ಪಂಜಾಬ್ ಹಾಗೂ ಇತರೆ ಉತ್ತರ ರಾಜ್ಯಗಳಲ್ಲಿ ಸಾಮಾನ್ಯವಾಗಿ ಬಲ್ಮೀಕಿ ಅಥವಾ ಭಂಗೀಗಳೆನಿಸಿಕೊಳ್ಳುವರು. ಇವುಗಳೆಲ್ಲವೂ ಒಂದು ಮೂಲ ಅಸ್ಪೃಶ್ಯ ಚಮ್ಮಾರ ಜಾತಿಯೊಂದರಿಂದ ಕವಲೊಡೆದಿರುವ ಉಪಜಾತಿಗಳಾಗಿವೆ(ಬ್ರಿಗ್ಸ್–1905).

ಅಧ್ಯಯನ ಕ್ಷೇತ್ರದ ಭೌಗೋಳಿಕ ಚಿತ್ರಣ

ಮಂಗಳೂರು ನಗರವು ಬೆಂಗಳೂರು, ಮೈಸೂರು ಹುಬ್ಬಳ್ಳಿ ಧಾರವಾಡದ ಜೊತೆಗೆ ಕರ್ನಾಟಕದ ನಾಲ್ಕನೇಯ ಮಹಾನಗರ ಪಾಲಿಕೆಯಲ್ಲೊಂದಾಗಿದೆ. ಇದು 2001 ರಲ್ಲಿ ಚದರ ಕಿ.ಮೀ.ಗೆ 4003 ವ್ಯಕ್ತಿಗಳ ಸಾಂದ್ರತೆಯೊಂದಿಗೆ ಹೆಚ್ಚು ದಟ್ಟವಾದ ನಗರ ಪ್ರದೇಶವಾಗಿದೆ. ನಗರದಲ್ಲಿ 60 ವಾರ್ಡ್‌ಗಳಿದ್ದು ಒಟ್ಟು 6 ಲಕ್ಷ ಜನಸಂಖ್ಯೆಯನ್ನು ಹೊಂದಿದ್ದು. 2001 ರಲ್ಲಿ ಮಂಗಳೂರು ನಿಗಮವು 4, 65,426 ಜನಸಂಖ್ಯೆಯ ಬೆಳವಣಿಗೆಗೆ ಸಾಕ್ಷಿಯಾಗಿದೆ ಮತ್ತು ನಗರದಲ್ಲಿ 85,085 ಕುಟುಂಬಗಳಿದ್ದು ಕೊಳೆಗೇರಿ ಜನಸಂಖ್ಯೆಯು 6,698 ಇದ್ದು 18 ಸಮುದಾಯಗಳಿದ್ದವು, 198 ವಾಣಿಜ್ಯ ಸಂಸ್ಥೆಗಳನ್ನೊಳಗೊಂಡಿದ್ದು 20,000 ಕೈಗಾರಿಕಾ ಸಂಸ್ಥೆಗಳಿವೆ. ಸ್ಕ್ಯಾವೆಂಜಿಂಗ್ ಗೆ ಸಂಬಂಧಿಸಿದಂತೆ ಮಂಗಳೂರು ಕೂಡ ಹೊರತಾಗಿರಲಿಲ್ಲ 1000ಕ್ಕು ಹೆಚ್ಚು ಪೌರಕಾರ್ಮಿಕರು ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಮಂಗಳೂರು ಮಹಾನಗರಪಾಲಿಕೆಯಲ್ಲಿ ಪೌರಕಾರ್ಮಿಕ ವೃತ್ತಿಯಲ್ಲಿ ತೊಡಗಿರುವ ಹಲವು ಜಾತಿ ಸಮುದಾಯವನ್ನು ಕಾಣಬಹುದಾಗಿದೆ ಅವುಗಳಲ್ಲಿ ಕೊರಗ, ಆದಿದ್ರಾವಿಡ, ಮಾದರ, ಅಂಬಿಗ, ಲಂಬಾಣಿ, ಮರಾಠಿನಾಯ್ಕ, ಲಿಂಗಾಯತ ಇತ್ಯಾದಿ., ಆದರೆ ಕೊರಗ, ಆದಿದ್ರಾವಿಡ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರು ಜಾತಿ ಶ್ರೇಣಿಯಲ್ಲಿ ಅತ್ಯಂತ ಕೆಳಸ್ಥರದಲ್ಲಿದ್ದು ಅವರು ಮಾಡುವಂತಹ ಕಲುಷಿತ ವೃತ್ತಿ ಅವರನ್ನು ಸಾಮಾಜಿಕ ಶ್ರೇಣಿ ವ್ಯವಸ್ಥೆಯಲ್ಲಿ ಕೆಲಸ್ಥರದಲ್ಲಿ ಇರುವ ಹಾಗೆ ಮಾಡಿದೆ. ಅವರು ಮಾಡುವಂತಹ ಕಲುಷಿತ ವೃತ್ತಿಯಾದ ರಸ್ತೆ ಬದಿ ಗುಡಿಸುವುದು, ಶೌಚಾಲಯ ಶುದ್ಧೀಕರಣ, ಒಳಚರಂಡಿ ಶುದ್ಧೀಕರಣವು ಅವರ ಆರೋಗ್ಯದ ಮೇಲೆ ಬಲವಾದ ಪ್ರಭಾವವನ್ನು ಬೀರಿದೆ. ಅವರ ಚಿಂತಾಜನಕ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯಿಂದಾಗಿ ಅವರಿಗೆ ಆಗುವಂತಹ ಸಾಮಾಜಿಕ ಅನ್ಯಾಯದ ವಿರುದ್ಧ ಹೊರಾಡಲು ಕಷ್ಟ ಸಾಧ್ಯವಾಗಿದೆ.

ಪೌರಕಾರ್ಮಿಕರ ಸಮಸ್ಯೆಗಳಿಗೆ ಸಂಬಂಧಿಸಿದ ಹೆಚ್ಚಿನ ವರದಿಗಳಲ್ಲಿ ಅವರ ಸಾಮಾಜಿಕ ಆರ್ಥಿಕ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ನಿಖರವಾದ ಮಾಹಿತಿಯನ್ನು ಉಲ್ಲೇಖಿಸಿರುವುದಿಲ್ಲ, ಆದ್ದರಿಂದ ಮಂಗಳೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರು ಎದುರಿಸುತ್ತಿರುವ ಸಾಮಾಜಿಕ ಅರ್ಥಿಕ ಆರೋಗ್ಯದ ಸಮಸ್ಯೆಯ

ಸಂಕ್ಷಿಪ್ತ ಅಧ್ಯಯನದ ಅವಶ್ಯಕತೆ ಇರುವುದರಿಂದ, ಈ ಅಧ್ಯಯನವು ಪೌರಕಾರ್ಮಿಕರ ಸಾಮಾಜಿಕ ಆರ್ಥಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಮಹತ್ವ ಪೂರ್ಣವಾಗಿದೆ.

ಸಾಹಿತ್ಯ ಪರಮಾರ್ಶೆ:

ಶ್ಯಾಮ್‌ಲಾಲ್(1984). ಇವರ ಪುಸ್ತಕದಲ್ಲಿ ರಾಜಸ್ಥಾನದ ಭಂಗೀ ಅಥವಾ ಸ್ಕ್ಯಾವೆಂಜರ್ ಜಾತಿಯನ್ನು ಗಮನದಲ್ಲಿಟ್ಟುಕೊಂಡು ಅವರ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸ್ಥಿತಿಗತಿಯ ಕುರಿತಾದ ಒಂದು ಅಧ್ಯಯನ ನಡೆಸಲಾಗಿದೆ. **ಚೂಂಡಾವತ್, ಪಿ ಎಸ್ (1986) ರವರು ತಮ್ಮ** ಅಧ್ಯಯನದಲ್ಲಿ ಅಸ್ಪೃಶ್ಯ ಯುವಕರ ಸಮಸ್ಯೆಗಳು ಮತ್ತು ಜೀವನಕ್ಕೆ ಸಂಬಧಿಸಿದ ವಿಚಾರಗಳ ಬಗ್ಗೆ ಅವರ ಅಭಿಪ್ರಾಯವನ್ನು ತಿಳಿಯಾಲಾಗಿದೆ. **ಪೊದ್ದರ್ ಭಗೀರಥ್(2001) ರವರು ತಮ್ಮ ಅಧ್ಯಯನದಲ್ಲಿ** ಹೇಳುವಂತೆ, ಸಾಮಾನ್ಯವಾಗಿ ಜಾಡಮಾಲಿಗಳ ಸಾಮಾಜಿಕ ಆರ್ಥಿಕ ಸ್ಥಿತಿಗತಿ ಮತ್ತು ಜೀವನಶೈಲಿ ವಿಶಿಷ್ಟವಾಗಿ ಮಹಿಳೆ ಮತ್ತು ಮಕ್ಕಳ ಪರಿಸ್ಥಿತಿ ತೃಪ್ತಿದಾಯಕವಾಗಿರುವುದಿಲ್ಲ. ಅವರು ಸಮಾಜದ ಎಲ್ಲಾ ಭಾಗದಲ್ಲಿಯೂ ಕೆಲಸ್ತರದಲ್ಲಿದ್ದು ಅವಮಾನ ಮತ್ತು ದಬ್ಬಾಳಿಕೆಯ ವಸ್ತುವಾಗಿದ್ದಾರೆ. ಸಮಾಜದಲ್ಲಿ ಇವರು ಕೆಳಸ್ಥಾನಮಾನವನ್ನು ಹೊಂದಿದ್ದು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಶೋಷಣೆಗೆ ಒಳಗಾಗಿದ್ದಾರೆ. ಶ್ರೀವಾಸ್ತವ ಬಿ. ಎನ್ (1997), ರಾಮಸ್ವಾಮಿ ಗೀತಾ (2005), ರಿಪೋರ್ಟ್ ಆಫ್ ದಿ ಕಮಿಶನರ್ ಫೊರ್ ಶೆಡ್ಯುಲ್ಡ್ ಕಾಸ್ಟ್ ಆಂಡ್ ಶೆಡ್ಯುಲ್ಡ್ ಟ್ರೈಬ್ (1979-80 ಮತ್ತು 1980-81), ಕುಮಾರ್ ಸಿಂಗ್ ಮತ್ತು ಝಿಯಾವುದ್ದಿನ್ (2009), ಸತೀಶ್ ಕುಮಾರ್ ಕೆ. ಎಮ್ (2012), ಮಹಮ್ಮದ್ ಪೀರ್ (1992), ಯೊಗೇಶ್ ಡಿ ಸಬ್ಡೆ, ಸಂಜಯ್ ಪಿ ಝುದ್ಪಿ (2008), ಮುಂತಾದವರ ಅಧ್ಯಯನಗಳನ್ನು ವಿಮರ್ಶಿಸಲಾಗಿದೆ.

ಸಂಶೋಧನಾ ವಿಧಾನ

ಪ್ರಸ್ತುತ ಅಧ್ಯಯನವು ಮಂಗಳೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರ ಸಾಮಾಜಿಕ–ಆರ್ಥಿಕ ಸ್ಥಿತಿಗತಿಯನ್ನು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ. ಮಂಗಳೂರು ಮಹಾನಗರವು ಕರ್ನಾಟಕ ರಾಜ್ಯದಲ್ಲಿ ಅತೀ ವೇಗದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಕೈಗಾರಿಕಾ ಮಹಾನಗರಗಳಲ್ಲಿ ಒಂದಾಗಿದ್ದು, ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಪ್ರಮುಖವಾದುದಾಗಿದೆ. ರಾಜ್ಯದ ಇತರ ಮಹಾನಗರ ಪಾಲಿಕೆಗಳಂತೆ ಮಂಗಳೂರು ಮಹಾನಗರ ಪಾಲಿಕೆಯು ತನ್ನ ಆಡಳಿತ ವ್ಯಾಪ್ತಿಯ ಸ್ವಚ್ಛತೆಯ ಕಾರ್ಯವನ್ನು ಪೌರಕಾರ್ಮಿಕರ ಮೂಲಕ ದಶಕಗಳಿಂದ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ.

ಪೌರಕಾರ್ಮಿಕರು ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳದೇ ಹೊರಗುಳಿಯಲ್ಪಟ್ಟ ಶ್ರಮಿಕ ವರ್ಗವಾಗಿದ್ದು. ಅವರ ಸಾಮಾಜಿಕ– ಆರ್ಥಿಕ ಸ್ಥಿತಿಗತಿಗಳ ಕುರಿತಂತೆ ಅಧ್ಯಯನ ನಡೆಸುವಲ್ಲಿ, ಸರಕಾರ, ಸಂಘ ಸಂಸ್ಥೆಗಳು ಹೆಚ್ಚಿನ ಆಸಕ್ತಿಯನ್ನು ತೋರಿಸಿಲ್ಲ, ಆದ್ದರಿಂದ ನಗರದ ಶುಚಿತ್ವಕ್ಕಾಗಿ ಹಗಲಿರುಳು ಶ್ರಮಿಸುವ ಇಲ್ಲಿನ ಪೌರಕಾರ್ಮಿಕರ ಕುರಿತಂತೆ ಈವರೆಗೆ ಯಾವುದೇ ಅಧ್ಯಯನಗಳು ನಡೆಯದೇ ಇರುವುದರಿಂದ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಪ್ರಸ್ತುತ ಸಂಶೋಧನೆಯ ಧ್ಯೇಯೋದ್ದೇಶಗಳು

1. ಮಂಗಳೂರು ಮಹಾನಗರ ಪಾಲಿಕೆಯಲ್ಲಿನ ಪೌರಕಾರ್ಮಿಕರ ಐತಿಹಾಸಿಕ ಹಿನ್ನಲೆಯನ್ನು ತಿಳಿಯುವುದು
2. ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ವಿಶ್ಲೇಷಿಸುವುದು
3. ಪೌರಕಾರ್ಮಿಕರ ಆರೋಗ್ಯದ ಸ್ಥಿತಿಗತಿಯನ್ನು ಅಧ್ಯಯನ ಮಾಡುವುದು
4. ಶೈಕ್ಷಣಿಕ ಸ್ಥಾನಮಾನವನ್ನು ತಿಳಿಯುವುದು
5. ಪೌರಕಾರ್ಮಿಕರ ಸಾಮಾಜಿಕ ಅಂತರ್ಗತ ನೀತಿ (Inclusive policies) ಮತ್ತು ಯೋಜನೆಗಳು ಮತ್ತು ಅವರ ಭವಿಷ್ಯದ ಆಕಾಂಕ್ಷೆಯನ್ನು ತಿಳಿಯುವುದು.

ಸಂಶೋಧನಾ ವ್ಯಾಪ್ತಿ

ಪೌರಕಾರ್ಮಿಕರ ಕುರಿತಾಗಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಅಧ್ಯಯನಗಳು ನಡೆದರು ಸಹ ಅವುಗಳು ಭಿನ್ನರೀತಿಯಾದಾಗಿದ್ದು, ಕೆಲವು ಅಧ್ಯಯನಗಳು ಪೌರಕಾರ್ಮಿಕರ ಸ್ಥಿತಿಗತಿಯನ್ನು ಕೇಂದ್ರೀಕರಿಸಿದರೆ, ಇನ್ನು ಕೆಲವು ಅಧ್ಯಯನಗಳು ಪೌರಕಾರ್ಮಿಕರ ಮತ್ತು ಕಾರ್ಮಿಕ ವರ್ಗದ ಸಂಬಂಧವನ್ನು ಕುರಿತಾಗಿದೆ. ಆದರೆ ಯಾವುದೇ ಅಧ್ಯಯನಗಳು ಕೂಡ ಪೌರಕಾರ್ಮಿಕರ ಬಗ್ಗೆ ವಿವರವಾದ ಸಮಾಜಶಾಸ್ತ್ರೀಯ ತಿಳುವಳಿಕೆಯನ್ನು ನೀಡಿರುವುದಿಲ್ಲ, ಅದರಲ್ಲೂ ಮಂಗಳೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರ ಜೀವನದ ಸ್ಥಿತಿಗತಿಯ ವಿವರಣಾತ್ಮಕ ಅಧ್ಯಯನ ನಡೆದಿರುವುದಿಲ್ಲ ಹೀಗಾಗಿ ಪ್ರಸಕ್ತ ಅಧ್ಯಯನವು ಪೌರಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ವಿವರವಾಗಿ ಅಧ್ಯಯನ ಮಾಡಲು ಪ್ರಯತ್ನಿಸಿದೆ.

ಕರ್ನಾಟಕ ರಾಜ್ಯದ, ದಕ್ಷಿಣ ಕನ್ನಡ ಜಿಲ್ಲೆಯ, ಮಂಗಳೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರ ಕಾರ್ಯಚಟುವಟಿಕೆಗಳು, ಸಮಸ್ಯೆಗಳನ್ನು ಅರಿತುಕೊಳ್ಳುವ ದೃಷ್ಟಿಯಿಂದ ಮಾತ್ರವಲ್ಲದೆ ಪೌರಕಾರ್ಮಿಕರ ಸಾಮಾಜಿಕ ಮತ್ತುಆರ್ಥಿಕ ಕ್ಷೇತ್ರಗಳಲ್ಲಿ ಸಂಭವಿಸುತ್ತಿರುವ ಬದಲಾವಣೆಗಳು ಮತ್ತು ಕೌಟುಂಬಿಕ ಸ್ಥಿತಿಗತಿ, ಶಿಕ್ಷಣ, ಆರೋಗ್ಯ ಮುಂತಾದ ಅಂಶಗಳ ಅಧ್ಯಯನ ಮಾಡುವುದಾಗಿದೆ.

ಸಂಶೋಧನಾ ವಿಧಾನ ಮತ್ತು ಮಾಹಿತಿ ಸಂಗ್ರಹಣೆ

ಈ ಅದ್ಯಯನವು ವಿವರಣಾತ್ಮಕ ಸ್ವರೂಪದಲ್ಲಿದ್ದು, ಪ್ರಾಥಮಿಕ ಮತ್ತು ಮಾಧ್ಯಮಿಕ ದತ್ತಾಂಶದ ಸಂಯೋಜನೆಯನ್ನು ಆಧರಿಸಿರುತ್ತದೆ. ಸಮಗ್ರ ಮತ್ತು ರಚನಾತ್ಮಕ ಪ್ರಶ್ನಾವಳಿಯ ಸಹಾಯದಿಂದ ಸಂದರ್ಶನದ ಮುಖಾಂತರ ಪೌರಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗೆ ಸಂಬಂಧಿಸಿದಂತೆ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಶ್ನಾವಳಿಯು ಮಾಹಿತಿದಾರರ ಆದಾಯ, ಉದ್ಯೋಗ, ಆರೋಗ್ಯ ಮತ್ತು ಸಾಮಾಜಿಕ–ಆರ್ಥಿಕ ಅಂಶಗಳನ್ನು ಒಳಗೊಂಡಿದೆ.

ಕೋಷ್ಟಕ – 4.1: ಮಂಗಳೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರ ಒಟ್ಟು ಸಂಖ್ಯೆ

ಕ್ರ.ಸಂ	ಲಿಂಗ	ಒಟ್ಟು ಪೌರಕಾರ್ಮಿಕರು	ಅಧ್ಯಯನಕ್ಕೆ ಆಯ್ಕೆ ಮಾಡಿದ ನಮೂನೆ	ಶೇಕಡವಾರು
1	ಪುರುಷ	663	153	51
2	ಮಹಿಳೆ	637	147	49
ಒಟ್ಟು		1300	300	

ಮಾಹಿತಿಯ ಮೂಲ: ಮಂಗಳೂರು ಮಹಾನಗರ ಪಾಲಿಕೆ ವರದಿ 2015

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲು ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಆಯ್ಕೆ ಮಾಡಲಾಗಿದೆ. ಮಂಗಳೂರು ಮಹಾನಗರ ಪಾಲಿಕೆಯು 60 ವಾರ್ಡ್‌ಗಳನ್ನು ಒಳಗೊಂಡಿದ್ದು, 1300 ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು. ಇವರಲ್ಲಿ 663 ಪುರುಷರು ಮತ್ತು 637 ಮಹಿಳೆಯರು ಕಾರ್ಯನಿರ್ವಹಿಸುತ್ತಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆಯು ಪ್ರಸ್ತುತ ಸಂಶೋಧನಾ ಅಧ್ಯಯನ ಕ್ಷೇತ್ರವಾಗಿದ್ದು, ಪಾಲಿಕೆಯ ಅತೀ ಹೆಚ್ಚು ಪೌರಕಾರ್ಮಿಕರು ಸದರಿ ವಾರ್ಡ್ ಗಳಲ್ಲಿ ವಾಸಿಸುವುದರಿಂದ ಉಲ್ಲೇಖಿತ ವಾರ್ಡ್‌ಗಳನ್ನು ಅಧ್ಯಯನ ವ್ಯಾಪ್ತಿಯನ್ನಾಗಿಯು, ಅಲ್ಲಿ ವಾಸಿಸುವ ಪೌರಕಾರ್ಮಿಕರನ್ನು ಅಧ್ಯಯನದ ನಮೂನೆಗಳನ್ನಾಗಿ ಒಳಪಡಿಸಿಕೊಳ್ಳಲಾಗಿದೆ. ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಪೌರಕಾರ್ಮಿಕರು ದೈನಂದಿನ ಜೀವನದಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ವಿಶ್ಲೇಷಿಸಲು ಸ್ಥರೀಕೃತ ಯಾದೃಚ್ಛಿಕ ನಮೂನೆ ವಿಧಾನವನ್ನು ಅಳವಡಿಸಿಕೊಂಡು ಪ್ರಾಥಮಿಕ ಮಾಹಿತಿ ಸಂಗ್ರಹಣೆಗಾಗಿ ಒಟ್ಟು ಪೌರ ಕಾರ್ಮಿಕ ಜನಸಂಖ್ಯೆಯಿಂದ 300 ಪೌರ ಕಾರ್ಮಿಕರನ್ನು ಅಧ್ಯಯನದ ನಮೂನೆಗಳಾಗಿ ಆಯ್ಕೆಮಾಡಿಕೊಳ್ಳಲಾಗಿದೆ. ಮಹಾನಗರ ಪಾಲಿಕೆಯಲ್ಲಿನ ಖಾಯಂ ಮತ್ತು ಗುತ್ತಿಗೆ ನೆಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರನ್ನು ಪುರುಷ 51% ಮಹಿಳಾ 49% ಕಾರ್ಮಿಕರಾಗಿ ವರ್ಗೀಕರಿಸಲಾಗಿದೆ.

ನಮೂನೆಯನ್ನು ಆಯ್ಕೆ ಮಾಡುವಲ್ಲಿ ಕ್ರೇಜ್ಕಿ(Krejcie) ಮತ್ತು ಮೋರ್ಗನ್(Morgan) ಮಾಪನವನ್ನು ಅಳವಡಿಸಿಕೊಳ್ಳಲಾಗಿದೆ.

ಈ ಕೆಳಕಂಡ ಕೋಷ್ಟಕದಲ್ಲಿ ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿದ ವಾರ್ಡ್‌ಗಳು ಮತ್ತು ನಮೂನೆ.

ಕೋಷ್ಟಕ – 4.2: ಅಧ್ಯಯನಕ್ಕೆ ಆಯ್ಕೆ ಮಾಡಿದ ನಮೂನೆಯ ವಿವರ

ಕ್ರ.ಸಂ	ಪ್ರದೇಶ	ನಮೂನೆ	ಶೇಕಡವಾರು
1.	ಮಹಾಕಾಳಿಪಡ್ಪು	34	11.3
2.	ವಿವೇಕನಗರ	22	7.3
3.	ಮಂಕಿಸ್ಟ್ಯಾಂಡ್(ಮಂಗಳದೇವಿ)	18	6
4.	ಉರ್ವಸ್ಟೋರ್	22	7.3
5.	ಉರ್ವ ಮಾರ್ಕೇಟ್	18	6
6.	ಪಚ್ಚನಾಡಿ (ಡಂಪಿಂಗ್ ಯಾರ್ಡ್)	10	3.3
7.	ಜ್ಯೋತಿನಗರ (ವಾಮಂಜೂರು)	12	4
8.	ಅಂಬೇಡ್ಕರ್ ಕಾಲಾನಿ(ವಾಮಂಜೂರ್)	6	2
9.	ಕೂಳೂರು (ಬೆಂಗರೆ)	29	9.6
10.	ಕೋರಿಕಟ್ಟೆ(ಬೈಕಂಪಾಡಿ)	26	8.6
11.	ತಣ್ಣೀರುಬಾವಿ	23	7.6
12.	ಕಾಟಿಪಲ್ಲ	12	4
13.	ಅಂಗರಗುಂಡಿ	19	6.3
14.	ಕುದ್ರೋರಿಗುಡ್ಡೆ(ಕಂಕನಾಡಿ)	23	7.6
15.	ಪಣಂಬೂರು	10	3.3
16.	ಸೂಟರ್ಪೇಟೆ (ಕಂಕನಾಡಿ)	16	5.3
17.	ಒಟ್ಟು	300	100

ಮಾಹಿತಿಯ ಮೂಲ: ಪ್ರಾಥಮಿಕ

ಪ್ರಾಥಮಿಕ ಮಾಹಿತಿ

ಸಂಶೋಧನಾ ಅಧ್ಯಯನಕ್ಕಾಗಿ ಪ್ರಾಥಮಿಕ ಮಾಹಿತಿಯನ್ನು ಸಂದರ್ಶನ ಕೈಪಿಡಿಯ ಮೂಲಕ ಮಂಗಳೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅಲ್ಲದೆ ಮಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ವಿಭಾಗದ ಮುಖ್ಯ ಆರೋಗ್ಯಾಧಿಕಾರಿಗಳಿಂದಲೂ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಮಾಧ್ಯಮಿಕ ಮಾಹಿತಿ

ಮಾಧ್ಯಮಿಕ ಮೂಲಗಳಾದ ಗ್ರಂಥಗಳು, ಮ್ಯಾಗಜಿನ್, ಪುಸ್ತಕಗಳು, ದಿನ ಪತ್ರಿಕೆ, ಲೇಖನ ವರದಿಗಳು, ಅಂತರ್ಜಾಲದ ಬಳಕೆ ಮತ್ತು ಕೈಪಿಡಿಗಳಿಂದ ಮಾಧ್ಯಮಿಕ ಹಂತದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಅಧ್ಯಯನದ ಇತಿಮಿತಿಗಳು

ಪ್ರಸ್ತುತ ಅಧ್ಯಯನವು ಈ ಕೆಳಕಂಡ ಅಧ್ಯಯನದ ಮಿತಿಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ.

- ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಟ್ಟ ಸ್ವಚ್ಛತಾ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಮಾತ್ರ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.
- ಮಹಾನಗರ ಪಾಲಿಕೆಯಲ್ಲಿ ಕೆಲಸ ಮಾಡುವ ಹೆಣ್ಣು ಗಂಡು, ಎಲ್ಲಾ ಜಾತಿಯ ಜನರನ್ನೂ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ

ಅಧ್ಯಾಯ ವಿಂಗಡಣೆ:

- ಪ್ರಸ್ತುತ ಅಧ್ಯಾಯನವನ್ನು ಐದು ಅಧ್ಯಾಯಗಳನ್ನಾಗಿ ವಿಂಗಡಿಸಿ, ಪ್ರತೀ ಅಧ್ಯಾಯನವನ್ನು ವೈಜ್ಞಾನಿಕವಾಗಿ, ವಿವರಾಣಾತ್ಮಕವಾಗಿ ವಿಶ್ಲೇಷಿಸಲಾಗಿದೆ. **ಪ್ರಥಮ ಅಧ್ಯಾಯವು** ಪೌರಕಾರ್ಮಿಕರ ಕುರಿತ ಪೀಠಿಕೆಯಾಗಿದ್ದು, ಇದರಲ್ಲಿ ಪೌರಕಾರ್ಮಿಕ ಉದ್ಯೋಗದ, ಸಮುದಾಯ ಉಗಮದ ಹಿನ್ನಲೆ, ಮತ್ತು ಅದಕ್ಕೆ ಸಂಬಂಧಿಸಿದಂತೆ ಲಭ್ಯವಿರುವಂತ ಐತಿಹಾಸಿಕ ಚರಿತ್ರೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೌರಕಾರ್ಮಿಕರ ಸಂಖ್ಯೆ ಅವರ ಪ್ರಾಮುಖ್ಯತೆಯ ಬಗ್ಗೆ ವಿವರಿಸಲಾಗಿದೆ.
- **ಎರಡನೆಯ ಅಧ್ಯಾಯನದಲ್ಲಿ** ಅಧ್ಯಯನಕ್ಕೆ ಸಂಬಂಧಿಸಿದಂತೆ, ಅಂದರೆ ಪೌರಕಾರ್ಮಿಕ ಅಥವಾ ಈ ಉದ್ಯೋಗವನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುವ ಬಗ್ಗೆ, ಅವರು ಎದುರಿಸುತ್ತಿರುವ ಹಲವಾರು ಸವಾಲುಗಳ ಬಗ್ಗೆ ಕೈಗೊಂಡಿರುವ ಅಧ್ಯಯನಗಳ ಸಾಹಿತ್ಯ ಪರಮಾರ್ಶೆಯನ್ನು ಮಾಡಲಾಗಿದೆ.
- **ಮೂರನೆಯ ಅಧ್ಯಾಯವು** ಸಂಶೋಧನೆಗೆ ಬಳಸಿದ ಸಂಶೋಧನಾ ವಿಧಾನವನ್ನು ವಿವರಿಸುತ್ತದೆ. ಈ ಅಧ್ಯಯನದಲ್ಲಿ ಸಂಶೋಧನೆಗೆ ಬೇಕಾಗಿರುವ ಮಾಹಿತಿಯನ್ನು ಯಾವ ವಿಧಾನ ಅಥವಾ ಮಾದರಿಯನ್ನು ಬಳಸಿ ಸಂಗ್ರಹಿಸಲಾಗಿದೆ ಎಂಬುದನ್ನು ಚರ್ಚಿಸಲಾಗಿದೆ.

- **ನಾಲ್ಕನೆಯ ಅಧ್ಯಾನವು** ಸಂಗ್ರಹಿಸಿದ ಮಾಹಿತಿಯನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಲಾಗಿದೆ. ದತ್ತಾಂಶವನ್ನು ದಕ್ಷಿಣ ಕನ್ನಡ, ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಪೌರಕಾರ್ಮಿಕರಾಗಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಐತಿಹಾಸಿಕ ಹಿನ್ನಲೆಯೊಂದಿಗೆ ಅವರ ಸಾಮಾಜಿಕ ಆರ್ಥಿಕ ಸ್ಥಿತಿಗತಿ, ಶೈಕ್ಷಣಿಕ ಸ್ಥಾನಮಾನ, ಆರೋಗ್ಯದ ಸ್ಥಿತಿಗತಿ ಮತ್ತು ಅವರಿಗೆ ದೊರಕುವ ಸೌಲಭ್ಯಗಳ ಕುರಿತು ವಿಮರ್ಶಾತ್ಮಕವಾಗಿ ವಿಶ್ಲೇಷಿಸಲಾಗಿದೆ.
- **ಕೊನೆಯ ಅಧ್ಯಾಯವು** ದತ್ತಾಂಶ ವಿಶ್ಲೇಷಣೆಯ ಸಾರಂಶ, ಸಲಹೆ ಮತ್ತು ಉಪಸಂಹಾರವನ್ನು ಒಳಗೊಂಡಿದೆ.

ಸಂಶೋಧನಾ ಫಲಿತಾಂಶಗಳು, ಉಪಸಂಹಾರ ಮತ್ತು ಸಲಹೆಗಳು

ಸಂಶೋಧನಾ ಪ್ರಮುಖ ಫಲಿತಾಂಶಗಳು (Major Findings)

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಸುಮಾರು 1300 ಜನ ಬೀದಿ ಗುಡಿಸುವುದು ಮತ್ತು ತ್ಯಾಜ್ಯಗಳನ್ನು ವಿಲೇವಾರಿ ಮಾಡುವ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ನೈರ್ಮಲ್ಯಗಳ ಕೆಲಸ ಮಾಡುವವರನ್ನು ಪೌರಕಾರ್ಮಿಕರು ಎಂಬುದಾಗಿ ಕರೆಯಲಾಗಿದೆ. ಒಣ ಶೌಚಲಯಗಳ ಅವಧಿಯಲ್ಲಿ ಅದನ್ನು ಸ್ವಚ್ಛಗೊಳಿಸುವ ಮತ್ತು ಮಲಹೊರುವ ಪದ್ಧತಿಯು ಸಹ ಆಚರಣೆಯಲ್ಲಿತ್ತು ಈ ಕೆಲಸವನ್ನು ಮಾಡುವವ್ರನ್ನು ತೋಟಿ ಎಂಬುದಾಗಿ ಕರೆಯಲ್ಪಡುತ್ತಿದ್ದರು ಮತ್ತು ಅವರು ಅತ್ಯಂತ ಕೆಳಮಟ್ಟದ ಸ್ಥಾನಮಾನವನ್ನು ಹೊಂದಿದ್ದರು. ಒಣ ಶೌಚಾಲಯಗಳನ್ನು ಮತ್ತು ಮಲ ಹೊರುವ ಪದ್ಧತಿಯನ್ನು ನಿಶೇಧಿಸಲಾಯಿತು. ತೋಟಿ ಎಂಬ ಹೆಸರಿನ ಮೂಲಕ ಅವರಿಗೆ ಅಂಟಿಕೊಂಡಿರುವ ಅಸ್ಪೃಶ್ಯತೆಯನ್ನು ಮತ್ತು ಕಳಂಕವನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಅವರಿಗೆ ಆದಿದ್ರಾವಿಡ, ಪಂಚಮ, ಆದಿಕರ್ನಾಟಕ, ಹರಿಜನ ಎಂಬ ಹೊಸ ಹೆಸರುಗಳನ್ನು ನೀಡಲಾಯಿತು ಎಂಬುದಾಗಿ ಕಕಡೆ ಆವರು ತಿಳಿಸಿದ್ದಾರೆ. ಸಂಸ್ಕೃತೀಕರಣದ ಮೂಲಕ ಜಾತಿ ಹೆಸರನ್ನು ಬದಲಿಸುವ ಪ್ರಕ್ರೀಯೆಯಿಂದಾಗಿ 1993 ರಲ್ಲಿ ಮಂಗಳೂರು ಮಹಾನಗರ ಪಾಲಿಕೆಯು ನಡೆಸಿದ ಸಾಮಾಜಿಕ ಆರ್ಥಿಕ ಸಮೀಕ್ಷೆಯಲ್ಲಿ ಯಾರೊಬ್ಬರು ಕೂಡ ತಮ್ಮ ಜಾತಿ ಹೆಸರನ್ನು ತೋಟಿ ಎಂಬುದಾಗಿ ನಮೂದಿಸಲಿಲ್ಲ.

ಪೌರಕಾರ್ಮಿಕರು ಮಂಗಳೂರಿನ ವೆಲೆನ್ಸಿಯ (ಸೂಟರ್ ಪೇಟೆ), ಕೊಡಿಕಲ್, ಉರ್ವಮಾರ್ಕೇಟ್, ಬಿಜೈ (ಕಾಪಿಕಾಡ್), ಕೊಡಿಯಲ್‌ಬೈಲ್ (ಬಲ್ಲಲ್ ಬಾಗ್), ಕಂಕನಾಡಿ (ನರಿಗುಡ್ಡೆ) ಮತ್ತು ಅತ್ತಾವರ (ಬಾಬುಗುಡ್ಡೆ) ದಲ್ಲಿ ನೆಲೆಸಿರುತ್ತಾರೆ. ಪೌರಕಾರ್ಮಿಕ ವೃತ್ತಿಯಲ್ಲಿ ತೊಡಗಿಕೊಂಡವರಲ್ಲಿ ಆದಿದ್ರಾವಿಡ, ಆದಿಕರ್ನಾಟಕ, ಕೊರಗ ಸಮುದಾಯವು ಪ್ರಮುಖವಾಗಿದೆ.

ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ

ಈ ಅಧ್ಯಯನದಲ್ಲಿ ಪೌರಕಾರ್ಮಿಕರ ಸಾಮಾಜಿಕ ಆರ್ಥಿಕ ಸ್ಥಿತಿಗತಿಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವ ಸಲುವಾಗಿ ಸಾಮಾಜಿಕ ಪರಿಸ್ಥಿತಿ ಮತ್ತು ಅವರಿಗೆ ಆಗುವಂತಹ ಶೋಷಣೆಯ ಕುರಿತಾಗಿ ವಿವರಿಸಲಾಗಿದೆ. ಈ ಸಮುದಾಯದವರು ಹಲವು ರೀತಿಯ ಪೂರ್ವಗ್ರಹದಿಂದಾಗಿ ಶತಮಾನಕ್ಕಿಂತಲೂ ಹಲವು ರೀತಿಯ ಶೋಷಣೆಗೆ ಒಳಗಾಗಿದ್ದರು ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನಲೆಯು ಪೌರಕಾರ್ಮಿಕರನ್ನು ಟೀಕಿಸುವ ಮತ್ತು ತಾರತಮ್ಯಕ್ಕೆ ಒಳಪಡುವಂತೆ ಮಾಡಿದೆ. ಜಾತಿ ನೀತಿಗಳ ಕಾರಣದಿಂದಾಗಿ ಅವರ ಕಲ್ಯಾಣ ಕಾರ್ಯಕ್ರಮಕ್ಕಾಗಿ ಸರಕಾರವು ಹೆಚ್ಚು ಧನಾತ್ಮಕ ನೀತಿಗಳನ್ನು ರಚಿಸಿರುವುದಿಲ್ಲ. ಪೌರಕಾರ್ಮಿಕರ ಸಮಸ್ಯೆಯು ಅತ್ಯಂತ ಪ್ರಾಮುಖ್ಯವಾದುದು ಏಕೆಂದರೆ ಅವರು ನೈರ್ಮಲ್ಯಕ್ಕಾಗಿ ತ್ಯಾಜ್ಯ ವಿಲೇವಾರಿ ಮಾಡುವುದು, ಬೀದಿ ಗುಡಿಸುವುದು, ಸಾರ್ವಜನಿಕ ಶೌಚಾಲಯಗಳನ್ನು ಶುಚಿಗೊಳಿಸುವುದರ ಮೂಲಕ ಶುಚಿತ್ವಕ್ಕೆ ಮಹತ್ವದ ಕೊಡುಗೆಯನ್ನು ನೀಡುತ್ತಾರೆ. ಪೌರಕಾರ್ಮಿಕರ ಸಬಲೀಕರಣ ಮತ್ತು ಪ್ರಬಲವಾದ ವಿಧಾನದ ಮೂಲಕ ಅವರ ಸ್ಥಿಗತಿಯನ್ನು ಸುಧಾರಣೆ ಮಾಡುವುದು ಅತ್ಯಗತ್ಯವಾಗಿದೆ. ಪೌರಕಾರ್ಮಿಕರು ಮಾನಸಿಕವಾಗಿ ಮತ್ತು ದೈಹಿಕವಾಗಿ ಬಹಳಷ್ಟು ತೊಂದರೆಗಳಿಂದ ಬಳಲುತ್ತಾರೆ ಆದ್ದರಿಂದ ಸರಕಾರವು ಅವರಿಗೆ ಮಾನಸಿಕ ಅಶಾಂತಿಯನ್ನು ಹೊಗಲಾಡಿಸುವ ಉದ್ದೇಶದಿಂದ ಅವರಿಗೆ ಮನರಂಜನ ಮತ್ತು ಅವರ ಕುಟುಂಬದ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಸರಕಾರವು ಕಲ್ಯಾಣ ಕಾರ್ಯ ಕ್ರಮಗಳನ್ನು ನಿಯೋಜಿಸ ಬೇಕಾಗುತ್ತದೆ.

- ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಒಳಚರಂಡಿ ಶುದ್ಧೀಕರಣ, ಮದ್ದು ಸಿಂಪಡಣೆ ಮತ್ತು ತ್ಯಾಜ್ಯ ವಿಲೇವಾರಿ ಮಾಡುವ ಲಾರಿಗಳ ಚಾಲನೆಯನ್ನು ಹೊರತುಪಡಿಸಿ ಉಳಿದ ಕೆಲಸಗಳಲ್ಲಿ ಹೆಚ್ಚಾಗಿ ಮಹಿಳೆಯರೇ ತೊಡಗಿರುವುದನ್ನು ಕಾಣಬಹುದು. ಈ ಮಾಹಿತಿಗೆ ಅನುಗುಣವಾಗಿ ಹೇಳುವುದಾದರೆ 300 ಮಾಹಿತಿದಾರರಲ್ಲಿ ಸರಿಸುಮಾರು 153 ಪುರುಷರಿದ್ದು 147 ಮಹಿಳೆಯರಿದ್ದಾ ರೆ. ಅವರಲ್ಲಿ 20 ರಿಂದ 40 ವಯಸ್ಸಿನ ಮಹಿಳೆಯರು ಶೇಕಡಾ 55 ರಷ್ಟಿದ್ದಾರೆ.
- ಇವರ ವಯಸ್ಸಿನ ಮಾಹಿತಿಗೆ ಅನುಗುಣವಾಗಿ 300 ಮಾಹಿತಿದಾರರಲ್ಲಿ 49% ಮಹಿಳೆಯರಲ್ಲಿ 43.7 ಶೇಕಡಾ ಮಹಿಳೆಯರು 21 ರಿಂದ 40 ವಯಸ್ಸಿನವರಾಗಿದ್ದು 54.3 ಶೇಕಡಾ 41 ರಿಂದ 60 ವಯಸ್ಸಿನವರಾಗಿರುತ್ತಾರೆ. ಅದೇ ರೀತಿಯಲ್ಲಿ ಪುರುಷರು 51 ಶೇಕಡಾದಷ್ಟಿದ್ದು ಅವರಲ್ಲಿ 56.3%, 21 ರಿಂದ 40 ವಯಸ್ಸಿನವರಾಗಿದ್ದಾರೆ, 41 ರಿಂದ 60 ವಯಸ್ಸಿನವರು 45.7 ಶೇಕಡಾದಷ್ಟಿದ್ದಾರೆ.

- 20 ವಯಸ್ಸಿಗಿಂತ ಕೆಳಗಿನ ಮತ್ತು 60 ವಯಸ್ಸಿನ ಮೇಲ್ಪಟ್ಟವರೂ ಕೆಲಸ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಅವರಲ್ಲಿ ಶೇಕಡ (4) 1.3% ರಷ್ಟು ಕಾರ್ಮಿಕರು 20 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಆಗಿರುವುದು ಕಂಡು ಬಂದಿದೆ. ಇವರೆಲ್ಲರೂ ಪುರುಷರೇ ಆಗಿರುವುದು ಮತ್ತೊಂದು ಗಮನಿಸಬೇಕಾಗಿರುವ ಅಂಶವಾಗಿದೆ. ಇದರ ಜೊತೆಗೆ ಇವರೆಲ್ಲರೂ ತಮ್ಮ ತಂದೆ ಅಥವಾ ತಾಯಂದಿರ ಮರಣ ಹೊಂದಿದ ಪರಿಣಾಮವಾಗಿ ಅಂದರೆ ಅನುಕಂಪದ (Compensatory) ಆದ್ಯತೆ ಮೇರೆಗೆ ಬಂದವರು ಆಗಿರುತ್ತಾರೆ, ಇನ್ನೂ ಕೆಲವರು ಗುತ್ತಿಗೆ ಆಧಾರದ ಅಥವಾ ದಿನನಿತ್ಯ ಕೂಲಿ ಆಧಾರದ ಮೇರೆಗೆ ಬಂದು ಕೆಲಸ ಮಾಡುವವರು ಆಗಿರುತ್ತಾರೆ. ಇದೇ ರೀತಿ ಇನ್ನೂ ಕೆಲವರು ನಿವೃತ್ತಿ ಹೊಂದಿದ ಮೇಲೂ ತಾತ್ಕಾಲಿಕ ಅಥವಾ ದಿನನಿತ್ಯ ಕೂಲಿ ಆಧಾರದ ಮೇರೆಗೆ ಕೆಲಸ ನಿರ್ವಹಿಸುವವರು ಕಂಡು ಬಂದಿರುತ್ತಾರೆ. ಅವರಲ್ಲಿ ಶೇಕಡಾ (6) 2% ರಷ್ಟು ಕಾರ್ಮಿಕರು 60 ವರ್ಷ ಮೀರಿದವರು ಕೆಲಸ ನಿರ್ವಹಿಸುವುದು ಕಂಡು ಬರುತ್ತದೆ.
- ಹೆಚ್ಚಿನ ಶೇ. 97.7ರಷ್ಟು ಕಾರ್ಮಿಕರು ಹಿಂದು ಧರ್ಮಕ್ಕೆ ಸೇರಿದವರಾಗಿದ್ದು ಇತರ ಶೇಕಡಾ 2.3 ರಷ್ಟು ಮಾಹಿತಿದಾರರು ಕ್ರಿಶ್ಚಿಯನ್ ಮತ್ತು ಮುಸ್ಲಿಮ್ ಧರ್ಮದವರಾಗಿರುತ್ತರೆ.
- ಪರಿಶಿಷ್ಟ ಜಾತಿಗೆ ಅನುಸಾರವಾಗಿ 300 ಜನ ಕೆಲಸಗಾರರಲ್ಲಿ 204 ಜನ ಪರಿಶಿಷ್ಟ ಜಾತಿಗೆ ಸೇರಿರುವರು ಇದ್ದಾರೆ. ಅವರುಗಳಲ್ಲಿ ಹೆಚ್ಚಿನರು (51%) ಜನರು ಆದಿ ದ್ರಾವಿಡ ಜನಾಂಗಕ್ಕೆ ಸೇರಿರುವವರು ಎಂಬುದು ತಿಳಿದು ಬಂದಿದೆ. ಲಂಬಾಣಿ, ಛಲವಾದಿ, ಮಾದರ್ ಎಂಬ ಜಾತಿಗಳು ಮೂಲತವಾಗಿ ದಕ್ಷಿಣ ಕನ್ನಡದಿಂದ ಹೊರಗಿನಿಂದ ಬಂದವರು ಎಂಬುದಾಗಿ ಕಂಡು ಬಂದರೂ, ಉತ್ತರ ಕರ್ನಾಟಕದಲ್ಲಿ ತಲೆದೋರಿರುವ ಬೀಕರ ಬರಗಾಲ, ನಿರುದ್ಯೋಗ ಸಮಸ್ಯೆಯಿಂದ ದಕ್ಷಿಣ ಕನ್ನಡ ಜಿಲ್ಲೆಗೆವಲಸೆ ಬಂದಿರುವವರ ಸಂಖ್ಯೆ ತುಂಬಾಇದೆ. ಇದರ ಪ್ರತಿಫಲವಾಗಿ ಈ ಉಪಜಾತಿಗೆ ಸೇರಿರುವ ಜನರು ಉತ್ತರ ಕನ್ನಡ ಜಿಲ್ಲೆಯಿಂದ ದಕ್ಷಿಣ ಕನ್ನಡ ಜಿಲ್ಲೆಗೆ ವಲಸೆ ಬಂದು ನಗರ ಸುಚಿತ್ವ ಮಾಡುವ ಕೆಲಸದಲ್ಲಿ ತೊಡಾಗಿರುವವರು ಇದ್ದಾರೆ.
- ಪೌರಕಾರ್ಮಿಕರಾಗಿ ಕಾರ್ಯ ನಿರ್ವಹಿಸುವವರಲ್ಲಿ ಪರಿಶಿಷ್ಟ ಪಂಗಡದವರು ಹೆಚ್ಚಿನ ಸಂಖ್ಯೆಯಲ್ಲಿದ್ದು ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕೊರಗ, ಮರಾಠಿನಾಯ್ಕ್ ಮತ್ತು ವಾಲ್ಮಿಕಿ ನಾಯ್ಕ್ ಸಮುದಾಯದವರಿರುವುದು ಕಂಡು ಬಂದಿದೆ. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕೊರಗ ಸಮುದಾಯದವರು ಸುಮಾರು 52.05 ಶೆಕಡಾದಷ್ಟಿದ್ದಾರೆ. ವಾಲ್ಮೀಕಿ ನಾಯ್ಕ್ ಸಮುದಾಯದವರು 41.05 ಶೇಕಡಾ ಇದ್ದು ಇವರು ಹೊರ ರಾಜ್ಯದಿಂದ ಬಂದವರಾಗಿದ್ದಾರೆ, ವಾಲ್ಮೀಕಿ ಸಮುದಾಯವು ಮೂಲತಃ ಜಾಡಮಾಲಿ ವೃತ್ತಿ ಮಾಡುವವರಾಗಿದ್ದಾರೆ. ಪೌರಕಾರ್ಮಿಕರಾಗಿ ಕಾರ್ಯ ನಿರ್ವಹಿಸುವವರಲ್ಲಿ ಮರಾಠಿ ನಾಯ್ಕ್ ಸಮುದಾಯದವರಿದ್ದು ಇವರಲ್ಲಿ 6.8 ಶೇಕಡಾದಷ್ಟಿದ್ದಾರೆ.

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟಪಂಗಡಕ್ಕೆ ಸೇರಿದವರು ಮಾತ್ರವಲ್ಲದೆ ಪ್ರಸ್ತುತದಲ್ಲಿ ಮಹಾನಗರ ಪಾಲಿಕೆಯಲ್ಲಿ ಪೌರಕಾರ್ಮಿಕ ವೃತ್ತಿಯಲ್ಲಿ ಹಿಂದುಳಿದ ವರ್ಗದವರು ತೊಡಗಿರುವುದು ಕಂಡುಬರುತ್ತದೆ. ಇವರಲ್ಲಿ 5.3(16) ಶೇಕಡಾ ಹಿಂದುಳಿದ ಸಮುದಾಯದವರಿದ್ದು ಅವರಲ್ಲಿ ಅಂಬಿಗಾ ಸಮುದಾಯದವರು 25% (4) ದಷ್ಟಿದ್ದಾರೆ, ಲಿಂಗಾಯತ ಸಮುದಾಯದವರು 18.75% (3) ಇದ್ದು ಉಳಿದ 56.25% (9) ಕುಲಾಲ, ದೇವಾಡಿಗ, ಗೌಂಡರ್,ನಾಯರ್,ವಡ್ಡರ್,ರಾಮಕ್ಷತ್ರಿ ಸಮುದಾಯದವರಿದ್ದಾರೆ ಇವರೆಲ್ಲರೂ ಹೊರ ರಾಜ್ಯ ಮತ್ತು ಜಿಲ್ಲೆಗಳಿಂದ ವಲಸೆ ಬಂದವರಾಗಿದ್ದಾರೆ.
- ಪೌರಕಾರ್ಮಿಕರು ವಿವಿಧ ಜಾತಿ ಧರ್ಮಕ್ಕೆ ಸೇರಿದವರಾಗಿದ್ದು ಅವರು ಮಾತಾನಾಡುವ ಭಾಷೆಯಲ್ಲಿಯು ಭಿನ್ನತೆಯನ್ನು ಕಾಣಬಹುದಾಗಿದೆ. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುವ ಪೌರಕಾರ್ಮಿಕರು ಸ್ಥಳೀಯರು ಮಾತ್ರವಲ್ಲದೆ ಹೊರ ರಾಜ್ಯ ಮತ್ತು ಜಿಲ್ಲೆಗಳಿಂದಲೂ ವಲಸೆ ಬಂದವರು ಇರುವುದರಿಂದ ಇಲ್ಲಿ ಕನ್ನಡ, ತುಳು, ಮಲಯಾಳಂ, ತಮಿಳು ತೆಲುಗು ಮತ್ತು ಲಂಬಾಣಿ ಭಾಷೆ ಮಾತನಾಡುವವರಿದ್ದಾರೆ.
- ಈ ಅಧ್ಯಯನದಲ್ಲಿ ವಿವಿಧ ಭಾಷೆಯನ್ನು ಮಾತನಾಡುವ ಪೌರಕಾರ್ಮಿಕರನ್ನು ಕಾಣಬಹುದಾಗಿದೆ ಇಲ್ಲಿ ಕನ್ನಡ ಮಾತನಾಡುವವರು 20.6% ರಷ್ಟಿದ್ದಾರೆ, ತುಳು ಮಾತನಾಡುವವರು 72.3%, 2.7% ತಮಿಳು, ಮಲಯಾಳಂ ಮತ್ತು ತೆಲುಗು ಮಾತನಾಡುವವರಾಗಿದ್ದು,ಉಳಿದ 4.3 ಶೇಕಡ ಲಂಬಾಣಿ ಭಾಷೆ ಮಾತನಾಡುವವರಾಗಿದ್ದಾರೆ. ಇಲ್ಲಿ ತುಳು ಮಾತನಾಡುವವರು ಮಂಗಳೂರಿನ ನಿವಾಸಿಗರಾಗಿದ್ದು ಇದರಲ್ಲಿ ಕನ್ನಡ, ತಮಿಳು, ತೆಲುಗು ಮತ್ತು ಲಂಬಾಣಿ ಭಾಷೆ ಮಾತನಾಡುವವರು ವಲಸೆ ಬಂದವರಾಗಿರುತ್ತಾರೆ.
- **ಪೌರಕಾರ್ಮಿಕರ ಕೌಟುಂಬಿಕ ಹಿನ್ನಲೆ:** ಸಾಮಾನ್ಯವಾಗಿ ಭಾರತೀಯ ಕುಟುಂಬಗಳನ್ನು ಅವಿಭಕ್ತ ಮತ್ತು ಅಣು ಎಂಬ ಎರಡು ಬಗೆಗೆಳನ್ನಾಗಿ ವಿಂಗಡಿಸಲಾಗುತ್ತದೆ. ಅವಿಭಕ್ತ ಕುಟುಂಬ ಎಂದರೆ ಒಂದು ಅಥವಾ ಎರಡು ಹೆಚ್ಚು ತಲೆಮಾರು ಒಂದೇ ಸೂರಿನಡಿಯಲ್ಲಿ ಸಾಮಾನ್ಯ ಪಾಖಶಾಲೆ, ಆಸ್ತಿ ಮತ್ತು ಕುಟುಂಬದ ಸಂಪನ್ಮೂಲಗಳನ್ನು ಹಂಚಿಕೊಂಡು ಜೀವನವನ್ನು ನಡೆಸಿಕೊಂಡು ಹೋಗುವುದು. ಅಣು ಕುಟುಂಬದಲ್ಲದರೋ ತಂದೆ–ತಾಯಿ ಮತ್ತು ಅವರ ಮಕ್ಕಳು ಮಾತ್ರ ವಾಸವಾಗಿರುತ್ತಾರೆ. ಇವರುಗಳು ಮೂಲತಃವಾಗಿ ಅವಿಭಕ್ತ ಕುಟುಂಬ ಅಥವಾ ವಿಭಕ್ತ ಕುಟುಂಬಗಳ ಹಿನ್ನಲೆಯಿಂದಲೇ ಕೂಡಿರುವವರು ಆಗಿದ್ದರೂ ಕೈಗರೀಕರಣದ, ನಗರೀಕರಣದ ಪ್ರಭಾವದಿಂದ, ಇವರು ನೆಲೆಸಿರುವುದು ಸಂಪೂರ್ಣವಾಗಿ ವಿಭಕ್ತ ಅಂದರೆ ಸಣ್ಣ ಕುಟುಂಬದಲ್ಲೇ ಎಂಬುದು ನಮ್ಮ ಅಧ್ಯಯನದಲ್ಲಿ ಕಂಡು ಬಂದಿದೆ. ಇದರ ಜೊತೆಗೆ ಇತರ ಪ್ರದೇಶಗಳಿಂದ ವಲಸೆ ಬಂದು ಪೌರಕಾರ್ಮಿಕರಾಗಿ ನೇಮಕಗೊಂಡ ಬಳಿಕ, ಅವರುಗಳೆಲ್ಲರೂ ಮೂಲತ ಕೃಷಿ

ಕಾರ್ಮಿಕರಾಗಿದ್ದರೂ ಇಲ್ಲಿಗೆ ವಲಸೆ ಬಂದ ಕಾರಣ ಇವರುಗಳೆಲ್ಲರೂ ವಾಸಿಸುತ್ತಿರುವುದು ವಿಭಕ್ತ ಕುಟುಂಬದಲ್ಲೇ ಎಂಬುದು ಕೂಡ ತಿಳಿದು ಬಂದಿದೆ. ಯಾಕೆಂದರೆ ಇಲ್ಲಿ ವಾಸಿಸಲು ಯೋಗ್ಯಕರವಾದ ಉತ್ತಮ ಸೌಲಭ್ಯಗಳು ಇಲ್ಲದಿರುವುದು ಮತ್ತು ವಲಸೆ ಬಂದವರೆಲ್ಲಾ ಒಬ್ಬಂಟಿಗರಾಗಿಯೇ, ಅಥವಾ ಸಣ್ಣ ಕುಟುಂಬದ ಜೊತೆಯಲ್ಲೇ ಬಂದಿರುವವರು ಆಗಿರುತ್ತಾರೆ. ಆದರೂ ತಮ್ಮ ಊರಿನಲ್ಲಿ ಇನ್ನೂ ಅದೆಷ್ಟೋ ಕುಟುಂಬಗಳು ಅವಿಭಕ್ತ ಕುಟುಂಬಗಳಾಗಿಯೇ ಮುಂದುವರಿಯುತ್ತಿರುವುದು ಕೂಡ ಕಂಡು ಬಂದಿದೆ, ತಮ್ಮ ಆಸ್ತಿ ಹಂಚಿಕೆಯಾಗದೆ ಎಲ್ಲರೂ ಒಟ್ಟಾಗಿಯೇ ಕೃಷಿ ಮಾಡಿಕೊಂಡು ಬದುಕುತ್ತಿರುವುದನ್ನು ಕಾಣಬಹುದು.

- ಮಾಹಿತಿದಾರರ ವೈವಾಹಿಕ ಅಂತಸ್ತಿನ ಪ್ರಕಾರ ಶೇಕಡಾ 70 (210) ಪೌರಕಾರ್ಮಿಕರು ವಿವಾಹಿತರಾಗಿದ್ದು, ಶೇಕಡಾ 12.7(38) ಅವಿವಾಹಿತರು ಇದ್ದಿರುವುದು ಕಂಡು ಬರುತ್ತದೆ. ಉಳಿದ ಶೇಕಡಾ 17.4(52) ರಷ್ಟು ಕಾರ್ಮಿಕರು ವಿಚ್ಛೇದಿತ ಮತ್ತು ವಿಧವೆಯರಾಗಿದ್ದಾರೆ. ಇಲ್ಲಿ ಹೆಚ್ಚಿನ ಮಹಿಳೆಯರು ತಿಳಿಸಿರುವ ಪ್ರಕಾರ ವಿವಾಹದ ನಂತರ ಈ ವೃತ್ತಿಯನ್ನು ಆರಿಸಿಕೊಂಡಿದ್ದಾರೆ ಇನ್ನು ಕೆಲವರು ತಮ್ಮ ಗಂಡನ ಮರಣದ ನಂತರ ಗಂಡನ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ
- ಪೌರಕಾರ್ಮಿಕರು ಹೊಂದಿರುವ ಮನೆಯ ಒಡೆತನವನ್ನು ನೋಡುವುದಾದರೆ 99 (33%) ಜನ ಮಾತ್ರ ಸ್ವಂತ ಮನೆ ಹೊಂದಿದ್ದು ಹೆಚ್ಚಿನ 49.7% ಪೌರಕಾರ್ಮಿಕರು ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತಾರೆ ಕೇವಲ 17.3% ಪೌರಕಾರ್ಮಿಕರಿಗೆ ಮಹಾನಗರ ಪಾಲಿಕೆಯ ವತಿಯಿಂದ ಕೋಟ್ರಸ್ ಸೌಲಭ್ಯವನ್ನು ನೀಡಲಾಗಿದೆ. ಮಂಗಳೂರು ಮಹಾನಗರ ಪಾಲಿಕೆಯು ಮಹಾಕಾಲಿಪಡ್ಪು, ಪಚ್ಚನಾಡಿ, ವಾಮಂಜೂರುಗಳಲ್ಲಿ ಪೌರಕಾರ್ಮಿಕರಿಗೆ ಕೋಟ್ರಸ್‌ಗಳನ್ನು ನೀಡಿದ್ದು ಮಹಾಕಾಲಿಪಡ್ಪುವಿನ ಕೋಟ್ರಸ್‌ಗಳಲ್ಲಿ ಸುಮಾರು 30 ಕ್ಕಿಂತ ಹೆಚ್ಚು ಮನೆಗಳಿವೆ. ಆದರೆ ಅಲ್ಲಿನ ಮೂಲಭೂತ ಸೌಕರ್ಯ ಮತ್ತು ಕಟ್ಟಡದ ಸ್ಥಿತಿಯು ಪೌರಕಾರ್ಮಿಕರಿಗೆ ವಾಸವಾಗಿರಲು ಯೋಗ್ಯವಲ್ಲದ ರೀತಿಯಲ್ಲಿರುವುದರಿಂದ ಅಲ್ಲಿ ವಾಸವಾಗಿರುವವರ ಪರಿಸ್ಥಿತಿಯು ಚಿಂತಾಜನಕವಾಗಿದೆ. ವಾಮಂಜೂರು, ಪಚ್ಚನಾಡಿಗಳಲ್ಲಿ ಸುಮಾರು 20 ಮನೆಗಳಿದ್ದು ಪ್ರತಿಯೊಂದು ಮನೆಯು ಸಣ್ಣ ಮನೆಗಳಾಗಿದ್ದು 2,3 ಕೊಠಡಿಯನ್ನು ಒಳಗೊಂಡಿದೆ. ಪಚ್ಚನಾಡಿಯಲ್ಲಿ ಇರುವ ಮನೆಗಳು ನಗರದ ತ್ಯಾಜ್ಯ ಶೇಖರಣೆಯ ಸ್ಥಳದ ಹತ್ತಿರ ಇರುವುದರಿಂದ ಅಲ್ಲಿ ವಾಸವಾಗಿರುವ ಕಾರ್ಮಿಕರು ಹಲವು ರೀತಿಯ ಆರೋಗ್ಯದ ಸಮಸ್ಯೆಯನ್ನು ಎದುರಿಸುತ್ತಾರೆ. ಗುತ್ತಿಗೆಯಲ್ಲಿ ಕಾರ್ಯ ನಿರ್ವಹಿಸುವ ಪೌರಕಾರ್ಮಿಕರು ಹೆಚ್ಚಾಗಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ, ಇವರು ಹೆಚ್ಚಗಿ ಮಂಗಳೂರಿನ ಕೋರಿಕಟ್ಟೆ, ತನ್ನೀರುಬಾವಿ, ಕೂಳೂರು, ಸೂಟರ್ಪೇಟೆಗಳಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದು ಆ ಬಾಡಿಗೆ ಮನೆಯು ಒಂದು ಕೊಠಡಿಯನ್ನು ಹೊಂದಿದೆ ಅದರಲ್ಲಿ 4 ರಿಂದ 5 ಜನ ವಾಸವಾಗಿದ್ದಾರೆ ಅದಲ್ಲದೆ ಅಲ್ಲಿ ಮೂಲಭೂತ

ಸೌಕರ್ಯಗಳಾದ ಶೌಚಾಲಯ ಮತ್ತು ಬಚ್ಚಲು ಮನೆಯ ವ್ಯವಸ್ಥೆಯು ಇಲ್ಲದಿರುವುದರಿಂದ ಅವರು ಮಲ ವಿಸರ್ಜನೆಗೆ ಬಯಲು ಪ್ರದೇಶವನ್ನು ಅವಲಂಬಿಸಿರುವುದಾಗಿ ತಿಳಿಸಿದ್ದಾರೆ.

ಮೂಲಭೂತ ಸವಲತ್ತುಗಳು

- ಮಾಹಿತಿದಾರರು (33%) ಜನ ಮಾತ್ರ ಸ್ವಂತ ಮನೆ ಹೊಂದಿದ್ದು ಹೆಚ್ಚಿನ 49.7% ಪೌರಕಾರ್ಮಿಕರು ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತಾರೆ ಕೇವಲ 17.3% ಪೌರಕಾರ್ಮಿಕರಿಗೆ ಮಹಾನಗರ ಪಾಲಿಕೆಯ ಕೋಟಸ್ಗಳಲ್ಲಿ ವಾಸವಾಗಿದ್ದರೆ. ಮಂಗಳೂರು ಮಹಾನಗರ ಪಾಲಿಕೆಯು ಮಹಾಕಾಲಿಪಡ್ಪು, ಪಚ್ಚನಾಡಿ, ವಾಮಂಜೂರುಗಳಲ್ಲಿ ಪೌರಕಾರ್ಮಿಕರಿಗೆ ನಿರ್ಮಿಸಿ ಕೋಟ್ರಸ್‌ಗಳನ್ನು ನೀಡಿದ್ದು ಮಹಾಕಾಲಿಪಡ್ಪುವಿನಲ್ಲಿ ಇರುವ ಕೋಟ್ರಸ್‌ಗಳಲ್ಲಿ ಸುಮಾರು 30 ಕ್ಕಿಂತ ಹೆಚ್ಚು ಮನೆಗಳಿದ್ದು ಅಲ್ಲಿ ಸರಿಯಾದ ಮೂಲಭೂತ ಸೌಕರ್ಯಗಳು ಇಲ್ಲದಿರುವುದರಿಂದ ಅಲ್ಲಿ ವಾಸವಾಗಿರುವವರ ಪರಿಸ್ಥಿತಿಯು ಚಿಂತಾಜನಕವಾಗಿದೆ. ವಾಮಂಜೂರು, ಪಚ್ಚನಾಡಿಗಳಲ್ಲಿ ಸುಮಾರು 20 ಮನೆಗಳಿದ್ದು ಪ್ರತಿಯೊಂದು ಮನೆಯು ಸಣ್ಣ ಮನೆಗಳಾಗಿದ್ದು 2,3 ಕೊಠಡಿಯನ್ನು ಒಳಗೊಂಡಿದೆ. ಪಚ್ಚನಾಡಿಯಲ್ಲಿ ಇರುವ ಮನೆಗಳು ನಗರದ ತ್ಯಾಜ್ಯ ಶೇಕರಣೆಯ ಸ್ಥಳದ ಹತ್ತಿರ ಇರುವುದರಿಂದ ಅಲ್ಲಿಯ ಮನೆ ಮಾಡಿರುವ ಕಾರ್ಮಿಕರು ಹಲವು ರೀತಿಯ ಆರೋಗ್ಯದ ಸಮಸ್ಯೆಯನ್ನು ಎದುರಿಸುತ್ತಾರೆ. ಮಂಗಳೂರಿನ ಕೋರಿಕಟ್ಟೆ, ತಣ್ಣೀರುಬಾವಿ, ಕೂಳೂರು, ಸೂಟರ್ಪೇಟೆಗಳಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದು ಆ ಬಾಡಿಗೆ ಮನೆಯು ಒಂದು ಕೊಠಡಿಯನ್ನು ಹೊಂದಿದ್ದು ಅದರಲ್ಲಿ 4 ರಿಂದ 5 ಜನ ವಾಸವಾಗಿದ್ದಾರೆ ಅದಲ್ಲದೆ ಅಲ್ಲಿ ಮೂಲಭೂತ ಸೌಕರ್ಯಗಳಾದ ಶೌಚಾಲಯ ಮತ್ತು ಬಚ್ಚಲು ಮನೆಯ ವ್ಯವಸ್ಥೆಯು ಇಲ್ಲದಿರುವುದರಿಂದ ಅವರು ಮಲ ವಿಸರ್ಜನೆಗೆ ಬಯಲು ಪ್ರದೇಶವನ್ನು ಅವಲಂಬಿಸಿರುವುದಾಗಿ ತಿಳಿಸಿದ್ದಾರೆ. ಬಾಡಿಗೆ ಮನೆಯಲ್ಲಿ ವಾಸವಾಗಿರುವ ಪೌರಕಾರ್ಮಿಕರು ಒಂದು ಕೊಠಡಿಯ ಶೌಚಾಲಯ ವ್ಯವಸ್ಥೆಯನ್ನು ಹೊಂದದಿರುವ ಮನೆಗಳಿಗೆ ತಿಂಗಳಿಗೆ 1500 ರೂಪಾಯಿಯನ್ನು ನೀಡಬೇಕಾಗಿದ್ದು ಶೌಚಾಲಯವನ್ನು ಹೊಂದಿರುವ ಮನೆಗಳಿಗೆ 3000 ದ ವರೆಗೆ ಮನೆಬಾಡಿಗೆಯನ್ನು ನೀಡುತ್ತಿದ್ದಾರೆ. ಸ್ವಂತ ಮನೆಯಲ್ಲಿ ವಾಸವಾಗಿರುವ ಹೆಚ್ಚಿನ ಕಾರ್ಮಿಕರು ಹಕ್ಕು ಪತ್ರವನ್ನು ಹೊಂದಿರುವುದಿಲ್ಲ.
- ಮಾಹಿತಿದಾರರು ತಿಳಿಸಿರುವ ಪ್ರಕಾರ ಶೇಕಡಾ 83.7(251) ರಷ್ಟು ಕಾರ್ಮಿಕರು ತಮ್ಮ ಮನೆಯಲ್ಲಿ ವಿದ್ಯುತ್ ಸಂಪರ್ಕವನ್ನು ಹೊಂದಿದ್ದು ಉಳಿದ ಶೇಕಡಾ 16.3(49) ರಷ್ಟು ಕಾರ್ಮಿಕರು ವಿದ್ಯುತ್ ಸಂಪರ್ಕವನ್ನು ಹೊಂದಿರುವುದಿಲ್ಲ. ಮಂಗಳೂರು ಮಹಾನಗರ ಪಾಲಿಕೆಯು ನಗರದಲ್ಲಿ ನೀರಿನ ಸೌಲಭ್ಯವನ್ನು ಒದಗಿಸಿದ್ದು ಶೇಕಡಾ 88.3(265) ರಷ್ಟು ಕಾರ್ಮಿಕರ ಮನೆಯಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಹೊಂದಿದ್ದಾರೆ ಉಳಿದ

ಶೇಕಡಾ 11.6 ರಷ್ಟು ಕಾರ್ಮಿಕರು ಕುಡಿಯುವ ನೀರಿನ ವ್ಯವಸ್ಥೆಯನ್ನು ಹೊಂದಿರುವುದಿಲ್ಲ ಅವರು ಬೇರೆಯವರ ಮನೆಯನ್ನು ಅವಲಂಬಿಸಿದ್ದಾರೆ.

ಪೌರಕಾರ್ಮಿಕರ ಮನೆಯ ಒಳಗೆ ಇರುವ ಆಧುನಿಕ ಮೂಲಭೂತ ಸೌಕರ್ಯಗಳು

ಪೌರಕಾರ್ಮಿಕರು ಹೊಂದಿರುವ ಆಧುನಿಕ ಮೂಲಭೂತ ಸವಲತ್ತುಗಳ ಮಾಹಿತಿಯನ್ವಯ ಒಟ್ಟು 300 ಜನ ಮಂಗಳೂರು ನಗರ ಪಾಲಿಕೆಯಲ್ಲಿ ಪೌರಕಾರ್ಮಿಕರಾಗಿ ಉದ್ಯೋಗ ಮಾಡುತ್ತಿರುವ ಮಾಹಿತಿದಾರರಲ್ಲಿ ಕೇವಲ ಅರ್ದದಷ್ಟು 133 (44.3%) ಕುರ್ಚಿಗಳನ್ನು ಹೊಂದಿದ್ದು ಅದರಲ್ಲಿ 16.67% ಮಾತ್ರ ಉತ್ತಮ ಗುಣಮಟ್ಟದ ಕುರ್ಚಿಗಳನ್ನು ಹೊಂದಿರುತ್ತಾರೆ, ಉಳಿದ 18.3% ಪೌರಕಾರ್ಮಿಕರು ಸಾದಾರಣ ಗುಣಮಟ್ಟದ ಕುರ್ಚಿಗಳನ್ನು ಹೊಂದಿರುವುದನ್ನು ಕಾಣಬಹುದು. ಅದೇ ರೀತಿ 9.33% ಜನ ಪೌರಕಾರ್ಮಿಕರು ಅತೀ ಕಳಪೆ ಪ್ರಮಾಣದ ಗುಣಮಟ್ಟದ ಕುರ್ಚಿಗಳನ್ನು ಹೊಂದಿರುತ್ತಾರೆ. 300 ಪೌರಕಾರ್ಮಿಕರಲ್ಲಿ167 (55.67%) ಜನ ಕುರ್ಚಿ ಹೊಂದಿರುವುದಿಲ್ಲ.ಆಧುನಿಕ ಮೂಲಭೂತ ಸವಲತ್ತುಗಳು ಆದಂತಹ ಸೋಪಾ ಸೆಟ್ಟು 300 ಜನ ಮಾಹಿತಿದಾರರಲ್ಲಿ 79.3% ಮಾಹಿತಿದಾರರು ಮಂಚವನ್ನು ಹೊಂದಿರುವವರು ಇದ್ದಾರೆ. ಇವರುಗಳಲ್ಲಿ ಶೇಕಡ 9.33 ಜನ ಉತ್ತಮವಾದ ಮಂಚವನ್ನು ಹೊಂದಿದ್ದರೆ, ಇನ್ನೂ ಕೆಲವರು ಶೇಕಡ 15 ಜನ ಸಾದಾರಣ ಮಂಚವನ್ನು ಹೊಂದಿರುವವರು ಆಗಿರುತ್ತಾರೆ. ಕೊನೆಯದಾಗಿ 45 ಶೇಕಡ ಪೌರಕಾರ್ಮಿಕರು ಹೊಂದಿರುವ ಮಂಚ ಬಹಳ ಕಳಪೆ ಪ್ರಮಾಣದ್ದು ಆಗಿರುತ್ತದೆ ಎಂಬುದಾಗಿ ಹೇಳಿಕೊಂಡಿರುತ್ತಾರೆ. ಇನ್ನುಳಿದ 20.67 ಶೇಕಡ ಜನರು ಮಂಚವನ್ನು ಹೊಂದಿರುವುದಿಲ್ಲ ಅದಕ್ಕೆ ಕಾರಣ ಕೇಳಿದಾಗ ಅದನ್ನೆಲ್ಲ ಖರೀದಿಸಿದರು ಮನೆಯ ಒಳಗೆ ಇಡಲು ಸರಿಯಾದ ವ್ಯವಸ್ಥೆ ಇಲ್ಲ ಎಂಬುದಾಗಿ ಹೇಳಿಕೊಂಡಿರುತ್ತಾರೆ.

ಪೌರಕಾರ್ಮಿಕರು ನಿರ್ವಹಿಸುವ ವಿವಿಧ ಬಗೆಯ ಕೆಲಸಗಳು

ಪೌರಕಾರ್ಮಿಕರು ನಿರ್ವಹಿಸುವ ವಿವಿಧ ಬಗೆಯ ಕೆಲಸಗಳ ಮಾಹಿತಿಯ ಪ್ರಕಾರ ಕಸ ಗುಡಿಸುವವರು ಅಂದರೆ ರಸ್ತೆ, ಮಾರುಕಟ್ಟೆ ಬಸ್ಸು ನಿಲ್ದಾಣ ಮುಂತಾದ ಸಾರ್ವಜನಿಕ ಸ್ಥಳಗಳನ್ನು ಗುಡಿಸಿ ಸ್ವಚ್ಚಗೊಳಿಸುವವರಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ಕಂಡು ಬಂದಿರುತ್ತದೆ. ಕಸ ಗುಡಿಸುವವರ ಮಾಹಿತಿಯ ಪ್ರಕಾರ 31.96 ಶೇಕಡ ಮಾಹಿತಿದಾರರು ಗುಡಿಸುವ ಕೆಲಸದಲ್ಲಿ ತೊಡಗಿದ್ದು. ಇವರುಗಳಲ್ಲಿ ಸರಿಸುಮಾರು 62.58 ಶೇಕಡ ಮಹಿಳೆಯರೇ ಆಗಿರುತ್ತಾರೆ, ಬರೇ (3) ಶೇಕಡ 1.96 ಮಾತ್ರ ಪುರುಷರು ಗುಡಿಸುವ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಪೌರಕಾರ್ಮಿಕರಲ್ಲಿ ಮತ್ತೊಂದು ಪ್ರಮುಖವಾದ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರನ್ನು ಒಳಗೊಂಡಿರುವ ಕೆಲಸ ಎಂದರೆ ಅಂಗಡಿ ಮುಗ್ಗಟ್ಟು ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯಗಳನ್ನು

ಶೇಖರಿಸಿಡಲು ಕಸದ ಬುಟ್ಟಿಗಳನ್ನು ಇಟ್ಟಿರುತ್ತಾರೆ. ಆ ಬುಟ್ಟಿಗಳಲ್ಲಿ ತುಂಬಿದ ಕಸಗಳನ್ನು ತ್ಯಾಜ್ಯ ವಿಲೇವಾರಿ ಲಾರಿಗಳಲ್ಲಿ ತುಂಬಿಸಿ ಅದನ್ನು ಮಹಾನಗರ ಪಾಲಿಕೆ ನಿಗದಿ ಪಡಿಸಿರುವ ಸ್ಥಳಕ್ಕೆ (Dumpingyard) ಸಾಗಿಸಿ ಅದನ್ನು ಅಲ್ಲಿ ಇಳಿಸಿ ಬರುವುದು ಇವರ ಕೆಲಸವಾಗಿರುತ್ತದೆ. ಲಾರಿಗಳಲ್ಲಿ ತ್ಯಾಜ್ಯಗಳನ್ನು ತುಂಬುವ ಕೆಲಸಗಳಲ್ಲಿ ಮಹಿಳೆಯರು ಮತ್ತು ಪುರುಷರು ಇಬ್ಬರು ಸಹ ಕಾರ್ಯನಿರ್ವಹಿಸುತ್ತಿದ್ದಾರೆ. ತ್ಯಾಜ್ಯ ವಿಲೇವಾರಿ ವಾಹನಗಳಲ್ಲಿ ಐದು, ಆರು ಜನ ಕೆಲಸಮಾಡುವುದನ್ನು ಕಾಣಬಹುದು. ಕಸದ ಬುಟ್ಟಿಗಳಲ್ಲಿ ಶೇಖರಿಸಿದ ತ್ಯಾಜ್ಯಗಳನ್ನು ಲಾರಿಗಳಿಗೆ ತುಂಬಲು ಸಾಮಾನ್ಯವಾಗಿ ಗಂಡಸರು ನಿಂತರೆ. ಕಸದ ಬುಟ್ಟಿ (Dustbin) ಯಲ್ಲಿ ಶೇಖರವಾಗಿದ್ದ ಕಸವನ್ನು ಎತ್ತಿಕೊಂಡು ಲಾರಿಗೆ ಸಾಗಿಸಲು ಒಂದೆರಡು ಮಹಿಳೆಯರು ಇರುತ್ತಾರೆ, ಅದೇ ರೀತಿ ಆ ಕಸವನ್ನು ಸರಿಯಾದ ರೀತಿಯಲ್ಲಿ ತುಂಬಲು ಲಾರಿಯ ಮೇಲೆ ಒಬ್ಬ ಪುರುಷ ನಿಂತುಕೊಂಡಿರುತ್ತಾನೆ. ಹೀಗೆ ತುಂಬಿದ ಲಾರಿಯನ್ನು ಚಲಾಯಿಸಲು ಒಬ್ಬ ಚಾಲಕ ಇರುತ್ತಾನೆ. ಹೀಗೆ ಒಂದು ಲಾರಿಯಲ್ಲಿ ಸರಿಸುಮಾರು ಆರರಿಂದ ಏಳು ಜನ ಕೆಲಸ ಮಾಡುವುದನ್ನು ಕಾಣಬಹುದು. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಅರವತ್ತು ವಾರ್ಡುಗಳು ಇದ್ದು ಪ್ರತೀ ವಾರ್ಡುಗಳಲ್ಲೂ ಒಂದೆರಡು ಲಾರಿಗಳಲ್ಲಿ ತ್ಯಾಜ್ಯ ವಿಲೇವಾರಿಯನ್ನು ಮಾಡುತ್ತಾರೆ. ತ್ಯಾಜ್ಯ ವಿಲೇವಾರಿಯು ಸಾಮಾನ್ಯವಾಗಿ ಮುಂಜಾನೆ 5.30 ರ ವೇಳೆಗೆ ಪ್ರಾರಂಭಿಸುತ್ತಾರೆ. ಈ ಕೆಲಸದಲ್ಲಿ ಪುರುಷರು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ನಿರ್ವಹಿಸುವುದು ಕಂಡು ಬಂದಿದೆ. ಅವರಲ್ಲಿ 132 (44%) ಕೆಲಸಗಾರರಲ್ಲಿ ಸರಿಸುಮಾರು 60.78 ಶೇಕಡ (93) ಕೆಲಸಗಾರರು ಪುರುಷರು ಆಗಿರುತ್ತಾರೆ, ಅದೇ ಕೆಲಸದಲ್ಲಿ ಸರಿಸುಮಾರು 26.73 ಶೇಕಡ (39) ಕೆಲಸಗಾರರು ಮಹಿಳೆಯರು ಆಗಿರುತ್ತಾರೆ.

ಪೌರಕಾರ್ಮಿಕರ ವಿಶೇಷವಾದಂತ ಕೆಲಸ ಎಂದರೆ ಒಳ ಮತ್ತು ತೆರೆದ ಚರಂಡಿಗಳನ್ನು ಶುದ್ದಗೊಳಿಸುವುದು, ಚರಂಡಿಗಳು ಸರಾಗವಾಗಿ ಕೆಲಸ ನಿರ್ವಹಿಸದಿದ್ದರೆ ಅವುಗಳು ಕಾರ್ಯ ನಿರ್ವಹಿಸುವಂತೆ ಮಾಡುವುದು ಮುಂತಾದ ಕೆಲಸಗಳನ್ನು ನಿರ್ವಹಿಸುವಂತ ಕೆಲವು ಕಾರ್ಮಿಕರು ಇದ್ದಾರೆ, ಅವರು ಸಾಮಾನ್ಯವಾಗಿ ಇದರ ಜವಬ್ದಾರಿಯನ್ನು ನೋಡಿಕೊಳ್ಳುವವರು ಆಗಿರುತ್ತಾರೆ. ಇವರೆಲ್ಲರು ಹೆಚ್ಚಾಗಿ ಅವರ ತಂದೆ ತಾಯಂದಿರ ನಂತರದಲ್ಲಿ ಈ ಕೆಲಸವನ್ನು ಮುಂದುವರಿಸಿಕೊಂಡು ಬಂದಿದ್ದೇವೆ ಎಂಬುದಾಗಿ ಹೇಳುತ್ತಾರೆ. ಅವರು ಸಾಮಾನ್ಯವಾಗಿ ಕೊರಗ ಸಮುದಾಯಕ್ಕೆ ಸೇರಿರುವವರು ಆಗಿರುತ್ತಾರೆ. ಇದು ಯಾಕೆ ಎಂದು ಪ್ರಶ್ನಿಸಿದಾಗ ಅವರು ನೀಡಿದ ಉತ್ತರ, ಅವರ ತಂದೆ ತಾಯಂದಿರರು ಅದನ್ನೇ ಮಾಡಿಕೊಂಡಿದ್ದರು ಅದಕ್ಕೆ ಆ ಕೆಲಸ ಸ್ವಲ್ಪ ಕಷ್ಟಾಕರವಾದದ್ದು ಆಗಿದ್ದರಿಂದ, ಎಲ್ಲರಿಗೂ ಈ ಕೆಲಸ ಮಾಡಲು ಸಾಧ್ಯವಿಲ್ಲದ ಕಾರಣ ಅವರೇ ಮಾಡುತ್ತಾರೆ ಎಂಬುದಾಗಿ ಉತ್ತರಿಸಿರುತ್ತಾರೆ. 300 ಜನ ಪೌರಕಾರ್ಮಿಕರಲ್ಲಿ ಸರಿಸುಮಾರು 23 (7.67%) ಜನರು ಒಳಚರಂಡಿ ಕೆಲಸವನ್ನು ಮಾಡುವವರು ಇದ್ದಾರೆ. ಇದು ಸ್ವಲ್ಪ ಕಷ್ಟಕರವಾದದ್ದು ಆಗಿದ್ದರಿಂದ ಹೆಚ್ಚಾಗಿ ಪುರುಷರೇ ಈ

ಕೆಲಸದಲ್ಲಿ ಇರುವುದು ಕಂಡು ಬಂದಿದೆ. 23 ಜನ ಒಳಚರಂಡಿ ಕೆಲಸ ಮಾಡುವವರಲ್ಲಿ ಶೇಕಡ 90 ಭಾಗದಷ್ಟು ಜನ ಪುರುಷರೇ ಆಗಿರುತ್ತಾರೆ, ಕೇವಲ 10 ಶೇಕಡ ಜನ ಮಾತ್ರ ಮಹಿಳೆಯರು ಆಗಿರುತ್ತಾರೆ.

ಮಹಿಳಾ ಪೌರಕಾರ್ಮಿಕರು ನಿರ್ವಹಿಸುವಂತ ವಿವಿಧ ಬಗೆಯ ಕೆಲಸಗಳು: ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಮಹಿಳೆಯರು ನಿರ್ವಹಿಸುತ್ತಿರುವ ವಿವಿಧ ಬಗೆಯ ಪೌರಕಾರ್ಮಿಕ ಉದ್ಯೋಗಗಳು ಅಥವಾ ಕೆಲಸಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಪ್ರಮುಖವಾದ ಕಾರಣವೇನೆಂದರೆ, ಕೊಳಚೆ ಪ್ರದೇಶಗಳಲ್ಲಿ ಅಥವಾ ಬುಡಕಟ್ಟು ಸಮುದಾಯಗಳಲ್ಲಿ ಕುಟುಂಬ ನಿರ್ವಹಣೆಯಲ್ಲಿ ಮಹಿಳೆ ಪ್ರಮುಖವಾದ ಪಾತ್ರವಹಿಸುತ್ತಿರುವುದು ಕಂಡು ಬರುತ್ತದೆ. ಗಂಡಸರು ದುಡಿಮೆಯಲ್ಲಿ ತೊಡಗಿಕೊಂಡಿದ್ದರೂ, ಹೆಚ್ಚಿನ ಆದಾಯವನ್ನು ಸಂಪಾದಿಸಿದರೂ, ಕುಟುಂಬಕ್ಕೆ ಅವರ ಉಪಯೋಗ ಬಹಳ ಕಡಿಮೆ. ಗಂಡಸರು ತಮ್ಮ ಹೆಚ್ಚಿನ ಪ್ರಮಾಣದ ಆದಾಯವನ್ನು ಕುಡಿತ ಮತ್ತಿತ್ತರ ದುಶ್ಚಟಗಳಿಗೆ ಉಪಯೋಗಿಸುವಂತದ್ದು ಕಂಡು ಬರುತ್ತದೆ. ಹೆಚ್ಚಾಗಿ ಮಹಿಳೆಯರು ಅಂತಹ ಯಾವುದೇ ರೀತಿಯ ದುಶ್ಚಟಗಳಿಗೆ ಬಲಿಯಾಗಿರದೆ, ತಮ್ಮೆಲ್ಲಾ ದುಡಿಮೆಯನ್ನು ಕುಟುಂಬ ನಿರ್ವಹಣೆಗೆ ಉಪಯೋಗಿಸುತ್ತಿರುವುದನ್ನು ಕಾಣಬಹುದು. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಮಹಿಳೆಯರು ಹೆಚ್ಚಾಗಿ ತೊಡಗಿಕೊಂದಿರುವ ವೃತಿಯೆಂದರೆ ರಸ್ತೆ ಬದಿ, ಸಾರ್ವಜನಿಕ ಸ್ಥಳಗಳಲ್ಲಿ ಕಸಗುಡಿಸುವುದಾಗಿದೆ ಇದರಲ್ಲಿ ಶೇಕಡ 62.6 ಮಹಿಳೆಯರಿದ್ದಾರೆ, ಅದೇ ರೀತಿಯಲ್ಲಿ ಶೇಖರಿಸಿದ ತ್ಯಾಜ್ಯಗಳನ್ನು ಲಾರಿಗಳಿಗೆ ತುಂಬಿಸುವ ಕೆಲಸದಲ್ಲಿ 23.5 ಶೆಕಡ ಇದ್ದಾರೆ, ಇನ್ನುಳಿದ 11 ಶೇಕಡ ಮಹಿಳೆಯರು ಪಾಯಿಖಾನೆ ಶುಚಿಗೊಳಿಸುವುದು, ಚರಂಡಿ ಶುದ್ಧೀಕರಣ ಮತ್ತು ಕಸ ಬೇರ್ಪಡಿಸುವುದರಲ್ಲಿ ತೊಡಗಿಕೊಂಡಿದ್ದಾರೆ.

ಪೌರಕಾರ್ಮಿಕರಿಗೆ ವೃತ್ತಿ ದೊರಕಿದ ವಿಧಾನ

ಪೌರಕಾರ್ಮಿಕರು ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಯಂ ಅಗಿ ಕಾರ್ಯ ನಿರ್ವಹಿಸುವ ಹೆಚ್ಚಿನ ಪೌರಕಾರ್ಮಿರ ತಂದೆ ತಾಯಿ ಇದೇ ವೃತ್ತಿಯಲ್ಲಿ ತೊಡಗಿದ್ದು ಅವರ ಮರಣ ಅಥವಾ ನಿವೃತ್ತಿಯ ನಂತರದಲ್ಲಿ ಅವರ ಮಕ್ಕಳು ಮುಂದುವರೆಸಿಕೊಂಡು ಹೊಗುತ್ತಿರುವು ಕಾಣಬಹುದು ಇದರಂತೆ ತಂದೆ ತಾಯಿಯ ಮುಖಾಂತರ ಈ ವೃತ್ತಿಗೆ ಬಂದವರಲ್ಲಿ ಶೇಕಡಾ 11 ರಷ್ಟು ಕಾರ್ಮಿಕರಿದ್ದಾರೆ. ಇನ್ನು ಕೆಲವರು ಹೇಳಿದ ಪ್ರಕಾರ ತಮ್ಮ ಪರಿಚಯಸ್ಥರು ಈ ವೃತ್ತಿಯಲ್ಲಿ ತೊಡಗಿರುವುದರಿಂದ ಅವರಿಂದಾಗಿ ಈ ವೃತ್ತಿಯನ್ನು ಮಾಡುತ್ತಿದ್ದೇವೆ ಎಂಬುದಾಗಿ ತಿಳಿಸಿದ್ದಾರೆ. 21 ಶೆಕಡಾ ಮಾಹಿತಿದಾರರ ಪ್ರಕಾರ ತಾವು ಸ್ವಂತ ಇಚ್ಛೆಯಿಂದ ಈ ವೃತ್ತಿಯನ್ನು ಆರಿಸಿಕೊಂಡಿದ್ದೇವೆ ಎಂಬುದಾಗಿ ತಿಳಿಸಿದ್ದಾರೆ. 60 ಶೇಕಡಾ ಮಾಹಿತಿದಾರರು ತಿಳಿಸಿದ ಪ್ರಕಾರ ಜಾಹಿರಾತಿನ ಮುಖಾಂತರ ಈ ವೃತ್ತಿ ದೊರಕಿತು ಎಂಬುದಾಗಿ ತಿಳಿಸಿದ್ದಾರೆ.

ಪೌರಕಾರ್ಮಿಕರ ಕೆಲಸದ ಸ್ಥಿತಿಗತಿ

ಸಮಾಜದಲ್ಲಿ ಒಂದು ನಿರ್ದಿಷ್ಟ ವಿಭಾಗವು ಸಾಂಪ್ರದಾಯಿಕವಾಗಿ ತ್ಯಾಜ್ಯ ಉತ್ಪನ್ನಗಳನ್ನು ವಿಲೇವಾರಿ ಮಾಡುವುದರ ಜೊತೆಗೆ ಮನುಷ್ಯನ ಮಲ ವಿಲೇವಾರಿ ಮಾಡುವ ಪದ್ಧತಿಯನ್ನು ಹೊಂದಿರುವ ದೇಶಗಳಲ್ಲಿ ವಿಶ್ವದಲ್ಲಿ ಭಾರತವು ಏಕೈಕ ದೇಶವಾಗಿದೆ. ಈ ವೃತ್ತಿಯಲ್ಲಿ ತೊಡಗಿರುವವರು ತಮ್ಮ ತಲೆಯ ಮೇಲೆ ನೈಟ್ ಸೋಯಿಲನ್ನು ಹೊತ್ತೊಯ್ಯುವ ಮತ್ತು ಬರೀ ಕೈಯಲ್ಲಿ ಮನುಷ್ಯನ ಮಲವನ್ನು ತೆಗೆಯುವ ಪದ್ಧತಿ ಇಂದಿಗೂ ಆಚರಣೆಯಲ್ಲಿರುವುದು ದೇಶಕ್ಕೆ ಅವಮಾನ ಉಂಟುಮಾಡುವ ವಿಷಯವಾಗಿದೆ. 64 ವರ್ಷಗಳ ಹಿಂದೆಯೇ ಬ್ರಿಟಿಷರ ಗುಲಾಮಗಿರಿಯಿಂದ ಸ್ವಾತಂತ್ರ್ಯವನ್ನು ಪಡೆದುಕೊಂಡ ದೇಶವು ಮಾನಸಿಕ ಬಂಧನದಿಂದ ಭಂಗಿಗಳು, ಮೆಹತರ್‌ಗಳು, ಬಾಲ್ಮಿಕಿ ಮುಂತಾದ ಸಮುದಾಯಕ್ಕೆ ಸೇರಿದ ಒಂದು ಲಕ್ಷಕ್ಕೂ ಹೆಚ್ಚು ಜನರನ್ನು ಸ್ವತಂತ್ರಗೊಳಿಸಲು ಸಾಧ್ಯವಾಗಲಿಲ್ಲ ಮತ್ತು ಅವರು ಇನ್ನೂ ಸಾಂಪ್ರದಾಯಿಕ ಆಕ್ರಮಣದಲ್ಲಿ ತೊಡಗಿಕೊಂಡಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸ್ಕ್ಯಾವೆಂಜರ್‌ಗಳ ಸನ್ನಿವೇಶಗಳು ವಿಭಿನ್ನವಾಗಿರುತ್ತದೆ. ನಗರಗಳಲ್ಲಿ ವಾಸವಾಗಿರುವ ಸ್ಕ್ಯಾವೆಂಜಿಂಗ್ ವರ್ಗವು ಪುರಸಭೆ, ನಗರಪಾಲಿಕೆ, ಆಸ್ಪತ್ರೆ, ಕಾಲೇಜು, ವಸತಿ, ಶುಶ್ರೂಷಾ ಮನೆ ಮತ್ತು ಇತರ ಸಂಸ್ಥೆಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಆದ್ದರಿಂದ ಅವರು ತಮ್ಮದೇ ಆದ ಸಂಘಟನೆಗಳು ಮತ್ತು ಕಾರ್ಮಿಕ ಸಂಘಗಳನ್ನು ರೂಪಿಸಲು ಸಾಕಷ್ಟು ಜ್ಞಾನವನ್ನು ಹೊಂದಿದ್ದಾರೆ ಮತ್ತು ತಮ್ಮ ಉದ್ಯೋಗದಾತರೊಂದಿಗೆ ಮುಖಾ ಮುಖಿಯಲ್ಲಿ ಯಾವುದೇ ಹಿಂಜರಿಕೆಯಿಲ್ಲದೆ ತಮ್ಮ ಯೋಗ್ಯತೆಯನ್ನು ತೋರಿಸುತ್ತಾರೆ.

ವೃತ್ತಿಯ ಅನುಭವ

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಪೌರಕಾರ್ಮಿಕರು ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಾರೆ ಎಂಬೂದರ ವಿಷಯದ ಬಗ್ಗೆ ಮಾಹಿತಿ ಸಂಗ್ರಹಿಸಿದಾಗ ಬಹಳಷ್ಟು ಜನ ಕಾರ್ಮಿಕರು ಪೌರಕಾರ್ಮಿಕರಾಗಿ ತುಂಬಾ ವರ್ಷಗಳಿಂದ ದುಡಿಯುತ್ತಿರುವುದು ತಿಳಿದು ಬಂದಿದೆ. ಇವರಲ್ಲಿ ಇತ್ತೀಚೆಗೆ ಅಂದರೆ 1 ವರ್ಷಕ್ಕಿಂತ ಕಡಿಮೆ ಅವಧಿಯಿಂದ ಕೆಲಸ ನಿರ್ವಹಿಸುತ್ತಿರುವವರು ಬರೇ (42) 14 ಶೇಕಡ ಜನ ಮಾತ್ರ ಇದ್ದಿರುವುದು ಕಂಡು ಬಂದಿದೆ. ಇನ್ನುಳಿದಂತಹ ಕಾರ್ಮಿಕರು ತುಂಬ ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವವರು ಆಗಿರುತ್ತಾರೆ. ಅವರಲ್ಲಿ ಸರಿಸುಮಾರು ಶೇಕಡ 37 ಜನ 1-5 ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವುದು ಕಂಡು ಬಂದರೆ, ಅದೇ 5- 10 ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವವರು ಸರಿಸುಮಾರು (6) ಶೇಕಡ 2 ಇದ್ದಿರುವುದು ಕಂಡು ಬಂದಿದೆ. ಅದೇ ರೀತಿ 20 ವರ್ಷಕ್ಕಿಂತಲೂ ಹೆಚ್ಚು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವವರು ಸರಿಸುಮಾರು (77) ಶೇಕಡ 25.7 ಜನ ಇದ್ದಾರೆ. ಇವರೆಲ್ಲರೂ ಮಹಾನಗರ ಪಾಲಿಕೆಯಲ್ಲಿ ಖಾಯಂ ಉದ್ಯೋಗಿಗಳಾಗಿ ಕಾರ್ಯನಿರ್ವಹಿಸುವವರಾಗಿದ್ದಾರೆ. ಇನ್ನುಳಿದ ಬರೇ 13 ಶೇಕಡ ಜನರು 15 ರಿಂದ 20 ವರ್ಷಗಳಿಂದ ಕೆಲಸ

ನಿರ್ವಹಿಸುತ್ತಿದ್ದಾರೆ ಎಂಬುದು ತಿಳಿದು ಬಂದಿದೆ, ಇವರುಗಳು ಕೂಡ ಮಹನಗರ ಪಾಲಿಕೆಯಲ್ಲಿ ಖಾಯಂ ಉದ್ಯೋಗಿಗಳು ಎಂಬುದು ತಿಳಿದು ಬಂದಿದೆ.

ಪೌರಕಾರ್ಮಿಕರು ಮಾಡುವ ಕೆಲಸದ ಅವದಿ

ಪೌರಕರ್ಮಿಕರು ಕೆಲಸ ಮಾಡುವ ಸಮಯ ಸಾಮನ್ಯವಾಗಿ ಎಲ್ಲಾ ಕಡೆಗಳಲ್ಲೂ ಒಂದೇ ರೀತಿಯದ್ದಾಗಿರುತ್ತದೆ. ಪೌರಕಾರ್ಮಿಕರು ಬೆಳಗ್ಗೆ 5.30 ರಿಂದ ಮಧ್ಯಾಹ್ನ 2 ಗಂಟೆಯ ವರೆಗೆ ಕೆಲಸ ಮಾಡುತ್ತಾರೆ. ಕೆಲವು ಬಾರಿ ಅವರು ಸಂಜೆ 4 ಗಂಟೆಯವರೆಗೂ ಕೆಲಸ ಮಾಡಬೇಕಾಗುತ್ತದೆ. ಒಳ ಚರಂಡಿ ಶುದ್ಧೀಕರಣ ಮತ್ತು ಲಾರಿಗಳಲ್ಲಿ ತ್ಯಾಜ್ಯವನ್ನು ತುಂಬಿ ಅದನ್ನು ವಿಲೇವಾರಿ ಮಾಡುವ ಕೆಲಸ ಮಾಡುವವರು ಹೆಚ್ಚಾಗಿ ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡುತ್ತಾರೆ. ಗುತ್ತಿಗೆ ಕಾರ್ಮಿಕರಲ್ಲಿ ಕೆಲವರು ರಾತ್ರಿ ಸಹ ಕೆಲಸ ಮಾಡುವುದಾಗಿ ತಿಳಿಸಿದ್ದಾರೆ. ಇದರ ಅನ್ವಯ ಶೇಕಡಾ 1.3(6) ರಷ್ಟು ಕಾರ್ಮಿಕರು 6 ಗಂಟೆಗಳ ಕಾಲ ಕೆಲಸ ಮಾಡುವವರಾಗಿದ್ದಾರೆ. ಶೇಕಡಾ 89.3 (268) ರಷ್ಟು ಕಾರ್ಮಿಕರು ಹೇಳಿರುವ ಪ್ರಕಾರ ಅವರು 6-8 ಗಂಟೆಗಳ ಕಾಲ ಕೆಲಸವನ್ನು ಮಾಡುತ್ತಾರೆ. ಶೇಕಡಾ 4.3(13) ರಷ್ಟು ಮಾಹಿತಿದಾರರು ಹೇಳಿರುವ ಪ್ರಕಾರ ಅವರು 8-10 ಗಂಟೆಗಳ ಕಾಲ ಕೆಲಸ ಮಾಡುತ್ತಾರೆ ಎಂಬುದಾಗಿ ತಿಳಿಸಿದ್ದಾರೆ. ಶೇಕಡಾ 5 (15) ರಷ್ಟು ಕಾರ್ಮಿಕರು 10-12 ಗಂಟೆಗಳ ಕಾಲ ಕೆಲಸ ಮಾಡುತ್ತಾರೆ.

ಪೌರಕಾರ್ಮಿಕರು ನಿರ್ವಹಿಸುವ ಕೆಲಸದ ಸ್ಥಳಕ್ಕೆ ಇರುವ ಅಂತರ

ಮಾಹಿತಿದಾರರ ನಿವಾಸ ಮತ್ತು ಅವರು ಮಾಡುತ್ತಿರುವ ಕೆಲಸದ ಸ್ಥಳಕ್ಕೆ ಇರುವ ಅಂತರ ಮತ್ತು ಅವರು ಯಾವ ರೀತಿ ಅಲ್ಲಿಗೆ ಪ್ರಯಾಣಿಸುತ್ತಾರೆ ಎಂಬುದರ ಮಾಹಿತಿಗೆ ಅನುಗುಣವಾಗಿ ಮಾಹಿತಿದಾರರ ನಿವಾಸಕ್ಕಿಂತ ಅವರ ಕೆಲಸದ ಸ್ಥಳಕ್ಕೆ 1 ಕೀಮಿ ರಿಂದ 7 ಮೀ ವರೆಗೂ ಅಂತರ ಇದ್ದು ಕೆಲವರು ಕಾಲ್ನಡಿಗೆ, ಕಛೇರಿ ವಾಹನ ಬಸ್ಸು ಆಟೋ ಮತ್ತು ದ್ವಿ ಚಕ್ರ ವಾಹನಗಳ ಮೂಲಕ ಪ್ರಯಾಣಿಸುತ್ತೇವೆ ಎಂಬುದಾಗಿ ತಿಳಿಸಿದ್ದಾರೆ ಅವರ ಮಾಹಿತಿಯ ಪ್ರಕಾರ 67 ಮಾಹಿತಿದಾರರು ಹೇಳಿರುವ ಪ್ರಕಾರ ತಮ್ಮ ಕೆಲಸದ ಸ್ಥಳಕ್ಕೆ 1 ಕಿ ಮೀ ಅಂತರವಿದ್ದು ಅವರಲ್ಲಿ 82 ಶೇಕಡಾ ಕಾಲ್ನಡಿಗೆಯಲ್ಲಿ ಹೋಗುತ್ತೇವೆ ಎಂಬುದಾಗಿ ತಿಳಿಸಿದ್ದಾರೆ 18 ಶೇಕಡಾ ಮಾಹಿತಿದಾರರು ತ್ಯಾಜ್ಯ ವಿಲೇವಾರಿಯ ಕಛೇರಿ ವಾಹನಗಳಲ್ಲಿ ಪ್ರಯಾಣಿಸುತ್ತೇವೆ ಎಂಬುದಾಗಿ ತಿಳಿಸಿದ್ದಾರೆ. 110 ಮಾಹಿತಿದಾರರ ಪ್ರಕಾರ 1 ರಿಂದ 3 ಕಿ.ಮೀ ಅಂತರವಿದ್ದು 12 ಶೇಕಡಾ ಕಾಲ್ನಡಿಗೆಯಲ್ಲಿ ಪ್ರಯಾಣಿಸಿದರೆ 14.5 ಶೇಕಡಾ ಕಛೇರಿ ವಾಹನದಲ್ಲಿ ಪ್ರಯಾಣಿಸುವವರಾಗಿದ್ದು 58.1 ಶೇಕಡಾ ಬಸ್ಸುಗಳಲ್ಲಿ ಪ್ರಯಾಣಿಸುತ್ತಾರೆ, ಆಟೋ ಮತ್ತು ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುವವರು 14.5 ಶೇಕಡಾದಷ್ಟಿದ್ದಾರೆ. 39 ಮಾಹಿತಿದಾರರು ಹೇಳಿದಂತೆ ಕೆಲಸ ಸ್ಥಳಕ್ಕೆ ಮತ್ತು ಅವರ ನಿವಾಸಕ್ಕೆ ಇರುವ ಅಂತರ 5 ರಿಂದ 7 ಕಿ.ಮೀ ಇದ್ದು ಇವರಲ್ಲಿ 47 ಶೇಕಡಾ ಬಸ್ಸು, ಆಟೋದಲ್ಲಿ

ಪ್ರಯಾಣಿಸುವವರಾಗಿದ್ದಾರೆ ಇನ್ನುಳಿದ 15.3 ಶೇಕಡಾ ಮಾಹಿತಿದಾರರು ಕಛೇರಿ ವಾಹನದಲ್ಲಿ ಹೋಗುತ್ತೇವೆ ಎಂಬುದಾಗಿ ತಿಳಿಸಿದ್ದಾರೆ.

ಪೌರಕಾರ್ಮಿಕರ ಆದಾಯ ಮಟ್ಟ

ಮಂಗಳೂರಿನಲ್ಲಿ ಪೌರಕಾರ್ಮಿಕರಾಗಿ ಕೆಲಸ ನಿರ್ವಹಿಸುವವರ ಆದಾಯ ಅವರು ನಿರ್ವಹಿಸುವ ಕೆಲಸಗಳಿಗೆ ಹೊಂದಿಕೊಂಡಿರುತ್ತದೆ. ಅದೇ ರೀತಿ ಅವರು ಹೊಂದಿರುವ ಉದ್ಯೋಗದ ಸ್ವರೂಪಕ್ಕೆ ಹೊಂದಿಕೊಂಡಿರುತ್ತದೆ. ಅಂದರೆ ಪೌರಕಾರ್ಮಿಕರಾಗಿ ದುಡಿಯುವವರು ನಗರ ಪಾಲಿಕೆಯಿಂದ ಖಾಯಂ ಉದ್ಯೋಗಿಯೇ ಅಥವಾ ದಿನಗೂಲಿ ನೌಕರನೇ ಎಂಬುದನ್ನು ಸೂಚಿಸುತ್ತದೆ. ದಿನಗೂಲಿ ನೌಕರನಿಗೆ ತಿಂಗಳ ಅದಾಯ ಗರಿಷ್ಟ ಅಂದರೆ 8000 ಸಾವಿರದಿಂದ 16000 ಸಾವಿರದ ವರೆಗೂ ಇದ್ದರೇ ಅದೇ ಖಾಯಂ ಉದ್ಯೋಗಿಗೆ 20,000 ಸಾವಿರದಿಂದ ಆರಂಭಗೊಂಡರೆ ಸರಿಸುಮಾರು 25,000 ಸಾವಿರದ ವರೆಗೂ ಇರುವುದು ಕಂಡು ಬಂದಿದೆ. ಇದರ ಜೊತೆಗೆ ಆತನಿಗೆ ಇತರ ಕಾನೂನು ಬದ್ದ ಸರ್ಕಾರಿ ಸವಲತ್ತುಗಳಾದ, ಜೀವ ವಿಮೆ, ವೈದ್ಯಕೀಯ ಸೌಲಭ್ಯ, ವೈದ್ಯಕೀಯ ರಜೆ, ಹೆರಿಗೆ ರಜೆ, ಮತ್ತು, ವರ್ಷದ ಸಿ.ಎಲ್, ಎ.ಎಲ್ ಮುಂತಾದವುಗಳು ಸರ್ಕಾರಿ ನೌಕರನಿಗೆ ಲಭ್ಯವಿರುವ ಹಾಗೆ ಇವರಿಗೂ ದೊರಕುತ್ತದೆ. ನಗರವು ಹೆಚ್ಚು ಹೆಚ್ಚು ಬೆಳವಣಿಗೆ ಹೊಂದುತ್ತಾ ಹೋದ ಹಾಗೆ ನಗರಗಳಲ್ಲಿ ತ್ಯಾಜ್ಯಗಳು ಹೆಚ್ಚು ಹೆಚ್ಚು ಉತ್ಪತ್ತಿಯಾಗುತ್ತಿದ್ದು ಅದರ ನಿರ್ವಹಣೆಯಲ್ಲಿ ಸರ್ಕಾರವು ಪೂರ್ಣಕಾಲಿಕ ನೌಕರರನ್ನು ನೇಮಕ ಮಾಡುವಲ್ಲಿ ವಿಳಂಬ ಮಾಡುತ್ತಿರುವುದರಿಂದ, ನಗರ ಪಾಲಿಕೆಯು ತ್ಯಾಜ್ಯ ನಿರ್ವಹಣೆಯನ್ನು ಖಾಸಗಿ ಕಂಪೆನಿಗಳಿಗೆ ಗುತ್ತಿಗೆ ನೀಡುತ್ತಿದೆ. ಕೆಲವೊಂದು ನಗರಗಲಲ್ಲಿ ತ್ಯಾಜ್ಯ ನಿರ್ವಹಣೆಯನ್ನು ಖಾಸಗಿ ಕಂಪೆನಿಗಳೇ ನಿರ್ವಹಿಸುವುದನ್ನು ಕಾಣಬಹುದು. ಇದೇ ರೀತಿ ಮಂಗಳೂರು ನಗರ ಪಾಲಿಕೆಯಲ್ಲಿ ಕೂಡ ಪೌರಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿರುವವರಲ್ಲಿ ಹೆಚ್ಚಿನವರು ಖಾಸಗಿ ಕಂಪನಿಯೊಂದರಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವವರೇ ಜಾಸ್ತಿ. ಮಂಗಳೂರು ಮಹಾನಗರ ಪಾಲಿಕೆಯು 60 ವಾರ್ಡುಗಳಾಗಿ ವಿಭಾಗಗೊಂಡಿದ್ದು ಸುಮಾರು 1300 ಪೌರಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರಲ್ಲಿ ಮುಕ್ಕಾಲು ಭಾಗದಷ್ಟು ಕಾರ್ಮಿಕರು ಖಾಸಗಿ ಕಂಪೆನಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ನಗರ ಪಾಲಿಕೆಯಲ್ಲಿ ಖಾಯಂ ಆಗಿ ಕಾರ್ಯನಿರ್ವಹಿಸುವವರು ಬಹಳ ಕಡಿಮೆ ಸಂಖ್ಯೆಯಲ್ಲಿ ಇರುವುದನ್ನು ಕಾಣಬಹುದಾಗಿದೆ.

300 ಮಾಹಿತಿದಾರರಲ್ಲಿ ಶೇಕಡಾ 53.7 (161) ಮಾಹಿತಿದಾರರ ತಿಂಗಳ ಆದಾಯ 16000 ಕ್ಕಿಂತಲೂ ಕಡಿಮೆ ಇರುವುದು ಕಂಡು ಬಂದಿದೆ. ಇವರಲ್ಲಿ ಕೆಲವರು (8.67%) ಮಾಹಿತಿದಾರರು ತಿಂಗಳ ಆದಾಯ 8000 ಸಾವಿರಕ್ಕಿಂತಲೂ ಕಡಿಮೆ ಇದೆ ಎಂಬುದಾಗಿ ತಿಳಿಸಿದ್ದಾರೆ. ಇವರಲ್ಲಿ ಪುರುಷರು ಶೇಕಡ 7.84 ರಷ್ಟಿದ್ದಾರೆ, ಮಹಿಳೆಯರು 9.52 ಶೆಕಡದಷ್ಟಿದ್ದಾರೆ. ಇದಕ್ಕೆ ಕಾರಣವೇನೆಂದು ಕೇಳಿದಾಗ ಅವರು ಹೇಳಿದ ಪ್ರಕಾರ ತಾವು

ಗುತ್ತಿಗೆ ಅಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದು ವಾರದಲ್ಲಿ ಕೆಲವು ದಿನಗಳು ಮಾತ್ರ ಕೆಲಸ ಮಾಡುತ್ತೇವೆ. ನಾವು ಎಷ್ಟು ದಿನ ಕೆಲಸಕ್ಕೆ ಹೋಗುತ್ತೇವೆಯೋ ಅಷ್ಟು ದಿನದ ಸಂಬಳ ಮಾತ್ರ ದೊರೆಯುತ್ತದೆ. ಆದುದರಿಂದ ನಮ್ಮ ಸರಾಸರಿ ತಿಂಗಳ ಸಂಬಳ ಬಹಳ ಕಡಿಮೆ ಎಂಬುದಾಗಿ ಹೇಳಿರುತ್ತಾರೆ. ಇವರಲ್ಲಿ ಹೆಚ್ಚಿನವರು ಮದ್ದು ಸಿಂಪಡನೆ ಮತ್ತು ಹುಲ್ಲು ಕಟ್ಟು ಮಾಡುವವರು. ಈ ಕೆಲಸಗಳು ದಿನಂಪ್ರತಿ ಇರದೆ ವಾರದಲ್ಲಿ ಎರಡು ಅಥವಾ ಮೂರು ದಿನಗಳು ಮಾತ್ರ ಇರುತ್ತದೆ ಎಂಬುದಾಗಿ ತಿಳಿಸಿರುತ್ತಾರೆ. 8000 ದಿಂದ 12000ದವರೆಗೆ ಆದಾಯವನ್ನು ಹೊಂದಿದವರು ಶೇಕಡ 56.6ರಷ್ಟಿದ್ದು ಅವರಲ್ಲಿ ಪುರುಷರು 27.43 ಶೇಕಡಾದಷ್ಟಿದ್ದಾರೆ ಮಹಿಳೆಯರು 29.9 ಶೇಕಡದಷ್ಟಿದ್ದಾರೆ. ಅದೇ ರೀತಿ 12000ದಿಂದ 16000ದವರೆಗೆ ಆದಾಯವನ್ನು ಹೊಂದಿದವರು ಶೇಕಡ 40.3ಶೇಕಡ ಇದ್ದು ಅದರಲ್ಲಿ ಪುರುಷರು 18.9 ಶೆಕಡ ಇದ್ದು ಮಹಿಳೆಯರು 23.1 ಶೆಕಡ ಇದ್ದಾರೆ. ಇವರೆಲ್ಲಾ ಹೆಚ್ಚಾಗಿ ಗುತ್ತಿಗೆ ಮತ್ತು ಬದಲಿ ಕಾರ್ಮಿಕರಾಗಿದ್ದು ಇವರು ದಿನಕೂಲಿಗಾಗಿ ಕೆಲಸ ಮಾಡುವವರಾಗಿರುವುದರಿಂದ ಇವರ ತಿಂಗಳ ಆದಾಯವು ಕಡಿಮೆಯಾಗಿದೆ.

16000 ಕ್ಕಿಂತ ಹೆಚ್ಚು ಆದಾಯ ಹೊಂದಿರುವವರ ಮಾಹಿತಿಯ ಪ್ರಕಾರ 16000 ದಿಂದ 20000 ಆದಾಯವನ್ನು ಹೊಂದಿರುವವರು ಶೇಕಡಾ 48ರಷ್ಟಿದ್ದಾರೆ, ಅದರಲ್ಲಿ ಪುರುಷರು 23.5 ಶೇಕಡ ಮಹಿಳೆಯರು 24.4 ಶೆಕಡಾದಷ್ಟಿದ್ದಾರೆ. 20000 ದಿಂದ 25000 ದವರೆಗೆ ಆದಾಯವನ್ನು ಹೊಂದಿರುವವರು 32 ಶೆಕಡದಷ್ಟಿದ್ದು, ಪುರುಷರು 18.3 ಶೆಕಡಾ ಮತ್ತು ಮಹಿಳೆಯರು 8.1 ಶೆಕಡದಷ್ಟಿದ್ದಾರೆ. ಇವರೆಲ್ಲಾ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಯಂ ನೇಮಕಾತಿಯನ್ನು ಹೊಂದಿರುವವರಾಗಿದ್ದಾರೆ. ಪೌರಕಾರ್ಮಿಕರ ಮಾಸಿಕ ಆದಾಯವು 5000 ದಿಂದ 25000 ದ ವರೆಗೂ ಇದ್ದರೂ ಸಹಾ ಅವರು ಆದಾಯವು ಅಧಿಕವಾಗಿದೆ ಎಂಬುದಾಗಿ ಅರ್ಥೈಸಲು ಸಾಧ್ಯವಿಲ್ಲ, ಏಕೆಂದರೆ ಪೌರಕಾರ್ಮಿಕರು ಹೆಚ್ಚಾಗಿ ನಗರ ಪ್ರದೇಶಗಳಲ್ಲಿ ವಾಸವಾಗಿರುವುದರಿಂದ ನಗರಗಳಲ್ಲಿ ವಸತಿ, ಶಿಕ್ಷಣ, ವೈದ್ಯಕೀಯ ಸೌಲಭ್ಯ, ಇನ್ನಿತರ ವಸ್ತುಗಳಿಗೆ ದುಬಾರಿ ವೆಚ್ಚವನ್ನು ವಹಿಸಬೇಕಾದ ಕಾರಣದಿಂದಾಗಿ ಒಂದು ಕುಟುಂಬದಲ್ಲಿ ಗಂಡ ಹೆಂಡತಿ ಇಬ್ಬರು ದುಡಿಯುತ್ತಿದ್ದರು ಅವರ ಆದಾಯವು ಕೌಟುಂಬಿಕ ನಿರ್ವಹಣೆಗೆ ಸಾಕಾಗುವುದಿಲ್ಲ ಎಂಬುದಾಗಿ ತಿಳಿಸಿದ್ದಾರೆ.

ಪೌರಕಾರ್ಮಿಕರ ಉಳಿತಾಯ

ಪೌರಕಾರ್ಮಿಕರು ಮಾಡಿದಂತ ಉಳಿತಾಯದ ಮೂಲಗಳ ಪ್ರಕಾರ 300 ಪೌರಕಾರ್ಮಿಕರಲ್ಲಿ 175 ಪೌರಕಾರ್ಮಿಕರು ವಿವಿದ ರೀತಿಯಲ್ಲಿ ಉಳಿತಾಯವನ್ನು ಮಾಡಿರುತ್ತಾರೆ, ಉಳಿದ 125 ಕಾರ್ಮಿಕರು ಉಳಿತಾಯ ಮಾಡುವುದಿಲ್ಲ ಎಂಬುದಾಗಿ ತಿಳಿಸಿದ್ದಾರೆ. ಅವರಲ್ಲಿ ಹೆಚ್ಚಿನವರು (37.7%) ಮಾಹಿತಿದಾರರು ಬ್ಯಾಂಕ್‌ನಲ್ಲಿ ಖಾತೆಯನ್ನು ತೆರೆದು ಉಳಿತಾಯ ಮಾಡಿದರೆ, ಇನ್ನೂ ಕೆಲವರು ಉಳಿತಾಯದ ಇನ್ನೊಂದು ಮೂಲವಾದ ಆರ್.ಡಿ ಯ ಮೂಲಕ

ಪೋಷ್ಟ ಆಫೀಸಿನಲ್ಲಿ ಉಳಿತಾಯ ಮಾಡಿದವರು ಶೇಕಡಾ 1.1(2) ರಷ್ಟಿದ್ದಾರೆ. ಇನ್ನೂ ಕೆಲವರು ಜೀವವಿಮಾ ಯೋಜನೆಯಲ್ಲಿ ಲಭ್ಯವಿರುವ ಎಲ್.ಐ.ಸಿಯ ಮುಖಾಂತರ ಉಳಿತಾಯ ಮಾಡಿದವರು ಶೇಕಡಾ 60.6 (106) ರಷ್ಟಿದ್ದಾರೆ ಎಲ್.ಐ.ಸಿಯ ಮೂಲಕ ಉಳಿತಾಯ ಮಾಡುತ್ತಿರುವವರು ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಯಂ ಆಗಿ ವೃತ್ತಿ ಮಾಡುವವರಾಗಿದ್ದು ಅವರಿಗೆ ಎಲ್.ಐ.ಸಿ ಸೌಲಭ್ಯವನ್ನು ನೀಡಲಾಗಿದೆ.

ಪುರುಷ ಮತ್ತು ಮಹಿಳಾ ಪೌರಕಾರ್ಮಿಕರ ಉಳಿತಾಯದ ವಿವರವನ್ನು ನೋಡಿದಾಗ ಉಳಿತಾಯ ಮಾಡುವ 175 ಪೌರಕಾರ್ಮಿಕರಲ್ಲಿ 44% ಪುರುಷರಿದ್ದು ಮಹಿಳೆಯರು 56% ದಷ್ಟಿದ್ದಾರೆ. 300 ಮಾಹಿತಿದಾರರ ಪೈಕಿ 153 ಪುರುಷ ಪೌರಕಾರ್ಮಿಕರಲ್ಲಿ 50.3 %(77) ಪೌರಕಾರ್ಮಿಕರು ಉಳಿತಾಯ ಮಾಡುತ್ತಿದ್ದು ಉಳಿದ 49.7% (76) ಪೌರಕಾರ್ಮಿಕರು ಉಳಿತಾಯ ಮಾಡುವುದಿಲ್ಲ ಎಂಬುದಾಗಿ ಉತ್ತರ ನೀಡಿರುತ್ತಾರೆ. ಇದೇ ರೀತಿ 147 ಮಹಿಳಾ ಮಾಹಿತಿದಾರರಲ್ಲಿ ಸರಿಸುಮಾರು 66.7% (98) ಮಾಹಿತಿದಾರರು ಉಳಿತಾಯ ಮಾಡುತ್ತೇವೆ ಎಂಬುದಾಗಿ ಉತ್ತರ ನೀಡಿರುತ್ತಾರೆ.ಉಳಿದ 33.3 %(49) ಮಹಿಳೆಯರು ಉಳಿತಾಯ ಮಾಡುವುದಿಲ್ಲ ಎಂಬುದಾಗಿ ಉತ್ತರ ನೀಡಿರುತ್ತಾರೆ.

ಪೌರಕಾರ್ಮಿಕರು ಹೊಂದಿರುವ ಸಾಲದ ಮೂಲ: ಮಾಹಿತಿದಾರರು ವಿವಿಧ ಮೂಲಗಳಲ್ಲಿ ಪಡೆದಿರುವ ಸಾಲದ ಮೂಲಗಳನ್ನು ವಿವರಿಸಲಾಗಿದೆ. ಇದರ ಅನ್ವಯ 300 ಮಾಹಿತಿದಾರರಲ್ಲಿ 204 (68%) ಮಾಹಿತಿದಾರರು ಸಾಲವನ್ನು ಮಾಡಿರುತ್ತಾರೆ ಅದರಲ್ಲಿ ಬ್ಯಾಂಕ್‌ಗಳಲ್ಲಿ ಸಾಲವನ್ನು ಪಡೆದವರು ಶೇಕಡಾ 63.7 (130) ರಷ್ಟಿದ್ದಾರೆ ಬ್ಯಾಂಕ್‌ಗಳಲ್ಲಿ ಸಾಲವನ್ನು ಪಡೆದವರ ಸಂಖ್ಯೆ ಹೆಚ್ಚಿದೆ. ಫೈನಾನ್ಸ್ ಮೂಲಕ ಸಾಲವನ್ನು ಪಡೆದವರು ಶೇಕಡಾ 3.4 (7) ರಷ್ಟಿದ್ದಾರೆ. ಸಂಬಂಧಿಕರಿಂದ ಸಾಲವನ್ನು ಪಡೆದವರು 9.3 % (19) ರಷ್ಟಿದ್ದಾರೆ. ಸ್ನೇಹಿತರಿಂದ ಸಾಲವನ್ನು ಪಡೆದವರು ಶೇಕಡಾ 15.7(32) ರಷ್ಟಿದ್ದಾರೆ. ಇತರ ಕೈಸಾಲ, ಸ್ವಸಹಾಯ ಸಂಘದಿಂದ ಸಾಲವನ್ನು ಪಡೆದವರು ಶೇಕಡ 7.8 ರಷ್ಟಿದ್ದಾರೆ.

ಪುರುಷ ಮತ್ತು ಮಹಿಳಾ ಪೌರಕಾರ್ಮಿಕರ ಸಾಲದ ಮಾಹಿತಿಗೆ ಅನ್ವಯವಾಗಿ ಪೌರಕಾರ್ಮಿಕರು ನಗರಗಳಲ್ಲಿ ವಾಸಿಸುವುದರಿಂದ ಕುಟುಂಬ ನಿರ್ವಹಣೆಯ ಖರ್ಚು ಹೆಚ್ಚಾಗಿದ್ದು ನಗರಗಳಲ್ಲಿ ದುಬಾರಿ ಆಹಾರ, ವಸತಿ, ಶಿಕ್ಷಣ, ಆರೋಗ್ಯ ಸೌಲಭ್ಯಗಳಿಗೆ ದುಬಾರಿ ಮೊತ್ತದ ಹಣ ವ್ಯಯಿಸಬೇಕಾಗುತ್ತದೆ. ನಗರದ ಅತೀ ಮನೋರಂಜನೆಯ ವಸ್ತುಗಳು ಪೌರಕಾರ್ಮಿಕರ ಬದುಕಿನ ಮೇಲೆ ಪರಿಣಾಮ ಬೀರಿ ಅವರ ಜೀವನದಲ್ಲಿ ಹಣದ ಅವಶ್ಯಕತೆಯನ್ನು ಹೆಚ್ಚುತ್ತಿದ್ದು. ಪೌರಕಾರ್ಮಿಕರು ಸ್ವ-ಸಹಾಯ ಸಂಘಗಳ ಮೂಲಕ, ಸ್ನೇಹಿತರಿಂದ, ಸಂಬಂಧಿಕರು ಮತ್ತು ಮುಂತಾದ ಸಾಲದಾತರಿಂದ ಸಾಕಷ್ಟು ಸಾಲವನ್ನು ಮಾಡುತ್ತಾರೆ.

ಪೌರಕಾರ್ಮಿಕರು ಮಾಡಿರುವ ಸಾಲದ ಮೊತ್ತ

ಪೌರಕಾರ್ಮಿಕರು ಸುಮಾರು 25000 ದಿಂದ 3 ಲಕ್ಷಕ್ಕಿಂತ ಹೆಚ್ಚಿನ ಮೊತ್ತದಲ್ಲಿ ಸಾಲವನ್ನು ಮಾಡಿರುತ್ತಾರೆ. ಈ ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರು ಪಡೆದಿರುವ ಸಾಲದ ಮೊತ್ತವನ್ನು ತಿಳಿಸಲಾಗಿದೆ ಇದರನ್ವಯ ವಿವಿದ ಮೂಲಗಳಿಂದ ಸಾಲವನ್ನು ಪಡೆದಂತಹ 204 ಮಾಹಿತಿದಾರರಲ್ಲಿ 42 (20.6%) ಜನರು 25000-50000 ದ ವರೆಗೆ ಸಾಲವನ್ನು ಪಡೆದಿದ್ದಾರೆ, 61 (30%) ಮಾಹಿತಿದಾರರು 51000-1ಲಕ್ಷದವರೆಗೆ ಸಾಲವನ್ನು ಮಾಡಿದ್ದಾರೆ, 1.5 ಲಕ್ಷ–2ಲಕ್ಷ ಸಾಲದ ಪಡೆದವರು 56(27.4%) ರಷ್ಟಿದ್ದಾರೆ, 19 (9.3%)ರಷ್ಟು ಮಾಹಿತಿದಾರರು 2.5ಲಕ್ಷ–೩ಲಕ್ಷದಷ್ಟು ಸಾಲ ಪಡೆದಿದ್ದಾರೆ ಮತ್ತು 26 (12.7%) ದಷ್ಟು ಮಾಹಿತಿದಾರರು 3 ಲಕ್ಷಕ್ಕಿಂತ ಹೆಚ್ಚಿನ ಸಾಲವನ್ನು ಮಾಡಿರುತ್ತಾರೆ. ಸಾಲ ಪಡೆಯಲು ಮೂಲ ಕಾರಣಗಳನ್ನು ಪೌರಕಾರ್ಮಿಕರಲ್ಲಿ ವಿಚಾರಿಸಿದಾಗ ಹಲವು ಬಗೆಯ ಕಾರಣಗಳನ್ನು ಹೇಳಿರುವುದು ಕಂಡು ಬಂದಿದೆ. ಕೆಲವರು ಹಳೆ ಮನೆಯನ್ನು ನಿರ್ಮಾಣ ಮಾಡುವುದಕ್ಕೆ ಸಾಲ ಪಡೆದಿರುತ್ತೇವೆ ಎಂದು ಹೇಳಿದರೆ, ಇನ್ನೂ ಕೆಲವರು ಹೊಸ ಮನೆಯನ್ನು ನಿರ್ಮಾಣ ಮಾಡುವುದಕ್ಕೆ ಸಾಲವನ್ನು ಪಡೆದಿರುತ್ತೇವೆ ಎಂಬುದಾಗಿ ಉತ್ತರಿಸಿರುತ್ತಾರೆ. ಇನ್ನು ಕೆಲವರು ಹೇಳಿದ ಮಾತಿನ ಪ್ರಕಾರ ಒಂದು ಸಲ ಮನೆಯನ್ನು ರಿಪೇರಿ ಮಾಡಿಸಲು 50 ಸಾವಿರದಿಂದ 75 ಸಾವಿರದ ವರೆಗೂ ಹಣ ವ್ಯಯಿಸಬೇಕಾಗುತ್ತದೆ, ಅಂತಹ ಸಂದರ್ಭದಲ್ಲಿ ಸರಿಸುಮಾರು 25 ಸಾವಿರದಷ್ಟು ಹಣವನ್ನು ಸಾಲವನ್ನಾಗಿ ಪ್ರತಿಯೊಬ್ಬರೂ ಪಡೆದೇ ಪಡೆಯುತ್ತಾನೆ. ಪಡೆದ ಸಾಲವನ್ನು ಸರಿಯಾದ ಸಮಯಕ್ಕೆ ಸರಿಯಾದ ರೀತಿಯಲ್ಲಿ ಬಡ್ಡಿ ಸಮೇತ ಪಾವತಿಸಿದರೆ ಆದಷ್ಟು ಬೇಗನೆ ತೀರುತ್ತದೆ, ಇಲ್ಲದಿದ್ದರೆ ಬಡ್ಡಿಗೆ ಬಡ್ಡಿ ಸೇರಿ ಸಾಲವು ದೊಡ್ಡ ಗಾತ್ರದಲ್ಲಿ ನಿಲ್ಲುತ್ತದೆ ಎಂಬುದು ಪ್ರತಿಯೊಬ್ಬರ ಮಾತಾಗಿದೆ.

ಪೌರಕಾರ್ಮಿಕರು ಹೊಂದಿರುವ ಸಾಲದ ಉದ್ದೇಶ

300 ಜನ ಮಾಹಿತಿದಾರರಲ್ಲಿ ಸರಿಸುಮಾರು ಮುಕ್ಕಾಲು ಭಾಗದಷ್ಟು ಮಾಹಿತಿದಾರರು ಒಂದಲ್ಲ ಒಂದು ರೀತಿಯಲ್ಲಿ ಸಾಲಗಾರರಾಗಿ ಇರುವುದು ಕಂಡು ಬರುತ್ತದೆ. ಸಾಲ ಇಲ್ಲ ಎಂಬುದಾಗಿ ಹೇಳಿರುವವರು ಬಹಳ ಕಡಿಮೆ. ಅಂದರೆ 300 ಜನ ಮಾಹಿತಿದಾರರಲ್ಲಿ ಬರೇ ಕೇವಲ 96 ಮಂದಿ ಮಾತ್ರ ನಮಗೆ ಯಾವುದೇ ರೀತಿಯ ಸಾಲ ಇಲ್ಲ ಎಂಬುದಾಗಿ ಹೇಳಿರುತ್ತಾರೆ. ಇನ್ನುಳಿದ 204 ಜನ ಮಾಹಿತಿದಾರರು ಸಾಲ ಇದೆ ಎಂಬುದಾಗಿ ಒಪ್ಪಿಕೊಂಡಿರುತ್ತಾರೆ. ಅವರುಗಳಲ್ಲಿ ಹೆಚ್ಚಿನ ಪೌರಕಾರ್ಮಿಕರು 30.4% ಮಾಹಿತಿದಾರರು ತಾವು ವಾಸವಾಗಿರುವ ಹಳೆ ಮನೆ ರಿಪೇರಿಗಾಗಿ, ಇನ್ನೂ ಕೆಲವರು ತಾವು ವಾಸವಾಗಿರುವ ಮನೆಗೆ ಸಣ್ಣದೊಂದು ರೂಮನ್ನು ಅಥವಾ ಮನೆಯ ಮುಂದಕ್ಕೆ ಅಥವಾ ಹಿಂದಕ್ಕೆ ರೂಮನ್ನು ಸೇರಿಸಲು ಸಾಲ ಮಾಡಿರುವುದಾಗಿ ತಿಳಿಸಿದ್ದಾರೆ. ಅದೇ ರೀತಿ ಇನ್ನೂ ಹೆಚ್ಚಿನ ಕಾರ್ಮಿಕರು ಅಂದರೆ ಸರಿಸುಮಾರು 8.3% ಮಕ್ಕಳ ಶಿಕ್ಷಣಕ್ಕಾಗಿ, 23.5 ಶೇಕಡ ಮಾಹಿತಿದಾರರು

ಆಗಾಗ ಆರೋಗ್ಯ ಹದೆಗೆಡುವುದರಿಂದ ಔಷದಿ ಪಡೆಯುವುದಕ್ಕಾಗಿ ಅತೀ ಹೆಚ್ಚಿನ ಮಟ್ಟದಲ್ಲಿ ಹಣ ಖರ್ಚು ಆಗುತ್ತದೆ, ಮತ್ತೆ ಯಾವ ಸಮಯದಲ್ಲಿ, ಸಂದರ್ಭದಲ್ಲಿ ಆರೋಗ್ಯ ಕೆಡುತ್ತದೆ ಎಂಬುದು ತಿಳಿಯದೆ ಇದ್ದ ಕಾರಣ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಾವು ಸಾಲವನ್ನೇ ಪಡೆಯಬೇಕು, ಆದುದರಿಂದ ವೈದ್ಯಕೀಯ ಸಾಲ ಪಡೆದವರ ಸಂಖ್ಯೆ ಜಾಸ್ತಿ. ಸಾಲ ಮಾಡಿದವರಲ್ಲಿ ಮತ್ತೊಂದು ಪ್ರಮುಖವಾದ ವರ್ಗ ಎಂದರೆ ವಾಹನ, ಇತರ ಮನೆ ಬಳಕೆ ವಸ್ತುಗಳನ್ನು ಖರೀದಿಸುವುದಕ್ಕಾಗಿ ಪಡೆದಿರುವವರ ಸಂಖ್ಯೆ 4.4 ಶೇಕಡ.

ಪೌರಕಾರ್ಮಿಕರ ಖರ್ಚು ವೆಚ್ಚಗಳು

ಪೌರಕಾರ್ಮಿಕರ ದೈನಂದಿನ ಖರ್ಚುವೆಚ್ಚಗಳನ್ನು ಗಮನಿಸಿದಾಗ ಅವರು ತಮ್ಮ ಆದಾಯದ ಮುಕ್ಕಾಲು ಭಾಗದಷ್ಟು ಆಹಾರ, ಬಟ್ಟೆ, ಗೃಹಬಳಕೆಯ ವಸ್ತು, ಮಕ್ಕಳ ಶಿಕ್ಷಣ ವೈದ್ಯಕೀಯ ವೆಚ್ಚ ಸಾರಿಗೆ ಧಾರ್ಮಿಕ ಆಚರಣೆ, ವೈಯಕ್ತಿಕ ವೆಚ್ಚ ಮತ್ತು ಮದ್ಯಪಾನಕ್ಕೆ ಖರ್ಚು ಮಾಡಲಾಗುತ್ತದೆ ಎಂಬುದಾಗಿ ತಿಳಿಸಿದ್ದಾರೆ. ಪೌರಕಾರ್ಮಿಕರು ತಮ್ಮ ಆದಾಯದ 18% ಅಹಾರ ಮತ್ತು ಬಟ್ಟೆ ಖರೀದಿಗಾಗಿ ಮಾಡಿದ ವೆಚ್ಚ. 11 % ಗೃಹ ಬಳಕೆ ವಸ್ತುಗಳಿಗಾಗಿ, 16% ಶಿಕ್ಷಣಕ್ಕಾಗಿ. ಪೌರಕಾರ್ಮಿಕರು ತಮ್ಮ ಅನಾರೋಗ್ಯಕರ ವೃತ್ತಿಯಿಂದಾಗಿ ಹಲವು ರೀತಿಯ ಅನಾರೋಗ್ಯದ ಸಮಸ್ಯೆ ಅವರನ್ನು ಕಾಡುತ್ತಿದ್ದು ಅದರ ವೈದ್ಯಕೀಯ ವೆಚ್ಚಕ್ಕಾಗಿ ತಮ್ಮ ಆದಾಯದ 15% ದಷ್ಟು ಹಣವನ್ನು ವಿನಿಯೋಗಿಸುತ್ತರೆ. ಕೆಲಸದ ಸ್ಥಳಗಳಿಗೆ ತೆರಳಲು ಪೌರಕಾರ್ಮಿಕರು ಹೆಚ್ಚಾಗಿ ಬಸ್ಸುಗಳಲ್ಲಿ ಅಥವಾ ರಿಕ್ಷಾಗಳಲ್ಲಿ ಹೋಗುವುದರಿಂದ ಅದಕ್ಕೆ 9 ಶೇಕಡದಷ್ಟು ಹಣವನ್ನು ಖರ್ಚು ಮಾಡುತ್ತಾರೆ. ಇನ್ನು ಕುಟುಂಬಗಳಲ್ಲಿ ಅಥವಾ ತಮ್ಮ ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳಿದ್ದರೆ ಅದಕ್ಕೆ 5% ದಷ್ಟು ಖರ್ಚನ್ನು ಮಾಡುತ್ತೇವೆ ಎಂಬುದಾಗಿ ತಿಳಿಸಿದ್ದಾರೆ. ಪೌರಕಾರ್ಮಿಕರು ತಮ್ಮ ಆದಾಯದಲ್ಲಿ 3000-4000 ದವರೆಗೆ ಆಹಾರಕ್ಕಾಗಿ ಖರ್ಚು ಮಾಡಿದರೆ, ಮಕ್ಕಳ ವಿದ್ಯಾಭ್ಯಸಕ್ಕಾಗಿ ತಿಂಗಳಿಗೆ 1000-2000 ರೂಪಾಯಿಗಳವರೆಗೆ ಖರ್ಚು ಮಾಡುವುದಾಗಿ ತಿಳಿಸಿದ್ದಾರೆ. ವೈದ್ಯಕೀಯ ವೆಚ್ಚ 2000 ದಿಂದ 5000 ದವರೆಗೆ ಇರುತ್ತದೆ ಎಂಬುದಾಗಿ ಹೇಳಿದ್ದಾರೆ. ಬಾಡಿಗೆ ಮನೆಯಲ್ಲಿ ವಾಸವಾಗಿರುವ ಪೌರಕಾರ್ಮಿಕರು, ಮನೆಯ ವಿದ್ಯುತ್ ಬಿಲ್ಲಿನ ಬಾಬ್ತಿ, ನೀರಿನ ಬಿಲ್ಲು ಇವುಗಳನ್ನೆಲ್ಲ ಲೆಕ್ಕ ಮಾಡಿದರೆ ತಿಂಗಳಿಗೆ ಸರಿಸುಮಾರು ನಾಲ್ಕು ಸಾವಿರದಿಂದ ಐದು ಸಾವಿರದ ವರೆಗೆ ಖರ್ಚು ಬರುತ್ತದೆ ಎಂದು ಹೇಳುತ್ತಾರೆ.

ಪೌರಕಾರ್ಮಿಕರು ಹೆಚ್ಚಾಗಿ ನಗರಗಳಲ್ಲೇ ವಾಸಿಸುವುದರಿಂದ ಕುಟುಂಬ ನಿರ್ವಹಣೆಯ ಖರ್ಚು ಹೆಚ್ಚಾಗಿದ್ದು ದುಬಾರಿ ಆಹಾರ ವಸತಿ, ಶಿಕ್ಷಣ, ಆರೋಗ್ಯ ಸೌಲಭ್ಯಗಳಿಗೆ ಬಹು ಮೊತ್ತದ ಹಣ ವ್ಯಯಿಸಬೇಕಾಗುತ್ತದೆ. ಇದಲ್ಲದೇ ನಗರದ ಅತೀ ಮನೋರಂಜನಾ ವಸ್ತುಗಳಾದ ಟಿ.ವಿ, ಗ್ಯಾಸ್, ದ್ವಿಚಕ್ರ ವಾಹನ,

ಬೃಹತ್ ಮಳಿಗೆಗಳು ಪೌರಕಾರ್ಮಿಕರ ಬದುಕಿನ ಮೇಲೆ ಪರಿಣಾಮ ಬೀರಿ ಅವರ ಜೀವನ ಶೈಲಿಯಲ್ಲಿ ಹಣದ ಅವಶ್ಯಕತೆಯನ್ನು ಹೆಚ್ಚಿಸಿದೆ.

ಪೌರಕಾರ್ಮಿಕರು ಹೊಂದಿರುವ ಆಸ್ತಿಯ ವಿವರ

ಪೌರಕಾರ್ಮಿಕರು ಮಂಗಳೂರು ನಗರ ಪ್ರದೇಶಗಳಲ್ಲಿ ಬಹಳಷ್ಟು ವರ್ಷಗಳಿಂದ ದುಡಿಯುತ್ತಿರುವುದರಿಂದ ಮಂಗಳೂರಿನಲ್ಲಿ ತಾವು ಯಾವುದಾದರು ರೀತಿಯ ಆಸ್ತಿಯನ್ನು ಹೊಂದಿದ್ದೀರ ಎಂಬುದಾಗಿ ಅವರನ್ನು ಪ್ರಶ್ನಿಸಿದಾಗ, ಹೆಚ್ಚಿನವರು ಹೇಳಿದ ಮಾತಿನ ಪ್ರಕಾರ "ನಮ್ಮ ಹೊಟ್ಟೆಗೆ ಜೋಡಿಸುವುದೇ ಕಷ್ಟದ ಕೆಲಸವಾಗಿದೆ ಅದರಲ್ಲಿ ಮಂಗಳೂರಿನಂತಹ ದುಬಾರಿ ಊರಿನಲ್ಲಿ ಆಸ್ತಿ ಹೊಂದುವುದು ಅಷ್ಟು ಸುಲಭದ ಕೆಲಸವಲ್ಲ' ಎಂಬುದಾಗಿ ಹೇಳಿದರೆ, ಇನ್ನೂ ಕೆಲವರು ಆರಂಭದಲ್ಲಿ ಸಂಬಳ, ಉದ್ಯೋಗಗಳ ಅವಕಾಶ ಎಲ್ಲವೂ ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಿದ್ದ ಕಾರಣ ಜೊತೆಗೆ ಇಲ್ಲಿ ಜಾಗ ಕೂಡ ಅತೀ ಕಡಿಮೆಗೆ ಸಿಗುತ್ತಿದ್ದರಿಂದ ನಾವು ಮೂರು ಸೆಂಟ್ ಸರಕಾರಿ ಭೂಮಿಯಲ್ಲಿ ಮನೆ ನಿರ್ಮಿಸಿಕೊಂಡು ಜೀವಿಸುತ್ತಿದ್ದೇವೆ ಎಂಬುದಾಗಿ ಹೇಳಿದರೆ, ಇನ್ನೂ ಕೆಲವರು ನಮಗೆ ಸರ್ಕಾರದಿಂದ ಮನೆ ಸಿಕ್ಕಿರುತ್ತದೆ, ಸರ್ಕಾರ ನಮಗೆಲ್ಲ ಮನೆಯನ್ನು ಕಟ್ಟಿಸಿಕೊಟ್ಟಿದೆ ಎಂಬುದಾಗಿ ಹೇಳಿಕೊಂಡಿರುತ್ತಾರೆ. ಇನ್ನೂ ಕೆಲವರು ಮನೆಯ ಜೊತೆಗೆ, ಸ್ಕೂಟರ್, ಒಂದು ಹಳೆ ಕಾರು ಇವುಗಳನ್ನು ಹೊಂದಿದ್ದೇವೆ ಎಂಬುದಾಗಿ ಉತ್ತರಿಸಿರುತ್ತಾರೆ.

ಹೊರ ರಾಜ್ಯ ಮತ್ತು ಹೊರ ಜಿಲ್ಲೆಗಳಿಂದ ವಲಸೆ ಬಂದ ಕಾರ್ಮಿಕರಲ್ಲಿ ಹೊಂದಿರುವ ಆಸ್ತಿಯ ಕುರಿತಾಗಿ ಕೇಳಿದಾಗ ಅವರು ಹೇಳಿದ ಪ್ರಕಾರ ವಲಸೆ ಕಾರ್ಮಿಕರಲ್ಲಿ ಹೆಚ್ಚಿನವರು ಅತೀ ಸಣ್ಣ ಭೂ ಹಿಡವಳಿದಾರರಾಗಿದ್ದು, ಮಳೆ ಆಧಾರಿತ ಬೇಸಾಯಕ್ಕೆ ಹೊಂದಿಕೊಂಡಿರುವ ಕೃಷಿಕರಾಗಿದ್ದಾರೆ. ಇನ್ನೂ ಹಲವು ಜನರು ಭೂರಹಿತ ಕೂಲಿ ಕಾರ್ಮಿಕರಾಗಿದ್ದಾರೆ. ಇವರು ಕೂಡ ಇತರ ಜಮಿಂದಾರರ ಹೊಸ ಗದ್ದೆಯಲ್ಲಿ ಕೆಲಸ ಮಾಡಿಕೊಂಡು ಬದುಕುವವರು ಆಗಿರುತ್ತಾರೆ. ಇನ್ನೂ ಕೆಲವು ಮಾಹಿತಿದಾರರು ಭೂರಹಿತರಾಗಿದ್ದರೂ ಇತರ ಪ್ರಾಣಿಗಳನ್ನು ಅಂದರೆ ಕುರಿ ಆಡು ಎಮ್ಮೆ ಮುಂತಾದ ಪ್ರಾಣಿಗಳನ್ನು ಸಾಕುವವರು ಆಗಿರುತ್ತಾರೆ. ಇನ್ನೂ ಕೆಲವರು ತಮ್ಮ ಕುಲ ಕಸುಬುಗಳು ಆದಂತಹ ಎಣ್ಣೆ ತೆಗೆಯುವುದು, ಮಡಿಕೆ ಮಾಡುವುದು, ಬಟ್ಟೆ ಒಗೆಯುವುದು, ಇನ್ನಿತರ ಕಸುಬನ್ನು ಮಾಡಿಕೊಂಡಿದ್ದಂತಹ ಸಮೂಹ ನಮ್ಮದು ನಮಗೆ ಯಾವುದೇ ಆಸ್ತಿ ಇಲ್ಲ. ಅತಿಯಾದ ಬರಗಾಲ ಇನ್ನೊಂದೆಡೆ ಅತಿಯಾದ ಉದ್ಯೋಗಗಳ ಲಭ್ಯತೆ ಮತ್ತು ಅತ್ಯುತ್ತಮ ಸಂಬಳ ಇವುಗಳೆಲ್ಲವು ಇವರನ್ನು ಕೈಬೀಸಿ ಕರೆದ ಅಂಶಗಳಿಂದ ದಕ್ಷಿಣ ಕನ್ನಡ ಜಿಲ್ಲೆಗೆ ವಲಸೆ ಬಂದಿರುವುದಾಗಿ ತಿಳಿಸಿರುತ್ತಾರೆ ಇವರು ಇಲ್ಲಿ ಯಾವುದೇರೀತಿಯ ಆಸ್ತಿಯನ್ನು ಹೊಮ್ದಿಲ್ಲ ಎಂಬುದಾಗಿ ಹೇಳಿದ್ದಾರೆ.

ಹೊರರಾಜ್ಯ ಮತ್ತು ಜಿಲ್ಲೆಗಳಿಂದ ಬಂದಂತಹ ಪೌರಕಾರ್ಮಿಕರಲ್ಲಿ ವಲಸೆ ಬರಲು ಕಾರಣ ಕೇಳಿದಾಗ ಅವರು ಹೇಳಿರುವ ಪ್ರಕಾರ ಸಣ್ಣ ಭೂಹಿಡವಳಿದಾರರ ಸಮಸ್ಯೆಯಾದ ಮಳೆ ಇಲ್ಲದೆ ನಮ್ಮ ಸಣ್ಣ ಭೂಮಿಯಲ್ಲಿ ಏನನ್ನು ಬೆಳೆಯಲು ಸಾದ್ಯವಾಗದೆ ಮತ್ತು ಉದ್ಯೋಗಗಳು ಇಲ್ಲದೆ ಇದ್ದ ಕಾರಣ ನಮ್ಮ ಸಣ್ಣ ಭೂಮಿಯನ್ನು ಪಾಳು ಬಿಟ್ಟು ಈ ಊರಿನ ಕಡೆಗೆ ವಲಸೆ ಬಂದೆವು ಎಂದು ಹೇಳಿದರೆ, ಇನ್ನೂ ಕೆಲವರು ನಮ್ಮ ಪೂರ್ವಿಕರು ಕೂಡ ಕೂಲಿ ಮಾಡಿಕೊಂಡು ಬದುಕುತ್ತಿದ್ದರಿಂದ ನಾವು ಕೂಡ ಕೂಲಿ ಮಾಡಿಕೊಂಡೇ ಬದುಕುತ್ತಿದ್ದೇವೆ, ಆದುದರಿಂದ ನಮ್ಮ ಭಾಗದಲ್ಲಿ ಬರಗಾಲ ಬಂದದರಿಂದ ನಮಗೆ ಉದ್ಯೋಗ ದೊರೆಯದಿದ್ದ ಕಾರಣ ಈ ಊರಿನ ಕಡೆಗೆ ವಲಸೆ ಬರಬೇಕಾಯಿತು ಎಂದು ಉತ್ತರಿಸಿದರೆ, ಇನ್ನೂ ಕೆಲವರು ಮಳೆ ಬಾರದೆ ಇದ್ದ ಕಾರಣ ನಮ್ಮ ಪ್ರಾಣಿಗಳನ್ನು ಮೇಯಿಸಲು ಸಾಧ್ಯವಾಗಲಿಲ್ಲ, ಆದುದರಿಂದ ನಮ್ಮ ಪ್ರಾಣಿಗಳನ್ನು ಮಾರಾಟ ಮಾಡಿ ಈ ಕಡೆಗೆ ವಲಸೆ ಬಂದೆವು ಎಂಬುದಾಗಿ ಹೇಳುತ್ತಾರೆ. ಇನ್ನೂ ಕೆಲವರು ಸಾಕಿದ ನಮ್ಮ ಪ್ರಾಣಿಗಳಿಗೆ ರೋಗ ಬಂದಿದ್ದರಿಂದ ನಮ್ಮ ಪ್ರಾಣಿಗಳೆಲ್ಲವು ಸತ್ತು ಹೋದವು ಆದುದರಿಂದ ನಾವು ಈ ಕಡೆಗೆ ವಲಸೆ ಬರಬೇಕಾಯಿತು. ಇಲ್ಲಿ ಬಂದು ಪೌರಕಾರ್ಮಿಕರಾಗಿ ವೃತ್ತಿಯನ್ನು ಮಾಡುತ್ತಿದ್ದೇವೆ ಎಂಬುದಾಗಿ ವಲಸೆ ಬಂದ ಕಾರ್ಮಿಕರು ತಮ್ಮ ವಲಸೆಗೆ ಸಂಬಂಧಿಸಿದ ಹಿನ್ನಲೆಯನ್ನು ಈ ರೀತಿಯಲ್ಲಿ ಹಂಚಿಕೊಂಡರು.

ಪೌರಕಾರ್ಮಿಕರ ಶೈಕ್ಷಣಿಕ ಸ್ಥಿತಿಗತಿ

ಭಾರತದಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯವನ್ನು ಶಿಕ್ಷಣಕ್ಕೆ ಉತ್ತೇಜಿಸಲು ಸರಿಯಾದ ಶಿಕ್ಷಣ ನೀತಿಗಳ ಕೊರತೆ ಮತ್ತು ಯಾವುದೇ ಶೈಕ್ಷಣಿಕ ನಿಬಂಧನೆಗಳಿಗಾಗಿ ಸರ್ಕಾರದಿಂದ ಬೆಂಬಲವಿಲ್ಲದಿರುವುದನ್ನು ಇದು ತೋರಿಸುತ್ತದೆ. ಬಹುಪಾಲು ಪೌರಕಾರ್ಮಿಕರು ಅನಕ್ಷರಸ್ಥರು ಎಂಬುದಾಗಿ ಈ ಅಧ್ಯಯನದಿಂದ ತಿಳಿಯಬಹುದಾಗಿದೆ, ಇವರು ಎದುರಿಸುತ್ತಿರುವ ಸಾಮಾಜಿಕ ತಾರತಮ್ಯವನ್ನು ಇದು ತಿಳಿಸುತ್ತದೆ. ಮಾಹಿತಿದಾರರ ವಿದ್ಯಾರ್ಹತೆಯನ್ನು ನೋಡುವುದಾದರೆ 300 ಮಾಹಿತಿದಾರರಲ್ಲಿ 44.33% ದಷ್ಟು ಪೌರಕಾರ್ಮಿಕರು ಅನಕ್ಷರಸ್ಥರಾಗಿದ್ದು. 40.67% ಪ್ರಾಥಮಿಕ ಶಿಕ್ಷಣವನ್ನು ಪಡೆದಿರುತ್ತಾರೆ. ಪ್ರೌಢ ಶಿಕ್ಷಣವನ್ನು ಪಡೆದವರು ಶೇಕಡ 14.33% ಇದ್ದು ಉಳಿದ 0.67 ಶೇಕಡಾ ಕಾಲೇಜು ಶಿಕ್ಷಣವನ್ನು ಪಡೆದವರಾಗಿರುತ್ತಾರೆ.

- **ಪ್ರಾಥಮಿಕ ಮತ್ತು ಪ್ರೌಡ ಶಿಕ್ಷಣ ಪಡೆದ ಪುರುಷ ಮತ್ತು ಮಹಿಳಾ ಪೌರಕಾರ್ಮಿಕರು:** ಪುರುಷ ಮತ್ತು ಮಹಿಳಾ ಪೌರಕಾರ್ಮಿಕರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಮಾಹಿತಿಯನ್ನು ನೀಡಲಾಗಿದೆ ಇದರನ್ವಯ ಪ್ರಾಥಮಿಕ ಶಿಕ್ಷಣ ಪಡೆದವರಲ್ಲಿ ಪುರುಷರು 48.37 ಶೇಕಡ ಇದ್ದು ಮಹಿಳೆಯರು 32.65 ಶೇಕಡದಷ್ಟಿದ್ದಾರೆ. ಅದೇರೀತಿಯಲ್ಲಿ ಪ್ರೌಢ ಶಿಕ್ಷಣವನ್ನು ಪಡೆದವರಲ್ಲಿ ಪುರುಷರು 18.9 ಶೇಕಡ ಇದ್ದು ಮಹಿಳೆಯರು 9.5 ಶೇಕಡದಷ್ಟಿದ್ದಾರೆ.

- **ಮಕ್ಕಳ ವಿದ್ಯಾರ್ಹತೆ ಶಿಕ್ಷಣಮಟ್ಟ:** ಪೌರಕಾರ್ಮಿಕರ ಮಕ್ಕಳ ಶಿಕ್ಷಣ ಮಟ್ಟವನ್ನು ನೋಡುವುದಾದರೆ 487 ಮಕ್ಕಳಲ್ಲಿ ಉನ್ನತ ಶಿಕ್ಷಣ ಪಡೆದವರ ಸಂಖ್ಯೆ ಕಡಿಮೆಯಿದ್ದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಪಡೆದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಶಿಕ್ಷಣ ಪಡೆದವರಲ್ಲಿ ಹುಡುಗಿಯರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಹುಡುಗರು ಕಡಿಮೆ ಸಂಖ್ಯೆಯಲ್ಲಿದ್ದಾರೆ. 487 ಮಕ್ಕಳಲ್ಲಿ 236 ಹುಡುಗರು ಮತ್ತು 251 ಹುಡುಗಿಯರಿದ್ದಾರೆ ಇವರಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದವರು 25.9%(126) ಇದ್ದು ಇವರಲ್ಲಿ ಹುಡುಗರು 32% ಮತ್ತು ಹುಡುಗಿಯರು 19.9% ದಷ್ಟಿದ್ದಾರೆ. ಪ್ರೌಢ ಶಿಕ್ಷಣವನ್ನು ಪಡೆದವರು 30.2 %(147) ಇದ್ದು ಇವರಲ್ಲಿ 29.2% ಹುಡುಗರಿದ್ದು 31.1% ಹುಡುಗಿಯರಿದ್ದಾರೆ. ಇವರಲ್ಲಿ ಪದವಿ ಶಿಕ್ಷಣವನ್ನು ಪಡೆದವರು 57 (11.7%) ಇದ್ದಾರೆ ಇವರಲ್ಲಿ ಹುಡುಗಿಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದು ಹುಡುಗಿಯರದೇ ಮೇಲು ಗೈ ಆಗಿರುತ್ತದೆ. ಇವರುಗಳಲ್ಲಿ ಹುಡುಗಿಯರ ಸಂಖ್ಯೆ 13.9% ಇದ್ದರೆ ಹುಡುಗರ ಸಂಖ್ಯೆ 4.5% ಇದೆ. ಮತ್ತೆ ಕೆಲವೊಂದು ವಿಧ್ಯಾರ್ಥಿಗಳು ಸ್ನಾತಕ್ಕೋತ್ತರ ಪದವಿಯನ್ನು ಮಾಡಿದವರಲ್ಲಿ 9 ಜನ ಇದ್ದು ಅವರಲ್ಲಿಯು ಸಹ ಹುಡುಗಿಯರೆ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕೊನೆಯದಾಗಿ 11 ಮಕ್ಕಳು ವೃತ್ತಿಯಾದರಿತ ಶಿಕ್ಷಣಗಳಾದ ತಾಂತ್ರಿಕ ಶಿಕ್ಷಣ, ನರ್ಸಿಂಗ್, ಎಲ್.ಎಲ್.ಬಿ, ಬಿ.ಪದವಿಯನ್ನೂ ಮಾಡುತ್ತಿರುವುದು ಕಂಡು ಬಂದಿದೆ.
- **ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ:** ಪೌರಕಾರ್ಮಿಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ವ್ಯಕ್ತಪಡಿಸಿರುವ ಅಭಿಪ್ರಾಯ ಮತ್ತು ನೀಡಿರುವ ಪ್ರಾಶಸ್ತ್ಯವನ್ನು ಗಮನಿಸಬಹುದು. ಒಟ್ಟು 300 ಜನ ಪೌರಕಾರ್ಮಿಕರಲ್ಲಿ ಸರಿಸುಮಾರು 201 (67.33%) ಪೌರಕಾರ್ಮಿಕರು ತಿಳಿಸಿರುವ ಪ್ರಕಾರ ಅವರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುವ ಮೂಲಕ ಉನ್ನತ ಉದ್ಯೋಗದ ಆಕಾಂಕ್ಷೆಯನ್ನು ಹೊಂದಿರುವುದಾಗಿ ಹೇಳಿದ್ದಾರೆ. ಅದೇ ರೀತಿ (23) 8 % ದಷ್ಟು ಕಾರ್ಮಿಕರು ತಮ್ಮ ಆರ್ಥಿಕ ಸ್ಥಿತಿಗತಿಯ ಪರಿಣಾಮವಾಗಿ ತಮ್ಮ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ನಿರಾಕರಿಸಿದ್ದಾರೆ. ಇನ್ನುಳಿದ 49 (16.33%) ಶೇಕಡ ಪೌರಕಾರ್ಮಿಕರು ಮಕ್ಕಳ ಭವಿಷ್ಯದ ಮೇಲೆ ನಾವು ಏನನ್ನು ಹೇಳಲು ಸಾಧ್ಯವಿಲ್ಲ ಎಂಬುದಾಗಿ ಹೇಳಿರುತ್ತಾರೆ
- **ಪೌರಕಾರ್ಮಿಕರು ಮಕ್ಕಳ ಶಿಕ್ಷಣದ ಬಗ್ಗೆ ಹೊಂದಿರುವ ಶೈಕ್ಷಣಿಕ ಆಕಾಂಕ್ಷೆ:** ಪೌರಕಾರ್ಮಿಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಹೊಂದಿರುವ ಆಕಾಂಕ್ಷೆಯನ್ನು ವ್ಯಕ್ತಪಡಿಸಲಾಗಿದೆ. ಇದರನ್ವಯ ಅವರು ತಿಳಿಸಿರುವಂತೆ ಹೆಚ್ಚಿನ ಪೌರಕಾರ್ಮಿಕರು ತಮ್ಮ ಮಕ್ಕಳಿಗೆ ಪದವಿ ಶಿಕ್ಷಣಕ್ಕೆ ಪ್ರಾಶಸ್ತ್ಯವನ್ನು ನೀಡಿದ್ದಾರೆ. 22.9% ಸ್ನಾತಕೋತ್ತರ ಪದವಿಯನ್ನು ನೀಡಲು ಇಚ್ಛೆ ಪಡುತ್ತಾರೆ, 7.5 ಶೇ. ಪೌರಕಾರ್ಮಿಕರು ತಿಳಿಸಿರುವ ಪ್ರಕಾರ ತಮ್ಮ ಮಕ್ಕಳು ತಾಂತ್ರಿಕ ಶಿಕ್ಷಣವನ್ನು ನೀಡಬೇಕು ಎಂಬುದಾಗಿ ಆಶಿಸುತ್ತಾರೆ ಇನ್ನು ಕೆಲವು 6.4 ಶೇ. ರಷ್ಟು ಪೌರಕಾರ್ಮಿಕರು ಹೇಳಿದಂತೆ ಅವರು ತಮ್ಮ ಮಕ್ಕಳಿಗೆ ವೈದ್ಯಕೀಯ ಶಿಕ್ಷಣವನ್ನು ನೀಡಲು ಇಚ್ಛಿಸುತ್ತಾರೆ. 5.9 ಶೇ. ಎಲ್.ಎಲ್.ಬಿ, 9.9 ಶೇ. ಐ.ಟಿ.ಐ, ಮತ್ತು 15.9% ವೃತ್ತಿಯಾದರಿತ ಶಿಕ್ಷಣಕ್ಕೆ ಪ್ರಾಶಸ್ತ್ಯವನ್ನು

ನೀಡಿದ್ದಾರೆ. ಇಲ್ಲಿ ಹೆಚ್ಚಿನ ಪೌರಕಾರ್ಮಿಕರ ಮಕ್ಕಳು ಉನ್ನತ ಶಿಕ್ಷಣವನ್ನು ಪಡೆದಿದ್ದು ಅವರಿಗೆ ಯಾವುದೇ ರೀತಿಯ ಉದ್ಯೋಗದ ಅವಕಾಶಗಳು ಸಿಗದೆ ನಿರುದ್ಯೋಗಿಗಾಳಾಗಿರುವುದನ್ನು ಕಾಣಬಹುದು.

- **ಪೌರಕಾರ್ಮಿಕರ ಮಕ್ಕಳು ಮಧ್ಯ ಶಾಲೆ ಬಿಟ್ಟ ಹಂತ:** ಅರ್ದದಲ್ಲಿ ಶಾಲೆ ಬಿಟ್ಟವರ ಮಾಹಿತಿಯ ಅನ್ವಯ ಶೇಕಡಾ 56.7 ರಷ್ಟು ಕಾರ್ಮಿಕರ ಕುಟುಂಬದಲ್ಲಿ ಹಲವಾರು ಕಾರಣಗಳಿಗಾಗಿ ತಮ್ಮ ಶಿಕ್ಷಣವನ್ನು ಅರ್ದದಲ್ಲಿಯೇ ತೊರೆದಿರುವುದನ್ನು ತಿಳಿಸಲಾಗಿದೆ. ಇದರಲ್ಲಿ 10.3 ಶೇ. ದಷ್ಟು ಸದಸ್ಯರು ಪ್ರೌಢಶಾಲಾ ಹಂತದಲ್ಲಿ ಶಾಲೆಯನ್ನು ತೊರೆದಿದ್ದು, 30.7 ಶೇ. ಪಿ.ಯು.ಸಿ ಶಿಕ್ಷಣ ಪಡೆಯುವಹಂತದಲ್ಲಿ ತೊರೆದಿರುತ್ತಾರೆ ಇನ್ನು 11.7ಶೇ. ಪದವಿ ಶಿಕ್ಷಣ ಮತ್ತು 4.0ಶೇ. ಸ್ನಾತಕೋತ್ತರ ಪದವಿಯಲ್ಲಿ ತೊರೆದವರಾಗಿರುತ್ತಾರೆ.
- **ಪೌರಕಾರ್ಮಿಕರ ಮಕ್ಕಳು ಮಧ್ಯ ಶಾಲೆ ಬಿಡಲು ಕಾರಣ:** ಅರ್ದದಲ್ಲಿ ಶಿಕ್ಷಣವನ್ನು ತೊರೆಯಲು ಎದುರಾದ ಕಾರಣಗಳನ್ನು ಕೇಳಿದಾಗ ಅವರು ಹೇಳಿದ ಪ್ರಕಾರ 38.3ಶೇ. ಬಡತನ ಮುಖ್ಯ ಕಾರಣ ಎಂಬುದಾಗಿ ತಿಳಿಸಿದ್ದಾರೆ. 1.7ಶೇ ಆರೋಗ್ಯದ ಸಮಸ್ಯೆಯಿಂದಾಗಿ ಶಿಕ್ಷಣವನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ ಎಂಬುದಾಗಿ ತಿಳಿಸಿದ್ದಾರೆ. 10.3ಶೇ ಜನರು ತಮ್ಮ ಮನೆಯಲ್ಲಿ ಬಡತನ ಇರುವುದರಿಂದ ನಮಗೆ ಮನೆಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಮತ್ತು ತರಗತಿಯಲ್ಲಿ ಅನುತ್ತೀರ್ಣರಾದ ಕಾರಣ ಶಿಕ್ಷಣವನ್ನು ಮುಂದುವರಿಸಲು ಆಸಕ್ತಿ ಇಲ್ಲ ಎಂಬುದಾಗಿ ತಿಳಿಸಿದ್ದಾರೆ. ಪೌರಕಾರ್ಮಿಕರಲ್ಲಿ ಕೆಲವರು ನೆರೆ ರಾಜ್ಯ ಮತ್ತು ಜಿಲ್ಲೆಗಳಿಂದ ವಲಸೆ ಬಂದವರಾಗಿದ್ದು ಅವರ ಜೊತೆಗೆ ಅವರ ಮಕ್ಕಳು ಸಹ ಬಂದಿದ್ದು ಅವರ ಶಿಕ್ಷಣವನ್ನು ಮುಂದುವರಿಸಲು ಸಾದ್ಯವಾಗಲಿಲ್ಲ ಎಂಬುದಾಗಿ ತಿಳಿಸಿದ್ದಾರೆ ಅವರಲ್ಲಿ ಶೇಕಡಾ 1.3 ರಷ್ಟಿದ್ದಾರೆ. ಶೇಕಡಾ 3ರಷ್ಟು ಮಾಹಿತಿದಾರರು ಹೆಳಿರುವ ಪ್ರಕಾರ ಅವರ ಮಕ್ಕಳಿಗೆ ಬೇಗ ಮದುವೆ ಮಾಡಿರುವುದರಿದ ಅವರು ತಮ್ಮ ಶಿಕ್ಷಣವನ್ನು ಅರ್ದದಲ್ಲಿಯೆ ಬಿಡಬೇಕಾಯಿತು.

ಪೌರಕಾರ್ಮಿಕರ ಆರೋಗ್ಯದ ಸ್ಥಿತಿಗತಿ

ಪೌರಕಾರ್ಮಿಕರ ಕೆಲಸದ ಪರಿಸ್ಥಿತಿಯು ಶತಮಾನಗಳಿಂದ ಬದಲಾಗದೆ ವಾಸ್ತವಿಕವಾಗಿ ಉಳಿದಿದೆ ಈ ಕೆಲಸಗಾರರು ಎದುರಿಸುತ್ತಿರುವ ಸಾಮಾಜಿಕ ದೌರ್ಜನ್ಯದ ಹೊರತಾಗಿ, ಅವರು ತಮ್ಮ ವೃತ್ತಿ ಜೀವನದ ಮೂಲಕ ಕೆಲವು ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಾರೆ. ಅವರ ಆರೋಗ್ಯದ ಅಪಾಯಗಳು ಮೀಥೇನ್ ಮತ್ತು ಹೈಡ್ರೋಜನ್ ಸಲ್ಫೈಡ್, ಕಾರ್ಡಿಯೋವಾಸ್ಕ್ಯುಲರ್ ಡಿಜೆನೇಷನ್, ಆಸ್ಟಿಯೋ ಆರ್ಥರಿಟಿಸ್ ಬದಲಾವಣೆಗಳು ಮತ್ತು ಇಂಟರ್ವರ್ಟೆಬ್ರಲ್ ಡಿಸ್ಕ್ ಹರ್ನಿಯೇಶನ್, ಮುಂತಾದ ಸೋಂಕುಗಳು, ಹೆಪಟೈಟಿಸ್, ಲೆಪ್ಟೊಸ್ಪೆರೋಸಿಸ್ ಮತ್ತು ಹೆಲಿಕೋಬ್ಯಾಕ್ಟರ್, ಚರ್ಮದ ತೊಂದರೆಗಳು, ಉಸಿರಾಟದ ವ್ಯವಸ್ಥೆಯ ಸಮಸ್ಯೆಗಳು ಮತ್ತು ಬದಲಾದ ಪಲ್ಮನರಿ ಫಂಕ್ಷನ್ ಪ್ಯಾರಾಮೀಟರ್‌ಗಳ ಸೋಂಕಿನಂತಹ ಅಪಾಯಕಾರಿ ಅನಿಲಗಳಿಗೆ ಒಡ್ಡಿಕೊಳ್ಳುವುದನ್ನು

ಒಳಗೊಂಡಿರುತ್ತದೆ ಇದನ್ನು ಎಂಜಿನಿಯರಿಂಗ್, ವೈದ್ಯಕೀಯ ಕ್ರಮಗಳ ಮೂಲಕ ತಡೆಗಟ್ಟಬಹುದು. ಹಲವು ರೀತಿಯ ಅಪಾಯಗಳ ವಿರುದ್ಧ ರಕ್ಷಿಸುವಲ್ಲಿ ಎಂಜಿನಿಯರಿಂಗ್ ಕ್ರಮಗಳು ನೆರವಾಗುತ್ತದೆ. ಪೌರಕಾರ್ಮಿಕರಿಗೆ ಸಾಮಾನ್ಯವಾಗಿ ಆರೋಗ್ಯದ ಸಮಸ್ಯೆಗಳೆಂದರೆ ಕೆಲಸದ ಅಪಘಾತಗಳು ಮತ್ತು ಗಾಯಗಳು ಜ್ವರ ಮತ್ತು ಅಸ್ವಸ್ಥತೆ ಮತ್ತು ವಾಹನ ಅಪಘಾತಗಳು. ಕೆಲವೊಮ್ಮೆ ಗಾಯಗಳು ಸೋಂಕುಗಳಿಗೆ ಕಾರಣವಾಗುತ್ತದೆ ಅದರಿಂದ ಅಂಗಾಂಗಗಳನ್ನು ಕಳೆದು ಕೊಳ್ಳುವ ಪರಿಸ್ಥಿತಿ ಕೂಡ ಎದುರಾಗುತ್ತದೆ. ಮಹಿಳೆಯರು ಹೆಚ್ಚಾಗಿ ಗಂಟು ನೋವು ಮತ್ತು ಬೆನ್ನು ನೋವನ್ನು ಎದುರಿಸುತ್ತಾರೆ.

- **ಪೌರಕಾರ್ಮಿಕರು ಎದುರಿಸುತ್ತಿರುವ ಆರೋಗ್ಯ ಸಮಸ್ಯೆಗಳು:** ಪೌರಕಾರ್ಮಿಕರ ಅನಾರೋಗ್ಯಕ್ಕೆ ಅವರು ಮಾಡುವಂತಹ ವೃತ್ತಿ ಮಾತ್ರ ಕಾರಣವಾಗಿಲ್ಲ ಅದರ ಜೊತೆಗೆ ಬಡತನ ಅಪೌಷ್ಟಿಕತೆ ಮತ್ತು ಮಧ್ಯಪಾನವು ಪರಿಣಾಮಕಾರಿಯಾಗಿದೆ. ಇದರನ್ವಯ 97.7% ವಿಪರೀತ ಮೈಕೈ ನೋವಿನಿಂದ ಬಳಲುತ್ತಿದ್ದಾರೆ 76.7 ಶೇಕಡ ಬೆನ್ನು ನೋವಿನ ಸಮಸ್ಯೆ, 66.3 ಅಪೌಷ್ಟಿಕತೆಯ ಕೊರತೆಯಿಂದಾಗಿ ನಿಶಕ್ತಿಯ ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಪೌರಕಾರ್ಮಿಕರು ಹೆಚ್ಚಾಗಿ ಕೊಳಚೆ ಪ್ರದೇಶದಲ್ಲಿ ವಾಸವಾಗಿರುವುದರಿಂದ ಚರಂಡಿ ವ್ಯವಸ್ಥೆ ಸರಿಯಾದ ರೀತಿಯಲ್ಲಿ ಇರದೇ ಇರುವ ಕಾರಣ ಅಲ್ಲಲ್ಲಿ ನಿಂತ ಕೊಳಚೆ ನೀರಿನಿಂದಾಗಿ ವಿಪರೀತ ಸೊಳ್ಳೆ ಉತ್ಪತ್ತಿಯಾಗಿ ಹೆಚ್ಚಿನ ಪೌರಕಾರ್ಮಿಕರು ಮಲೇರಿಯಾ ಜ್ವರದಿಂದ ಬಳಲುತ್ತಿದ್ದು ಅದಲ್ಲದೆ ವಾಂತಿ ಭೇದಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಮಲೇರಿಯಾ ಮತ್ತು ವಾಂತಿ ಭೇದಿ ಪದೇ ಪದೇ ಮರುಕಳಿಸುತ್ತದೆ ಎಂಬುದಾಗಿಯು ಇಳಿಸಿದ್ದಾರೆ ಈ ಸಮಸ್ಯೆಯಿಂದ ಬಳಲುತ್ತಿರುವವರಲ್ಲಿ ಶೇಕಡ 50.7 ರಷ್ಟಿದ್ದಾರೆ. ಅದಲ್ಲದೇ ಧೂಳು, ವಾಹನಗಳ ಹೊಗೆಯಿಂದಾಗಿ 51.3 % ಪೌರಕಾರ್ಮಿಕರು ಅಸ್ತಮ ಸಮಸ್ಯೆಯಿಂದ ಬಳಲುತ್ತಿದ್ದಾರೆ. 13.3% ಪೌರಕಾರ್ಮಿಕರು ಸಾಮ್ಕ್ರಮಿಕ ಖಾಯಿಲೆಯಾದ ಕ್ಷಯದಿಂದ ಬಳಲುತ್ತಿದ್ದು. ಶೇಕಡಾ 60 ರಷ್ಟು ಮಾಹಿತಿದಾರರು ಚರ್ಮದ ಅಲರ್ಜಿ,ಕಣ್ಣಿನ ಅಲರ್ಜಿಯಂತಹ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.
- **ಮಹಿಳೆಯರು ಎದುರಿಸುತ್ತಿರುವ ಆರೋಗ್ಯದ ಸಮಸ್ಯೆ:** ಪೌರಕಾರ್ಮಿಕ ಕೆಲಸದ ವಿವಿಧತೆಯನ್ನು ಗಮನಿಸಿದಂತೆ, ಇದು ಮಹಿಳೆಯರ ಪ್ರಾಬಲ್ಯತೆಯನ್ನು ಕೂಡಿರುವ ಕೆಲಸವಾಗಿದೆ. ಕಸ ಗುಡಿಸುವುದು, ನಗರದ ಬೀದಿಗಳಗಳನ್ನು ಸ್ವಚ್ಛಗೊಳಿಸುವುದೇ ಪ್ರಮುಖವಾದ ಕೆಲಸವಾಗಿದೆ. ಆದುದರಿಂದ ಮಹಿಳೆಯರ ಪ್ರಾಬಾಲ್ಯತೆ ಜಾಸ್ತಿ ಎದ್ದು ಕಾಣುತ್ತದೆ. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಪೌರಕಾರ್ಮಿಕರಾಗಿ ಕೆಲಸ ನಿರ್ವಹಿಸುವಂತವರನ್ನು ವಿಶ್ಲೇಷಿಸಿದಾಗ, 147 ಮಹಿಳಾ ಪೌರಕಾರ್ಮಿಕ ಕೆಲಸಗಾರರಲ್ಲಿ ಮಾಹಿತಿ ಸಂಗ್ರಹಣೆ ಮಾಡಿದಾಗ ಅವರ ಮಾಹಿತಿಯ ಪ್ರಕರ ಹೆಚ್ಚು ಆರೋಗ್ಯದ ಸಮಸ್ಯೆಗಳನ್ನು ಕಂಡು ಬಂದಿದೆ. ಆ ಮಾಹಿತಿಯ ಪ್ರಕಾರ ಸರಿಸುಮಾರು 98.64 ಶೇಕಡ ಮಹಿಳೆಯರು ವಿಪಾರೀತ ಮೈ ಕೈ ನೋವಿನಿಂದ ಬಳಲುತ್ತಿರುವುದು

ಕಂಡು ಬಂದಿದೆ. ಮಹಿಳಾ ಕಾರ್ಮಿಕರು ಹೇಳಿದ ಮಾಹಿತಿ ಪ್ರಕಾರ ಸರಿಸುಮಾರು ಏಳು ಎಂಟು ಗಂಟೆಗಳ ಕಾಲ ನಿಂತುಕೊಂಡು ಬಗ್ಗಿಕೊಂಡು ಕಸ ಗುಡಿಸುವುದರಿಂದ ವಿಪರೀತ ಸೊಂಟ, ಕೈ ಕಾಲು ಮತ್ತು ಮಂಡಿ ನೋವು ಕಾಣಿಸಿಕೊಳ್ಳುತ್ತದೆ, ಇದರಿಂದ ನೆಮ್ಮದಿಯಿಂದ ನಿದ್ರೆ ಮಾಡಲು ಸಾದ್ಯವಿಲ್ಲ ಎಂಬುದಾಗಿ ಕೆಲವರು ಹೇಳಿದರೆ, ಇನ್ನೂ ಕೆಲವರು ಸರಿಸುಮಾರು 89.89 ಶೇಕಡ ಜನರು ವಿಪರೀತ ಮಂಡಿ ನೋವಿನಿಂದ ಬಳಲುತ್ತಿದ್ದೇವೆ ಎಂಬುದಾಗಿ ಹೇಳಿರುತ್ತಾರೆ. ಕೊನೆಯದಾಗಿ ಸರಿಸುಮಾರು 69.39 ಶೇಕಡ ಜನರು ವಿಪರೀತ ಬೆನ್ನು ನೋವಿನಿಂದ ಬಳಲುತ್ತಿದ್ದೇವೆ ಎಂಬುದಾಗಿ ಹೇಳಿಕೊಂಡಿರುತ್ತಾರೆ.

- **ಪುರುಷರು ಎದುರಿಸುತ್ತಿರುವ ಆರೋಗ್ಯದ ಸಮಸ್ಯೆ:** ಪುರುಷರು ಕೂಡ ಹಲವಾರು ಬಗೆಯ ಅರೋಗ್ಯ ಸಮಸ್ಯೆಯನ್ನು ಎದುರಿಸುತ್ತಿರುವುದು ಕಂಡು ಬಂದಿದೆ. 153 ಪುರುಷ ಪೌರಕಾರ್ಮಿಕರಲ್ಲಿ ಸರಿಸುಮಾರು 96.73 ಶೇಕಡ ಪುರುಷರು ವಿಪರೀತ ಮೈ, ಕೈ ನೋವನ್ನು ಅನುಭವಿಸುತ್ತಿದ್ದೇವೆ ಎಂಬುದಾಗಿ ಹೇಳಿಕೊಂಡಿರುತ್ತಾರೆ. ಕೆಲವರು ಇದಕ್ಕೆ ಕಾರಣ ಹೇಳಿದ ಪ್ರಕಾರ ನಾವು ಮಾಡುವ ಕೆಲಸದಿಂದಾಗಿ ನಮಗೆ ಮೈ ಕೈ ನೋವು ಬರುತ್ತದೆ ಎಂಬುದಾಗಿ ಹೇಳಿಕೊಂಡಿರುತ್ತಾರೆ. ಪುರುಷರು ಹೇಳಿದ ಮತ್ತೊಂದು ಪ್ರಮುಖ ಆರೋಗ್ಯ ಸಮಸ್ಯೆ ಎಂದರೆ ಅಲರ್ಜಿ ಪುರುಷರು ಹೆಚ್ಚಾಗಿ ಚರಂಡಿ ಶುದ್ಧೀಕರಣದಲ್ಲಿ ನಿರತವಾಗಿ ತಮ್ಮನ್ನು ತೊಡಗಿಸಿಕೊಂಡಿರುವುದರಿಂದ ಚರ್ಮದ ಅಲರ್ಜಿಯಂತಹ ಖಾಯಿಲೆಗೆ ತುತ್ತಾಗುತ್ತಾರೆ. ಈ ಸಮಸ್ಯೆಯನ್ನು ಎದುರಿಸುವವರು ಶೇಕಡ 66 ರಷ್ಟಿದ್ದಾರೆ. ಇದಲ್ಲದೇ ಎದೆನೋವು ತಲೆನೋವು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಪುರುಷರು ಹೆಚ್ಚಾಗಿ ಮದ್ಯಪಾನ, ದೂಮಪಾನದಂತಹ ದುರಭ್ಯಾಸಕ್ಕೆ ಒಳಗಾಗಿರುವುದರಿಂದ ಅಸ್ತಮ, ಕ್ಷಯ ಮುಂತಾದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.
- **ಮಾಹಿತಿದಾರರ ಕುಟುಂಬದಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿರುವವರು:** ಆರೋಗ್ಯ ಸಮಸ್ಯೆಗೆ ಸರಿಯಾದ ರೀತಿಯ, ಸರಿಯಾದ ಸಮಯದಲ್ಲಿ ಮದ್ದನ್ನು ಮಡೆಯುತ್ತಾರೆಯೋ ಇಲ್ಲವೋ ಎಂಬುದಾಗಿ ಪಶ್ನಿಸಿದಾಗ ಹೆಚ್ಚಿನವರು ಹೌದು ನಾವು ಆಸ್ಪತ್ರೆಗೆ ಹೋಗಿ ಮದ್ದನ್ನು ಪಡೆಯುತ್ತೇವೆ ಎಂಬುದಾಗಿ ಹೇಳಿಕೊಂಡಿರುತ್ತಾರೆ. 153 ಪುರುಷ ಪೌರಕಾರ್ಮಿಕರಲ್ಲಿ ಹೆಚ್ಚಿನವರು ಅಂದರೆ ಸರಿಸುಮಾರು 103 ಜನ ಅಂದರೆ 67.32 ಶೇಕಡ ಪುರುಷ ಪೌರಕಾರ್ಮಿಕರು ಹೌದು ನಾವು ಸರಿಯಾದ ಸಮಯದಲ್ಲಿ ಸರಿಯಾದ ರೀತಿಯಲ್ಲಿ ಮದ್ದನ್ನು ಪಡೆಯುತ್ತೇವೆ ಎಂಬುದಾಗಿ ಉತ್ತರಿಸಿರುತ್ತಾರೆ. ಇದೇ ರೀತಿ 147 ಮಹಿಳಾ ಪೌರಕಾರ್ಮಿಕರಲ್ಲಿ ಹೆಚ್ಚಿನವರು 128 ಪೌರಕಾರ್ಮಿಕರಲ್ಲಿ ಮುಕ್ಕಾಲು ಭಾಗ 87.07 ಶೇಕಡ ಮಹಿಳೆಯರು ಹೌದು ನಾವು ಸರಿಯಾದ ಸಮಯದಲ್ಲಿ ಸರಿಯಾದ ರೀತಿಯ ಮದ್ದನ್ನು ಪಡೇಯುತ್ತೇವೆ ಎಂಬುದಾಗಿ ಉತ್ತರಿಸಿರುತ್ತಾರೆ. ಇನ್ನುಳಿದ ಕೆಲವೇ ಕೆಲವು ಜನ ಮಾತ್ರ ಇಲ್ಲ ನಾವು ಮದ್ದನ್ನು ಪಡೆಯಲು ಹೋಗುವುದಿಲ್ಲ, ಸ್ವಲ್ಪ ದಿನದಲ್ಲಿ ಜ್ವರ ಅಥವಾ ಬೆನ್ನು ನೋವು ಮತ್ತಿತ್ತರ ಖಾಯಿಲೆಗಳು ಅದರಷ್ಟಕ್ಕೆ ಕಡಿಮೆಯಾಗುತ್ತದೆ ಎಂಬುದಾಗಿ ತಿಳಿಸಿದ್ದಾರೆ.

- **ಪ್ರತಿ ತಿಂಗಳ ಔಷಧಿಗೆ ತಗಲುವ ವೆಚ್ಚ:** 300 ಜನರಲ್ಲಿ ಶೇಕಡ 21.3 ಮಾಹಿತಿದಾರರು 100 ರೂಪಾಯಿ ದವಾಖಾನೆಗೆ ಬೇಕು ಎಂದು ಹೇಳಿದರೆ, 25 ಶೇಕಡ ಮಾಹಿತಿದಾರರು ಸರಿಸುಮಾರು 100 ರಿಂದ 300 ಖರ್ಚು ಆಗುತ್ತದೆ ಎಂಬುದಾಗಿ ಉತ್ತರಿಸಿರುತ್ತಾರೆ. ಅದೇ ರೀತಿ ಹೆಚ್ಚಿನ ಸಂಖ್ಯೆಯಲ್ಲಿ 42.6 ಶೇಕಡ ಜನರು ನಾವು ದವಾಖಾನೆಗೆ ಮಾಡುವ ಖರ್ಚೇ ಜಾಸ್ತಿ, ಅಂದರೆ ಪ್ರತೀ ತಿಂಗಳು ಸರಿಸುಮಾರು 300 ರಿಂದ 500 ರೂಪಾಯಿ ಬರೇ ದವಾಖಾನೆಗೆ ಖರ್ಚು ಆಗುತ್ತದೆ ಎಂಬುದಾಗಿ ಹೇಳಿರುತ್ತಾರೆ. ಕೊನೆಯದಾಗಿ ಯಾರು ಕೆಲವೊಂದು ದೀರ್ಘಕಾಲದ ಸಮಸ್ಯೆಗಳಿಂದ ಬಳಲುತ್ತಿದ್ದಾರೆಯೋ ಅಂದರೆ ಬೆನ್ನು ನೋವು, ಸೊಂಟ ನೋವು ಅಥವಾ ಕೈ, ಕಾಲು ಊನ ಇಂತವರು ಪ್ರತೀ ತಿಂಗಳು ನಮಗೆ ಸರಿಸುಮಾರು 500 ರಿಂದ 800 ರೂಪಾಯಿಗಳು ಬರೇ ದವಾಖಾನೆಗೆ ಖರ್ಚು ಆಗುತ್ತದೆ ಎಂಬುದಾಗಿ ಹೇಳಿರುತ್ತಾರೆ. ಒಟ್ಟಾರೆಯಾಗಿ ಹೇಳುವುದಾದರೆ ಪೌರಕಾರ್ಮಿಕರ ಖರ್ಚಿನಲ್ಲಿ ದವಾಖಾನಗೆ ಮಾಡುವ ಖರ್ಚು ಒಂದು ದೊಡ್ಡ ಮಟ್ಟದ ಖರ್ಚು ಎಂಬುದಾಗಿ ಹೇಳಬಹುದು.

ಅನಾರೋಗ್ಯಕ್ಕೆ ಮೂಲ ಕಾರಣಗಳು

ದುರಭ್ಯಾಸ: ಪೌರಕಾರ್ಮಿಕರ ಆರೋಗ್ಯದ ಸ್ಥಿತಿಯು ಹದೆಗೆಡಲು ಅವರು ಹೊಂದಿರುವಂತಹ ಹಲವು ರೀತಿಯ ದುರಾಭ್ಯಾಸಗಳು ಕಾರಣವಾಗಿರುವುದು ಎದ್ದು ಕಾಣುತ್ತವೆ. ಪೌರಕಾರ್ಮಿಕರು ಮಧ್ಯಸೇವನೆ ಗುಟ್ಕ ಜಗಿಯುವುದು ಬೀಡಿ ಸಿಗರೇಟು ಸೇದುವುದು ಹಾಗೂ ವೀಳ್ಯದೆಲೆ ಹಾಕುವುದನ್ನು ಕಾಣಬಹುದಾಗಿದೆ. ಈ ರೀತಿಯ ದುರಾಭ್ಯಾಸಗಳಿಗೆ ತುತ್ತಾಗಲು ಪೌರಕಾರ್ಮಿಕರು ಮಾಡುವಂತಹ ಮಾಲಿನ್ಯಕಾರಕ ಕೆಲಸ ಕಾರ್ಯವು ನೇರವಾಗಿ ಕಾರಣವಾಗಿದೆ. ದುರಭ್ಯಾಸದ ಮಾಹಿತಿಯ ಅನ್ವಯ 300 ಮಾಹಿತಿದಾರರಲ್ಲಿ 12.7% ಕಾರ್ಮಿಕರು ಮಧ್ಯಪಾನ ಮಾಡುವುದಾಗಿ ತಿಳಿಸಿದ್ದಾರೆ, 1.3% ದೂಮಪಾನ ಮಾಡುವ ಹವ್ಯಾಸ ಇರುವುದಾಗಿ ತಿಳಿಸಿದ್ದಾರೆ, 9.3% ತಂಬಾಕು ಸೇವನೆ ಮಾಡುವುದಾಗಿ ತಿಳಿಸಿದ್ದಾರೆ, 26.7% ಗುಟ್ಕ ಜಗಿಯುವುದು ಮತ್ತು 37.7% ಕಾರ್ಮಿಕರು ತಿಳಿಸಿರುವ ಪ್ರಕಾರ ಎಲೆ ಅಡಿಕೆಯನ್ನು ಉಪಯೋಗಿಸುತ್ತಿದ್ದಾರೆ.

ಆರೋಗ್ಯದ ಸೌಲಭ್ಯಗಳು

ಮಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಪೌರಕಾರ್ಮಿಕರಿಗೆ ಒದಗಿಸಿರುವ ಆರೋಗ್ಯ ಸೌಲಭ್ಯದ ಕುರಿತಾಗಿ ವಿವರಿಸಲಾಗಿದೆ. ಇದರ ಪ್ರಕಾರ ಮಾಹಿತಿದಾರರು ತಿಳಿಸಿರುವಂತೆ ಕಾರ್ಮಿಕರಿಗೆ ಅವರು ಮಾಡುವ ವೃತ್ತಿಯಿಂದಾಗಿ ಆರೋಗ್ಯದ ಸಮಸ್ಯೆಗೆ ಒಳಗಾದ ಸಂದರ್ಭದಲ್ಲಿ ಧನಸಹಾಯ ಮಾಡುತ್ತಾರ ಎಂಬ ಪ್ರಶ್ನೆಗೆ 300 ಮಾಹಿತಿದಾರರಲ್ಲಿ 1 ಮಾಹಿತಿದಾರ ಮಾತ್ರ ಆ ಸೌಲಭ್ಯವನ್ನು ಪಡೆದಿರುವುದಾಗಿ ತಿಳಿಸಿದ್ದಾರೆ, ಪೌರಕಾರ್ಮಿಕರಿಗಾಗಿ ಮಂಗಳೂರು ಮಹಾನಗರ ಪಾಲಿಕೆಯು 3 ತಿಂಗಳಿಗೊಮ್ಮೆ ಉಚಿತ ಚಿಕಿತ್ಸಾ ಶಿಬಿರವನ್ನು ಏರ್ಪಡಿಸುತ್ತದೆ ಈ

ಸೌಲಭ್ಯವನ್ನು 46% ಮಾಹಿತಿದಾರರು ಪಡೆದಿರುವುದಾಗಿ ತಿಳಿಸಿದ್ದಾರೆ ಉಳಿದ ಮಾಹಿತಿದಾರರು ಹೇಳಿರುವ ಪ್ರಕಾರ ಆ ಸೌಲಭ್ಯದಿಂದ ನಮಗೆ ಯಾವುದೇ ರೀತಿಯ ಪ್ರಯೋಜನ ಆಗುವುದಿಲ್ಲ ಎಂಬುದಾಗಿ ತಿಳಿಸಿದ್ದಾರೆ, ಅದೇ ರೀತಿಯಲ್ಲಿ ಕೆಲಸದ ಸಂದರ್ಭದಲ್ಲಿ ಕಬ್ಬಿಣ ತಗುಲಿದರೆ ಚುಚ್ಚು ಮದ್ದಿನ ಸೌಲಭ್ಯವನ್ನು 4.3% ದಷ್ಟು ಜನ ಪಡೆದಿರುವುದಾಗಿ ತಿಳಿಸಿದ್ದಾರೆ. 300 ಮಾಹಿತಿದಾರರಲ್ಲಿ 147 (49%) ದಷ್ಟು ಜನರು ಯಾವುದೇ ಆರೋಗ್ಯದ ಸೌಲಭ್ಯವನ್ನು ಪಡೆದಿರುವುದಿಲ್ಲ ಎಂಬುದಾಗಿ ತಿಳಿಸಿದ್ದಾರೆ.

ಸರ್ಕಾರದ ಸೌಲಭ್ಯಗಳು

ನೈರ್ಮಲೀಕರಣದ ಕಾರ್ಯ ನಿರ್ವಹಣೆಗೆ ಮಹಾನಗರ ಪಾಲಿಕೆಯಿಂದ ನೀಡಲಾದ ಸುರಕ್ಷತಾ ಸಾಮಾಗ್ರಿಗಳು

ಪೌರಕಾರ್ಮಿಕರು ಮಾಡುವಂತಹ ಮಾಲಿನ್ಯಕಾರಕ ಕೆಲಸಗಳಾದ ರಸ್ತೆ ಬದಿ ಗುಡಿಸುವುದು, ಒಳಚರಂಡಿ ಶುದ್ಧೀಕರಣ, ಮದ್ದು ಸಿಂಪಡನೆ ಮುಂತಾದ ಆರೋಗ್ಯಕ್ಕೆ ಹಾನಿಯನ್ನು ಉಂಟುಮಾಡುವ ವೃತ್ತಿಯಲ್ಲಿ ತೊಡಗಿರುವುದರಿಂದ ಆ ವೃತ್ತಿಯಿಂದ ಆಗುವಂತಹ ವಿಪತ್ತುಗಳನ್ನು ತಡೆಗಟ್ಟುವ ಉದ್ದೇಶದಿಂದ ಮಂಗಳೂರು ಮಹಾನಗರ ಪಾಲಿಕೆಯು ಪೌರಕಾರ್ಮಿಕರಿಗೆ ಕೈಕವಚ, ಗಂಬೂಟ್, ಮೂಗಿಗೆ ಮಾಸ್ಕ್, ಚಪ್ಪಲಿಗಳಂತ ಸುರಕ್ಷಾ ಕವಚವನ್ನು ಒದಗಿಸಲಾಗುತ್ತಿದ್ದು ಅದರ ಉಪಯೋಗವನ್ನು ಪಡೆದುಕೊಂಡವರ ಕುರಿತು ಮಾಹಿತಿಯನ್ನು ಸಂಗ್ರಹಿಸಲಾಗಿದ್ದು.

- ಇದರ ಅನ್ವಯ ಕೈ ಕವಚವನ್ನು ಉಪಯೋಗಿಸಿದವರು 300 ಕಾರ್ಮಿಕರಲ್ಲಿ ಶೇಕಡಾ 63.3(190) ರಷ್ಟು ಇದ್ದಾರೆ, ಗಂಬೂಟ್ ಶೇಕಡಾ 36.3(109) ರಷ್ಟು ಕಾರ್ಮಿಕರು ಉಪಯೋಗಿಸಿದ್ದಾರೆ, ರಸ್ತೆ ಬದಿ ಗುಡಿಸುವಾಗ, ಒಳಚರಂಡಿ ಶುದ್ಧೀಕರಣ ಮಾಡುವಾಗ ಅದರ ದುರ್ವಾಸನೆಯಿಂದ ತಪ್ಪಿಸಲು ಮತ್ತು ಮದ್ದು ಸಿಂಪಡಿಸುವಾಗ ಅದರಿಂದ ಆಗುವ ಹಾನಿಯನ್ನು ತಡೆಯಲು ಮೂಗಿಗೆ ಮಾಸ್ಕನ್ನು ನೀಡಲಾಗಿದ್ದು ಅದರ ಉಪಯೋಗವನ್ನು ಪಡೆದವರು ಶೇಕಡ 52.7(158) ರಷ್ಟಿದ್ದಾರೆ. ಮಳೆಗಾಲದಲ್ಲಿ ಮಳೆ ರಕ್ಷಾಕವಚ ಸೌಲಭ್ಯವನ್ನು ಪಡೆದವರು ಶೇಕಡ 44.0(132) ರಷ್ಟಿದ್ದಾರೆ, 42.7 (128) ಶೇಕಡಾ ಕಾರ್ಮಿಕರು ಚಪ್ಪಲಿಯನ್ನು ಪಡೆದಿರುತ್ತಾರೆ, 39.7(119) ಮತ್ತು 48.7(146) ಶೇಕಡ ಕಾರ್ಮಿಕರು ಸೋಪು ಮತ್ತು ಸಮವಸ್ತ್ರವನ್ನು ಪಡೆದಿರುತ್ತಾರೆ.

ಆರೋಗ್ಯದ ಸೌಲಭ್ಯಗಳು

- ಮಂಗಳೂರು ಮಹಾನಗರ ಪಾಲಿಕೆಯು ಪೌರಕಾರ್ಮಿಕರ ಆರೋಗ್ಯದ ದೃಷ್ಟಿಕೋನದಿಂದ ವೈಧ್ಯಕೀಯ ಶಿಬಿರವನ್ನು 3 ತಿಂಗಳಿಗೊಮ್ಮೆ ಏರ್ಪಡಿಸಿದ್ದು ಅಲ್ಲಿ ಪೌರಕಾರ್ಮಿಕರಿಗೆ ಉಚಿತ ಚಿಕಿತ್ಸೆ, ಚುಚ್ಚುಮದ್ದನ್ನು ನೀಡಲಾಗುತ್ತದೆ. ಅದರ ಉಪಯೋಗವನ್ನು ಪಡೆದವರಲ್ಲಿ ಮಾಹಿತಿಯನ್ನು ಸಂಗ್ರಹಿಸಿದಾಗ ಅವರು ತಿಳಿಸಿದ ಪ್ರಕಾರ ೩೦೦ ಕಾರ್ಮಿಕರಲ್ಲಿ 46.3 ಶೇಕಡಾದಷ್ಟು ಕಾರ್ಮಿಕರು ಉಚಿತ ಚಿಕಿತ್ಸೆಯನ್ನು ಪಡೆದಿರುತ್ತಾರೆ ಎಂಬುದಾಗಿ ತಿಳಿದು ಬಂದಿದೆ. ಶೇಕಡಾ 4.3 ರಷ್ಟು ಕಾರ್ಮಿಕರು ಚುಚ್ಚು ಮದ್ದನ್ನು ಹಾಕಿಸಿಕೊಂಡಿದ್ದರೆ. 49 ಶೇಕಡಾದಷ್ಟು ಕಾರ್ಮಿಕರು ತಿಳಿಸಿರುವ ಪ್ರಕಾರ ಯಾವುದೇ ರೀತಿಯ ಆರೋಗ್ಯದ ಸೌಲಭ್ಯವನ್ನು ಪಡೆದುಕೊಂಡಿರುವುದಿಲ್ಲ.

ವೃತ್ತಿ ಸಂಬಂಧಿತ ಸೌಲಭ್ಯಗಳು

- ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಪೌರಕಾರ್ಮಿಕರಿಗೆ ಪಿ.ಎಫ್, ಇ.ಎಸ್.ಐ, ಎಲ್.ಐ.ಸಿ ಯನ್ನು ಮಾತೃತ್ವ ಭತ್ಯೆ ನೀಡಲಾಗಿದ್ದು ಈ ಸೌಲಭ್ಯಗಳ ಉಪಯೋಗವನ್ನು ಪಡೆದವರ ವಿವರವನ್ನು ನೀಡಲಾಗಿದೆ ಇದರ ಅನ್ವಯ ತಾತ್ಕಲಿಕ ಮತ್ತು ಗುತ್ತಿಗೆ ಕಾರ್ಮಿಕರಿಗೆ ಪಿ.ಎಫ್ ಮತ್ತು ಇ.ಎಸ್.ಐ ಸೌಲಭ್ಯವಿದ್ದು ಅದರಲ್ಲಿ ಪಿ.ಎಫ್ ಸೌಲಭ್ಯವನ್ನು ಶೇಕಡಾ 40(120) ಕಾರ್ಮಿಕರು ಪಡೆದಿರುವುದಾಗಿ ತಿಳಿಸಿದ್ದಾರೆ. ಗುತ್ತಿಗೆಯ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಇ.ಎಸ್.ಐ ಸೌಲಭ್ಯವನ್ನು ನೀಡಲಾಗಿದ್ದು 150 ಕಾರ್ಮಿಕರಲ್ಲಿ ಶೇಕಡಾ 21.7(65) ರಷ್ಟು ಕಾರ್ಮಿಕರು ಪಡೆಯುತ್ತಿದ್ದಾರೆ, ಇತ್ತೀಚಿಗೆ ಸೇರಿರುವ ನೌಕರರಿಗೆ ಇ.ಎಸ್.ಐ ಸೌಲಭ್ಯವನ್ನು ಇನ್ನು ನೀಡಬೇಕು ಎಂಬುದಾಗಿ ತಿಳಿಸಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಯಂ ಆಗಿ ಕಾರ್ಯ ನಿರ್ವಹಿಸುವ ಪೌರಕಾರ್ಮಿಕರಿಗೆ ಎಲ್.ಐ.ಸಿ ಸೌಲಭ್ಯವನ್ನು ನೀಡುತ್ತಿದ್ದು ಅದರ ಉಪಯೋಗವನ್ನು 32.3% ದಷ್ಟು ಕಾರ್ಮಿಕರು ಪಡೆದಿರುತ್ತಾರೆ. 5.7% ದಷ್ಟು ಪೌರಕಾರ್ಮಿಕರು ಹೇಳಿರುವ ಪ್ರಕಾರ ಅವರು ಯಾವುದೇ ರೀತಿಯ ಸೌಲಭ್ಯವನ್ನು ಪಡೆದಿರುವುದಿಲ್ಲ ಎಂಬುದಾಗಿ ತಿಳಿಸಿದ್ದಾರೆ.

ನೈರ್ಮಲೀಕರಣದ ಕಾರ್ಯನಿರ್ವಹಣೆಗೆ ನೀಡಲಾದ ಸುರಕ್ಷತಾ ಸಾಮಾಗ್ರಿಗಳ ಕುರಿತಾದ ಅಭಿಪ್ರಾಯ

ಸುರಕ್ಷತಾ ಸಾಮಾಗ್ರಿಗಳನ್ನು ಉಪಯೋಗಿಸಿದವರಲ್ಲಿ 14.3% ಪೌರಕಾರ್ಮಿಕರು ಹೆಚ್ಚು ಸುರಕ್ಷಿತವಾಗಿದೆ ಎಂಬುದಾಗಿ ತಿಳಿಸಿದರೆ ಇನ್ನು ಕೆಲವರು 44% ಮಾಹಿತಿದಾರರು ಸಾಧರಣ ಸುರಕ್ಷಿತವಾಗಿದೆ ಎಂಬುದಾಗಿ ತಿಳಿಸಿದ್ದಾರೆ. ಇನ್ನುಳಿದ 10% ಪೌರಕಾರ್ಮಿಕರು ಸುರಕ್ಷಿತವಾಗಿಲ್ಲ ಎಂಬುದಾಗಿ ಅಭಿಪ್ರಾಯ ಪಟ್ಟರೆ 31.7%

ಮಾಹಿತಿದಾರರು ಹೇಳಿದ ಪ್ರಕಾರ ತಾವು ಉಪಯೋಗಿಸಿಲ್ಲಎಂಬುದಾಗಿ ತಿಳಿಸಿದ್ದಾರೆ. ಇವರ ಅಭಿಪ್ರಾಯದಂತೆ ಸುರಕ್ಷಿತವಾಗಿಲ್ಲ ಎಂಬುದಾಗಿ ಹೇಳಿದವರಲ್ಲಿ ಕಾರಣವನ್ನು ಕೇಳಿದಾಗ ಸುರಕ್ಷಿತ ಸಾಮಾಗ್ರಿಗಳು ಕಳಪೆ ಮಟ್ಟದಾಗಿರುವುದರಿಂದ ಇದನ್ನು ಉಪಯೋಗಿಸಲು ಆಗುವುದಿಲ್ಲ, ಕೈಕವಚ ತೆಳುವಾಗಿರುವುದರಿಂದ ಒಂದು ಎರಡು ಬಾರಿ ಉಪಯೋಗಿಸಿದಾಗ ಹರಿದು ಹೋಗುತ್ತದೆ ಎಂಬುದಾಗಿ ತಿಳಿಸಿದ್ದಾರೆ. ಗಂಬೂಟಿನ ಕುರಿತಾಗಿ ಕೇಳಿದಾಗ ನಾವು ಚರಂಡಿಯ ಕೊಳಚೆ ನೀರಿನಲ್ಲಿ ಗಂಟೆಗಟ್ಟಲೆ ಕೆಲಸ ಮಾಡುವುದರಿಂದ ಬೂಟಿನ ಒಳಗೆ ಕೊಳಚೆ ನೀರು ಸೇರಿಕೊಂಡು ಅದರಿಂದ ಅಲರ್ಜಿ ಸಮಸ್ಯೆ ಉಂಟಾಗುತ್ತದೆ ಅದರಿಂದ ಅದನ್ನು ಉಪಯೊಗಿಸುವುದಿಲ್ಲ ಎಂಬುದಾಗಿ ತಿಳಿಸಿದ್ದಾರೆ. ರಸ್ತೆ ಬದಿ ಧೂಳು, ವಾಹನಗಳ ಹೊಗೆಯಿಂದ ರಕ್ಷಿಸಲು ಮಾಸ್ಕ್ ನೀಡಿದ್ದು ಅದನ್ನು ಹಾಕಿಕೊಂಡು ಕೆಲಸ ಮಾಡಲು ಆಗುವುದಿಲ್ಲ ತಿಳಿಸಿದ್ದಾರೆ. ಈ ರೀತಿಯಾಗಿ ಪೌರಕಾರ್ಮಿಕರು ತಮಗೆ ನೀಡುವ ಸುರಕ್ಷತಾ ಸಾಮಾಗ್ರಿಗಳ ಕುರಿತಾಗಿ ಅಭಿಪ್ರಾಯವನ್ನು ಪಟ್ಟಿರುತ್ತಾರೆ.

ಉಪಸಂಹಾರ

ಪೌರಕಾರ್ಮಿಕರು ಶತ-ಶತಮಾನಗಳಿಂದ ನಗರ ಪ್ರದೇಶದಲ್ಲಿ ನೈರ್ಮಲ್ಯದ ವೃತ್ತಿಗಳಾದ ಹಾದಿ- ಬೀದಿಗಳನ್ನು ಸ್ವಚ್ಛಗೊಳಿಸುವುದು, ಕೊಳಚೆಗಳನ್ನು ನಿರ್ಮೂಲನೆ ಮಾಡುವುದು, ಶೌಚಾಲಯಗಳನ್ನು ಪರಿಶುದ್ಧಗೊಳಿಸುವುದು ಹಾಗೂ ಸಾಂಪ್ರದಾಯಿಕವಾಗಿ ಸತ್ತ ಪ್ರಾಣಿಗಳನ್ನು ಊರಿಂದ ಹೊರಗೆ ಸಾಗಿಸುವ ವೃತ್ತಿಯವಲಂಬಿತರಾಗಿದ್ದಾರೆ. ಭಾರತದಲ್ಲಿ ಈ ವತ್ತಿಗಳನ್ನು ವರ್ಣ ಸಮಾಜದ ಕೊನೆಯ ಸ್ಥರದಲ್ಲಿರುವವರೆ ಸಕ್ರೀಯವಾಗಿ ಮಾಡುತ್ತಲೆ ಬಂದಿದ್ದಾರೆ. ಸಮಾಜದ ಎಲ್ಲಾ ಸಮುದಾಯಗಳು ಸಮಾಜದ ಮುಖ್ಯವಾಹಿನಿಗೆ ಬರಲು ಪ್ರಯತ್ನಿಸುತ್ತಿರುವ ಸಂದರ್ಭದಲ್ಲಿ ಇನ್ನೂ ಆರ್ಥಿಕವಾಗಿ ನೂರಾರು ಸಮಸ್ಯೆಗಳಲ್ಲಿ ಸಿಲುಕಿಕೊಂಡು ನರಳುತ್ತಿರುವುದನ್ನು ಕಾಣಬಹುದು. ಈ ವೃತ್ತಿ ಅವಲಂಬಿತ ಸಮುದಾಯದ ಜನರು ಮುಖ್ಯವಾಹಿನಿಯಿಂದ ಹೊರಗುಳಿದಿದ್ದು, ದೇಶದ ನೈರ್ಮಲ್ಯ ಸೇವೆಗಳನ್ನು ನಿರ್ವಹಿಸುವಲ್ಲಿ ಇನ್ನೂ ಪ್ರಧಾನ ಪಾತ್ರವನ್ನು ವಹಿಸುತಿದ್ದಾರೆ. ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ವ್ಯಕ್ತಿಯ ಅಂತಸ್ತು ವೃತ್ತಿ ಆಧಾರಿತವಾಗಿರುವುದರಿಂದ ಪೌರಕಾರ್ಮಿಕರ ಸ್ಥಿತಿ-ಗತಿಯು ಬಹಳ ಹಿಂದಿನಿಂದಲೂ ಕೆಳ ಹಂತದಲ್ಲಿದ್ದು ಸಾಮಾಜಿಕ ಬದುಕಿನಲ್ಲೂ ಹಿಂದುಳಿದಿದ್ದಾರೆ ಎಂಬುದನ್ನು ತಿಳಿಯಬಹುದಾಗಿದೆ. ಪೌರಕಾರ್ಮಿಕರು ಸಾಮಾಜಿಕವಾಗಿ ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಅವರ ಸ್ಥಿತಿ-ಗತಿ ತೀರ ಹಿಂದುಳಿದಿದ್ದು ಅವರು ಶಿಕ್ಷಣ ಸಮಾನತೆಯಿಂದ ಕೂಡ ವಂಚಿತರಾಗಿದ್ದಾರೆ. ಪೌರಕಾರ್ಮಿಕ ವೃತ್ತಿಜೀವನವು ವಂಶಪಾರಂಪರ್ಯವಾಗಿದ್ದು ತಮ್ಮ ಬದುಕಿನ ನಿರ್ವಹಣೆಗಾಗಿ ಸ್ವಚ್ಛತಾ ವೃತ್ತಿಯನ್ನೇ ಆಶ್ರಯಿಸಿದ್ದಾರೆ. ಪೌರಕಾರ್ಮಿಕರು ಅಜ್ಞಾನ, ಅನಕ್ಷರತೆ ಮೌಢ್ಯತೆ ಸುಳಿಯಲ್ಲಿ ಸಿಲುಕಿ ಸಮಾಜದಲ್ಲಿ ಕೆಳ ಅಂತಸ್ತನ್ನು ಹೊಂದಿರುವುದು ಒಂದೆಡೆಯಾದರೆ, ಇತರೆ ವರ್ಗದವರು ಸ್ವಚ್ಛತಾ ವೃತ್ತಿಯನ್ನು ಕೆಳಮಟ್ಟದ ವೃತ್ತಿಯೆಂದು ಪರಿಗಣಿಸಿ ಇವರನ್ನು ಸಾಮಾಜಿಕವಾಗಿ ವಂಚನೆಗೆ ಒಳಗಾಗುತ್ತಿದ್ದಾರೆ. ಪೌರಕಾರ್ಮಿಕರು ಶಿಕ್ಷಣವನ್ನು ಪಡೆಯುವಲ್ಲಿ

ಹಿಂದುಳಿದಿರುವುದರಿಂದ ಮತ್ತು ಅಗತ್ಯವಾದ ಸಾಕ್ಷರತಾ ಕೌಶಲ್ಯಗಳ ಕೊರತೆಯಿಂದಾಗಿ ವೇಗವಾಗಿ ಬೆಳೆಯುತ್ತಿರುವ ನಗರ ಪರಿಸರದಲ್ಲಿ ವಾಸಿಸುವುದರೊಂದಿಗೆ ಸಂಬಂಧಿಸಿದ ಉದ್ಯೋಗ ಚಲನಶೀಲತೆಯಲ್ಲಿ ಭಾಗವಹಿಸಲು ಇವರಿಗೆ ಕಷ್ಟಸಾಧ್ಯವಾಗಿದೆ. ಅವರ ಆರ್ಥಿಕ, ಸಾಮಾಜಿಕ ಸ್ಥಿತಿ ದಿನದಿಂದ ದಿನಕ್ಕೆ ಚಿಂತಾಜನಕವಾಗುತ್ತಿದೆ. ಯಾಕೆಂದರೆ ಪೌರಕಾರ್ಮಿಕರು ತಮ್ಮ ಜೀವನ ಮತ್ತು ಕೆಲಸದ ಪರಿಸ್ಥಿತಿಗಳನ್ನು ಗಮಸಿನಿದರೆ ಸುಧಾರಣೆ ಕಂಡು ಬರುವುದಿಲ್ಲ.

ಪೌರಕಾರ್ಮಿಕ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು ಭಾರತೀಯ ಸಮಾಜದ ಎಲ್ಲಾ ಮೂಲೆಗಳಲ್ಲೂ ಕಂಡು ಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವವರ ಪೌರಕಾರ್ಮಿಕರ ಸ್ಥಿತಿ ಕೂಡ ಅಷ್ಟೇ ಚಿಂತಾಜನಕವಾದದ್ದು. ಇವರ ಸ್ಥಿತಿಯಲೂ ಕೂಡ ಅಷ್ಟೊಂದು ಬದಲಾವಣೆ ಕಂಡು ಬರುವುದಿಲ್ಲ. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯ ನಿರ್ವಹಿಸುವ ಪೌರಕಾರ್ಮಿಕರ ಸಾಮಾಜಿಕ –ಆರ್ಥಿಕ ಸ್ಥಿತಿಗತಿಯನ್ನು ಪರಿಶೀಲಿಸಿದಾಗ ಅವರ ಸಾಮಾಜಿಕ – ಆರ್ಥಿಕ ಸ್ಥಾನಮಾನವು ಕೆಳಮಟ್ಟದಲ್ಲಿರುವುದು ಕಂಡು ಬಂದಿದೆ. ಇವರು ಮಾಡುವಂತಹ ವೃತ್ತಿಯಿಂದಾಗಿ ಸಾಮಾಜಿಕ ತಾರತಮ್ಯಕ್ಕೆ ಒಳಗಾಗುವುದರ ಜೊತೆಗೆ ಗುತ್ತಿಗೆ ದಾರರು ನೀಡುವ ಕಡಿಮೆ ಆದಾಯದಿಂದ ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡು ಬರುತ್ತದೆ. ಇದಕ್ಕಿಂತಲೂ ಪ್ರಮುಖವಾಗಿ ಮಂಗಳೂರು ಒಂದು ಅತೀ ದುಬಾರಿ ನಗರವೆನಿಸಿಕೊಂಡಿರುವುದರಿಂದ ಅತಿಯಾದ ಖರ್ಚುವೆಚ್ಚದಿಂದಾಗಿ ಇಲ್ಲಿನ ಪೌರಕಾರ್ಮಿಕರ ಆರ್ಥಿಕ ಸ್ಥಾನಮಾನವು ಅತ್ಯಂತ ಕೆಳಸ್ಥರದಲ್ಲಿದ್ದು ಕುಟುಂಬ ನಿರ್ವಹಣೆಯಲ್ಲಿಯೂ ಅತ್ಯಂತ ಸಮಸ್ಯೆಯನ್ನು ಎದುರಿಸುತ್ತಿರುವುದನ್ನು ಕಾಣಬಹುದು. ಪೌರಕಾರ್ಮಿಕರು ಶಿಕ್ಷಣದಿಂದ ವಂಚಿತರಾಗಿರಾಗಿದ್ದರು ತಮ್ಮ ಮಕ್ಕಳು ತಮ್ಮಂತೆ ಸಮಾಜದಲ್ಲಿ ಕೆಳಸ್ಥರದ ವೃತ್ತಿಯನ್ನು ಮಾಡದೆ ಉನ್ನತ ಶಿಕ್ಷಣವನ್ನು ಪಡೆದು ಉತ್ತಮ ಉದ್ಯೋಗವನ್ನು ಪಡೆಯಬೇಕೆಂಬ ಆಕಾಂಕ್ಷೆಯನ್ನು ಹೊಂದಿರುವುದು ಕಂಡುಬರುತ್ತದೆ. ಒಂದು ರಾಷ್ಟ್ರದ ಪ್ರಗತಿಯನ್ನು ಸಾಧಿಸಬೇಕಾದರೆ ಆರೋಗ್ಯವೂ ಕೂಡ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ದೇಶದ ಜನರ ಆರೋಗ್ಯ ಉತ್ತಮವಾಗಿದ್ದರೆ ಆ ರಾಷ್ಟ್ರದ ಅಭಿವೃದ್ಧಿ ದ್ವಿಗುಣಗೊಳ್ಳುವುದರ ಜೊತೆಗೆ ವ್ಯಕ್ತಿಯ ಉತ್ಪಾದನಾ ಸಾಮರ್ಥ್ಯವನ್ನು ಇಮ್ಮಡಿಗೊಳಿಸುವುದು ಹಾಗೂ ರಾಷ್ಟ್ರದ ಆರ್ಥಿಕ ಬದಲಾವಣೆಯ ದಿಕ್ಕನ್ನೆ ಬದಲಾಯಿಸುವುದು. ಈ ನಿಟ್ಟಿನಲ್ಲಿ ಮಹಾನಗರ ಪಾಲಿಕೆಯಲ್ಲಿ ಸ್ವಚ್ಛತಾ ವೃತ್ತಿಯಲ್ಲಿ ತೊಡಗಿರುವ ಪೌರಕಾರ್ಮಿಕರ ಆರೋಗ್ಯದ ಸ್ಥಿತಿ–ಗತಿಯ ಕಡೆ ಗಮನಹರಿಸಿದಾಗ ಹೆಚ್ಚಿನ ಪೌರಕಾರ್ಮಿಕರು ಮಧ್ಯವ್ಯಸನಿಗಳಾಗಿರುವುದರ ಜೊತೆಗೆ ತಂಬಾಕು ಜಗಿಯುವ ಹವ್ಯಾಸವನ್ನು ಬೆಳೆಸಿಕೊಂಡಿರುವುದರ ಈ ಹಿನ್ನೆಲೆಯಲ್ಲಿ ಜನತೆಯ ಆರೋಗ್ಯದ ಸ್ಥಿತಿ–ಗತಿ ಉತ್ತಮವಾಗಿಲ್ಲದೆ ಇರುವುದು ಈ ಅಧ್ಯಯನದಿಂದ ಕಂಡು ಬಂದಿದೆ ಜೊತೆಗೆ ಪ್ರತಿನಿತ್ಯ ಧೂಳು ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡುವುದರಲ್ಲಿ ತೊಡಗುವುದರಿಂದ ಅವರಿಗೆ ಹೃದಯ, ಉಸಿರಾಟ ಸಂಬಂಧಿ ಖಾಯಿಲೆ ಹಾಗೂ ಅಲರ್ಜಿ ಮುಂತಾದ ಖಾಯಿಲೆಗಳಿಂದ

ನರಳುತ್ತಿರುವುದು ಸಂಶೋಧನೆಯಿಂದ ದೃಢಪಟ್ಟಿದೆ. ಇದಕ್ಕೆ ಕಾರಣ ಪೌರಕಾರ್ಮಿಕರು ಸ್ವಚ್ಛತಾ ವೃತ್ತಿ ಮಾಡುವ ಸಂದರ್ಭದಲ್ಲಿ ಆರೋಗ್ಯ ರಕ್ಷಣಾ ಸಾಮಾಗ್ರಿಗಳಾದ ಗಮ್ ಬೂಟ್, ಮಾಸ್ಕ್‌ಗಳನ್ನು ಬಳಸದೆ ಬರಿಗೈಯಲ್ಲಿ ಸ್ವಚ್ಛತಾ ವೃತ್ತಿಯಲ್ಲಿ ತೊಡಗುವುದು ಜನತೆಯ ಆರೋಗ್ಯದ ಸ್ಥಿತಿ-ಗತಿ ಕೆಳಮಟ್ಟದಲ್ಲಿ ಕಂಡುಬರಲು ಮುಖ್ಯ ಕಾರಣವಾಗಿದೆ ಜೊತೆಗೆ ಉತ್ತಮವಾದ ವೈದ್ಯಕೀಯ ಚಿಕಿತ್ಸೆಯ ಕೊರತೆ ಆಧುನಿಕ ಸ್ವಚ್ಛತಾ ಯಂತ್ರೋಪಕರಣಗಳು ಹಾಗೂ ಆರೋಗ್ಯ ರಕ್ಷಣಾ ಸಾಮಾಗ್ರಿಗಳನ್ನು ಒದಗಿಸುವಲ್ಲಿ ಮಹಾನಗರ ಪಾಲಿಕೆಯು ವಿಫಲವಾಗಿರುವುದು ಸಹ ಅಧ್ಯಯನದಿಂದ ದೃಢಪಟ್ಟಿರುವ ಹಿನ್ನೆಲೆಯಲ್ಲಿ ಜನತೆಯ ಆರೋಗ್ಯದ ಸ್ಥಿತಿ-ಗತಿಯ ಸುಧಾರಣೆಯ ನಿಟ್ಟಿನಲ್ಲಿ ಮಹಾನಗರ ಪಾಲಿಕೆಯು ಪೌರಕಾರ್ಮಿಕರಿಗಾಗಿಯೇ ಆರೋಗ್ಯ ಘಟಕವನ್ನು ಸ್ಥಾಪಿಸಬೇಕು ಜೊತೆಗೆ ಅವರ ಕುಟುಂಬದವರಿಗೂ ಈ ವ್ಯವಸ್ಥೆಯನ್ನು ವಿಸ್ತರಿಸಿ ಉಚಿತ ಸೇವಾ ಸೌಲಭ್ಯವನ್ನು ಒದಗಿಸಬೇಕು. ಆ ಜನತೆಯಲ್ಲಿ ಆರೋಗ್ಯ ಸುಧಾರಣಾ ತಿಳುವಳಿಕೆ ಮೂಡಿಸಲು ಮೂರು ತಿಂಗಳಿಗೊಮ್ಮೆ ಆರೋಗ್ಯ ಸುಧಾರಣಾ ಕಾರ್ಯಕ್ರಮ ನಡೆಸುವುದರ ಜೊತೆಗೆ ಆಧುನಿಕ ಯಂತ್ರೋಪಕರಣಗಳು ಹಾಗೂ ಆರೋಗ್ಯ ರಕ್ಷಣಾ ಸಾಮಾಗ್ರಿಗಳನ್ನು ಒದಗಿಸಬೇಕು. ಇದರಿಂದಾಗಿ ಪೌರಕಾರ್ಮಿಕರ ಆರೋಗ್ಯ ಸುಧಾರಣೆಯಲ್ಲಿ ಯಶಸ್ಸುಕಾಣಲು ಸಾಧ್ಯ. ಅದೇರೀತಿಯಲ್ಲಿ ಪೌರಕಾರ್ಮಿಕರ ಅಭಿವೃದ್ಧಿಯ ಹಲವು ಯೊಜನೆಗಳ ಕೊರತೆ ಕೂಡ ಎದ್ದು ಕಾಣುತ್ತದೆ. ಅದಕ್ಕೋಸ್ಕರ ಅವರ ಈ ಎಲ್ಲಾ ಸವಲತ್ತುಗಳನ್ನು ನೀಡುವುದು ಅತ್ಯಗತ್ಯವಾಗಿದೆ. ಈ ನೆಲೆಯಲ್ಲಿ ಇತ್ತೀಚೆಗೆ ಪೌರಕಾರ್ಮಿಕರು ತಮ್ಮಲ್ಲಿ ಸಂಘಟನೆಯನ್ನು ಕಟ್ಟಿಕೊಂಡು ಅದರ ಮುಖಾಂತರ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಹಲವು ಪ್ರತಿಭಟನೆಗಳನ್ನು ನಡೆಸಿರುವುದು ಕಂಡು ಬಂದಿದೆ. ಇದಕ್ಕೆ ಪ್ರತಿಫಲವಾಗಿ ಕೆಲವೊಂದು ಸಮಸ್ಯೆಗಳು ಬಗೆಹರಿದರೆ ಇನ್ನೂ ಹಲವಾರು ಸಾಮಸ್ಯೆಗಳು ಇನ್ನೂ ಇದೆ ಎಂಬುದನ್ನು ಈ ಸಂಶೋಧನಾ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಸಲಹೆಗಳು

1. ಕೆಲಸಕ್ಕೆ ಸಂಬಂಧಪಟ್ಟ ಹಾಗೆ ಉತ್ತಮ ಗುಣಮಟ್ಟದ, ಅಗತ್ಯಪ್ರಮಾಣದ ರಕ್ಷಣಾ ಸಾಮಾಗ್ರಿಗಳನ್ನು ನೀಡುವುದು.
2. ಆರೋಗ್ಯ ಸಂಬಂಧಿ ಸವಲತ್ತುಗಳಾದಂತ ಉಚಿತ ಔಷದಿ, ಉಚಿತ ವಾರ್ಡ್ ವ್ಯವಸ್ಥೆ ಮುಂತಾದ ಸವಲತ್ತುಗಳನ್ನು ಸರಕಾರಿ ಆಸ್ಪತ್ರೆಗಳಲ್ಲಿ ಮಾತ್ರವಲ್ಲದೆ ಖಾಸಗಿ ಆಸ್ಪತ್ರೆಯಲ್ಲಿ ನುರಿತ ತಜ್ಞ ವೈದ್ಯರಿಂದ ಒದಗಿಸುವುದು ಹಾಗೂ ಪೌರಕಾರ್ಮಿಕರ ಕುಟುಂಬದವರಿಗೂ ಆರೋಗ್ಯದ ಸೌಲಭ್ಯವನ್ನು ಒದಗಿಸುವುದು.
3. ಆರೋಗ್ಯ ಮತ್ತು ದೇಹ ಸ್ವಚ್ಛತೆಯ ಕುರಿತು ಮಾಹಿತಿ ಶಿಬಿರವನ್ನು ನಡೆಸುವುದು.

4. ಪೌರಕಾರ್ಮಿಕರ ಆರೋಗ್ಯದ ಸುಧಾರಣಾ ನಿಟ್ಟಿನಲ್ಲಿ ಜನತೆಗೆ ವರ್ಷಕ್ಕೊಮ್ಮೆಯಾದರೂ ಕುಡಿತ, ಮಧ್ಯಪಾನ, ತಂಬಾಕು ಸೇವನೆಯಿಂದಾಗಿ ಉಂಟಾಗುವ ಖಾಯಿಲೆಗಳ ಬಗ್ಗೆ ಸೂಕ್ತ ರೀತಿಯ ತಿಳುವಳಿಕೆ ನೀಡಬೇಕು. ಸ್ವಚ್ಛತಾ ವೃತ್ತಿಯಲ್ಲಿ ತೊಡಗಿದ ಕಾರ್ಮಿಕರು ಕಡ್ಡಾಯವಾಗಿ ಸಮವಸ್ತ್ರ, ಮಾಸ್ಕ್ ಹಾಗೂ ಕೈಚೀಲಗಳನ್ನು ಉಪಯೋಗಿಸುವುದನ್ನು ಕಡ್ಡಾಯಗೊಳಿಸಬೇಕು.

5. ಖಾಯಂ ನೇಮಕಾತಿ ಹೊಂದಿರುವ ಪೌರಕಾರ್ಮಿಕರಿಗೆ ಸಿಗುವ ವೇತನವನ್ನೆ ಬದಲಿ ಮತ್ತು ಹೊರಗುತ್ತಿಗೆ ಕಾರ್ಮಿಕರಿಗೂ ನೀಡುವುದು

6. ನಿರ್ದಿಷ್ಟ ರಜಾದಿನವನ್ನು ಪರಿಸ್ಥಿತಿಗೆ ಅನುಗುಣವಾಗಿ ನಿಗದಿಸುವುದು. ಪ್ರಸೂತಿ ರಜೆ ಜೊತೆಗೆ ವೈದ್ಯಕೀಯ ಭತ್ಯೆಯನ್ನು ನೀಡುವುದು.

7. ಮಹಿಳಾ ಪೌರಕಾರ್ಮಿಕರಿಗೆ ವಾರ್ಡ್ ಕಛೇರಿಯಲ್ಲಿ ವಿಶ್ರಾಂತಿ ಕೊಠಡಿ ಮತ್ತು ಮೂಲಭೂತ ಅಗತ್ಯತೆಗಳನ್ನು ಒದಗಿಸುವುದು.

8. ಪೌರಕಾರ್ಮಿಕರಲ್ಲಿ ಶಿಕ್ಷಣದ ಅರಿವನ್ನು ಮೂಡಿಸುವ ದೃಷ್ಠಿಯಿಂದ ಪೌರಕಾರ್ಮಿಕರಿಗೆ ಪ್ರತ್ಯೇಕವಾದ ವಯಸ್ಕರ ಶಿಕ್ಷಣವನ್ನು ಜಾರಿಗೊಳಿಸಬೇಕು.ಜೊತೆಗೆ ಪೌರಕಾರ್ಮಿಕರ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಹಾಗೂ ಉನ್ನತ ಶಿಕ್ಷಣದವರೆವಿಗೂ ಉಚಿತ ಶಿಕ್ಷಣದ ಜೊತೆಗೆ ಹೆಚ್ಚಿನ ಅಂಕಗಳಿಸಿದ ಪ್ರತಿಭಾಶಾಲಿಗಳಿಗೆ ಪ್ರೊತ್ಸಾಹ ಧನ ನೀಡುವ ವ್ಯವಸ್ಥೆ ಕೈಗೊಳ್ಳಬೇಕು. ಪೌರಕಾರ್ಮಿಕರ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ನೀಡುವುದು.

9. ಗುತ್ತಿಗೆದಾರರು ಮಾಸಿಕ ವೇತನವನ್ನು 3 ತಿಂಗಳಿಗೆ ಅಥವಾ 4 ತಿಂಗಳಿಗೊಮ್ಮೆ ನೀಡಿ ಪೌರ ಕಾರ್ಮಿಕರನ್ನು ವಂಚಿಸದೆ ಮಾಸಿಕ ವೇತನವನ್ನು ತಿಂಗಳ ಕೊನೆಯ ವಾರದಲ್ಲಿ ನೀಡುವಂತೆ ಮಹಾನಗರ ಪಾಲಿಕೆಯು ಆದೇಶಿಸಬೇಕು.

10. ಪೌರಕಾರ್ಮಿಕ ವೃತ್ತಿಯು ಕೆಳದರ್ಜೆಯ ವೃತ್ತಿಯಾಗಿರುವುದರಿಂದ ಸರಕಾರವು ಈ ವೃತ್ತಿಯ ಬಗ್ಗೆ ಹೆಚ್ಚು ಕಾಳಜಿ ವಹಿಸಿ, ತಾಂತ್ರಿಕತೆಯನ್ನು ಉಪಯೋಗಿಸುವುದರ ಮುಖಾಂತರ ಆಧುನೀಕರಣಗೊಳಿಸಿ ವೃತ್ತಿಯಲ್ಲಿರುವ ತಾರತಮ್ಯವನ್ನು ತೊಡೆದು ಹಾಕುವಲ್ಲಿ ಸರಕಾರವು ಪ್ರಮುಖವಾದ ಪಾತ್ರವನ್ನು ವಹಿಸಬೇಕು.

ಆಕಾರ ಗ್ರಂಥ

Books:

1. Ambedkar,B.R. (1948). *The Untouchables: who were they and why they Became untouchables.* Jalandhar (India) Bheem Patrika Publications.
2. Anand ,Mulk Raj.(1935). *Untouchability*. New Delhi: Penguin Book India (p) Ltd.
3. Beteille,A.(1966).*Castes Old and New*. Bombay: Asia Publishing House.
4. Bhai, P.Nirmala. (1986). *Harijan Women in India*. New Delhi: B.R Publishing Corporation.
5. Dumont, Louis. (1972). *Homo Hierarchies: The Caste System and its implications.* Chicago: University of Chicago Press.
6. Ghanshamsha, Mander Harsha, Thorat Sukhadeo, Deshpande Sathish, Baviskar Amita. (2006). *Untouchability in Rural India.* New Delhi: Sage Publication India Pvt Ltd.
7. Ghurey, G.S. (1961). *Caste Class and Occupation.* Bombay: Popular Prakashan.
8. Moris, D, Morris. (1993).The Emergence of an Industrial Labour Force in India. Edited by Gupta, Dipankar. Social Stratification. Delhi: Oxford University Press.
9. N.J.Usha Rao.(1981).*Deprived Castes in India.* Allahabad India: CHUCH Publications.
10. Paswan, Sadananda. (2011).*Dalits and Practices of Untouchability.* New Delhi (India): Adhyayana Publishers and Distributers.
11. Pathak, Bindeshwar, (1991). "*Road to Freedom: A sociological study on the Abolition of scavenging in India.*Delhi:Motilal Banarsidas Publishers Private Limited.
12. Pathak, Bindeshwar. (1997). *Social Justice and Development of Weaker Sections*. New Delhi Inter-India Publications Limited.
13. Pais, Richard. (2004). *Scheduled Castes – A Study in Employment and Social Mobility*. Mangalore: Mangala Publications.
14. Poddar, Bhagirath. (2001).The Untouchables in Modern India. New Delhi: Sarpur and Sons.
15. Ramaswamy, Geetha. (2005).*India Stinking: Manual Scavengers in Andhra Pradesh and Their Work*. Pondicherry Chennai: Navayana Publishing.

16. Ranganayakamma, (2001).*For the Solution of the 'Caste' Question Buddha is not enough Ambedkar is not enough either, Marx is a must.* Hyderabad: Sweet Home Publications.
17. Sachidananda. (2001) *People at the Bottom: A Portrait of the Scavengers*. New Delhi: concept Publishing Co.
18. Selvathathan,S.(1989).*Status of Scheduled Castes*. New Delhi: Ashish Publishing House.
19. Srivastava,B.N.(1997). *Manual Scavenging a Disgrace to the Country*. New Delhi: Concept Publishing Company.
20. Shyamlal. (1984).*The Bhangis in Transition*. New Delhi: Inter-India Publications.
21. Singh, Bhasha. (2012).*Unseen: The truth about India's Manual Scavengers.* New Delhi: Penguin Books.
22. Singh, Munshi, Hardyal. (1990). *The Caste of Marwar (being)*.Jodhpur: Books Treasure.
23. W,Crooke, B.A.(1974). *Tribes and Castes of the North western India.* Delhi India: Cosmo Publications.

Edited Books:

24. A.C, Sinha. (1992). 'The Action Sociology in North-East India, *Action Sociology and Development,* in Edited by Pathak, Bindeshwar. New Delhi: Concept Publishing Company.
25. B.N, Srivastava. (1992). 'Rehabilitation of Liberated Scavengers', *Action Sociology and Development,* in Edited by Pathak, Bindeshwar. New Delhi: Concept Publishing Company.
26. Pathak, Bindeshwar. (Ed) (1992).*Action Sociology and Development*. New Delhi: Concept Publishing Company.
27. P.S, Choondawat. (1986). 'Untouchability and the Untouchable Youths: A study in Urban Context', in edited by R.G Singh. *The Depressed Classes of India.* New Delhi: BR Publishing Corporation.
28. Singh, Rajendra, Vasta. (1997).*The Depressed Classes of India*. Krishna Sondhi (Ed). New Delhi: Gitanjali Prakashan.

Journals:

29. B, Ravichandran. (2011). ‘Scavenging Profession: Between Class and Caste’. *Economic and Political Weekly.* Vol XLVI No 13 March.
30. B. Siddaraju. (2013). ‘Liberation and Rehabilitation of Manual Scavengers’. *International Journal of Research in Humanities, Arts and Literature* (IJRHAL). Vol 1, No 29-39 July.
31. G, Shaber, Ali. (2014). ‘Law and Policy to Deface Manual Scavenging’. Legal News and Views Vol 28, No 2, February.
32. *K*.M, Sathish Kumar. (2012).Health Implication of Pourakarmikas a Case Study of Bangalore Urban District. *Living Sociology Quarterly Journal.vol N*o1 October – December.
33. Kumar, Singh, Rajeev and Ziyauddin (2009).Manual scavenging as Social Exclusion: A case Study. *Economic Political Weekly.* Vol XLIV, NO 26&27. June.
34. Pais, Richarad. (2007). ‘Reservation and social Mobility a Caste Study of Scheduled castes’. *Social Science Gazetteer*. Vol 2-3, 2007-08
35. Patel, Amrit(2013) .Manual Scavengers a Question of Dignity. *Kurukshethra* Vol.64 No.3 January.
36. *S*athyaseelan, Samuel (2013). ‘Neglect of Sewage Workers Concerns about the New Act’. *Economic Political Weekly*. Vol XlVIII No 49 December 7.
37. Shahid, Mohd and Mishra Gyanendra (2013). ‘Eradicating Manual scavenging Deflections from District Badaun Model’*, Kurukshethra.Vol 64, No 3.*
38. Sharma, Behari, Giridhar. (1975).Law as an Instrument for Abolition of Untouchability Case of Rajasthan. *Economic Political Weekly.* Vol X, No 15, April.
39. Singh, J.P and Khan, M. (1999). ‘Hindu cosmology and the Orientation and Segregation of Social Group in Villages in North Western India’, *Geografiska Annaler, series B: human Geography*, Vol 81, and No 1.
40. Singla, Pamela. (1995). ‘Empowering the socio-Economically Disabled’. *Social Action*. Vol 45 No 1 March.
41. Tulika Tripathi (2012).Safai Karmi Scheme of Uttar Pradesh Caste Dominance Continues. *Economic and Political Weekly.* Vol XLVII No 37 September.

Reports:

42. Annual Report Ministry of Social Justice and Empowerment. Government of India. New Delhi, 2009-10.
43. Eleventh Five Year Plan (2007 -2012) volume -1 INCLUSIVE GROWTH Planning Commission Government of India. New Delhi: Oxford University Press.
44. L.M, Shrikant. Report of the Commissioner for scheduled Castes and Scheduled Tribe 1956-57 (Sixth Report).New Delhi: The Manager of Publications.
45. N.R Malkani (1955). Report of The Committee on Customary Rights to scavenging. Encyclopedia of Social Work in India –volume 2. The Planning Commission Government of India. Publications Divisions, India. December 1968.
46. N.R Malkani, (1957).Report of the Scavenging Conditions Enquiry committee. . Encyclopedia of Social Work in India –volume 2. The Planning Commission Government of India. Publications Divisions, India. December 1968.
47. Report of Manual Scavenging Conditions Committee 1961. New Delhi.
48. Report of the commissioner for Scheduled castes and Scheduled Tribe 1979-80 and 1980-81.
49. Aery,V.K. (2015).Born Into Bondage: Enforcing the human Rights of India. SSRN id2733388
50. Ankaiah,M. (2010). The status of Scheduled Caste in Andhra Pradesh : A case study of selected Districts in A.P(Doctoral thesis, Acharya University, Nagarjuna Nagar A.P). Retrieved from http://hd/handle.net/10603/8049.
51. Anil,T.(2016). Interrogating the Role of State and Understanding Social Mobility among Manual Scavengers in India. Social Action,66(3),277.
52. Bag,P. (2016). Bartan System. Socio-legal Dimensions of Unclean Occupation in Odisha. Social Action,66(3)305.

54. Baker,Fiona.(2008). Reduction of Manual Scavenging through the total Sanitation Campaign in Maradabad District, Effects on Social Inclusion. Retrieved from, www.kcci.org.in.

55. Bhimasha, J. (2015). Traditional Professional and live hood A study on Scavengers (Doctoral thesis, Gulbarga University). Retrieved from http://hd/handle.net/10603/48068.

56. Fernandes, D. (2016). Swacch Bharat Abhiyan and the Politics of Sanitation . Social Action , 66 (3), III.

57. Kumar, K., & Sasane, C. (2016). Right based Approach of Rehabilitation for Manual Scavenger Community: Towards a Holistic Model. Social Action , 66 (3), 291.

58. Meera. (2016). Swaccha Bharat and Don't Touch!: Struggles of Balmikis Uttar Pradesh. Social Action , 66 (3), 251.

59. Parmeshwara, N. (2013). The Role of BBMP in the Rehabilitation of Pourakarmikas in Karnataka special references to Bangalore City a Sociological Study (Doctoral thesis, Bangalore University, Bangalore) Retrieved

60. Ramanujam, R. (2016). Educational disadvantages of Children from Households Engaged in Historically 'Unclean occupation'. Social Action,66(3), 261.from http://hd/handle.net/10603/70243.

61. Raj, A. S. (2016). Caste based Social Exclusion of Manual Scavengers in India. Social Action , 66 (3), 235.

62. Shahare, V. B. (2016). Clean India Campaign and Prevailing Realities of Manual Scavengers. Social Action , 66 (3), 221.